ಪಶುಪಾಲನೆ ಮತ್ತು ಮ್ಯಾಸಬೇಡರ ಆರ್ಥಿಕತೆ

(ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕನ್ನು ಅನುಲಕ್ಷಿಸಿ)

(ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಎಂ.ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕರು

ಬೈರಪ್ಪರ ಏಕಾಂತಪ್ಪ

ನೋಂ ಸಂಖ್ಯೆ: ೧೬೦೧೧೨೦೩೦೦೩.೨

ಮಾರ್ಗದರ್ಶಕರು

ಡಾ. ಎ. ಎಸ್. ಪ್ರಭಾಕರ

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೬-೧೭

ಪಶುಪಾಲನೆ ಮತ್ತು ಮ್ಯಾಸಬೇಡರ ಆರ್ಥಿಕತೆ

(ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕನ್ನು ಅನುಲಕ್ಷಿಸಿ)

(ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕರು

ಬೈರಪ್ಪರ ಏಕಾಂತಪ್ಪ

ನೋಂ ಸಂಖ್ಯೆ: ೧೬೦೧೧೨೦೩೦೦೩೨

ಮಾರ್ಗದರ್ಶಕರು

ಡಾ. ಎ. ಎಸ್. ಪ್ರಭಾಕರ

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೬-೨೦೧೭

ಸಂಶೋಧಕರ ಪ್ರಮಾಣ ಪತ್ರ

ಪಶುಪಾಲನೆ ಮತ್ತು ಮ್ಯಾಸಬೇಡರ ಆರ್ಥಿಕತೆ (ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಅಡಿಯಲ್ಲಿ ಸಂಪ್ರಬಂಧವನ್ನು **ಡಾ. ಎ. ಎಸ್. ಪ್ರಭಾಕರ** ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ. ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 31/07/17

B. Ekantappa

(ಬೈರಪ್ಪರ ಏಕಾಂತಪ್ಪ)
ಸಂಶೋಧಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಬೈರಪ್ಪರ ಏಕಾಂತಪ್ಪ ಇವರು **ಪಶುಪಾಲನೆ ಮತ್ತು ಮ್ಯಾಸಬೇಡರ ಆರ್ಥಿಕತೆ** (ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 31/07/17

(ಡಾ. ಎ. ಎಸ್. ಪ್ರಭಾಕರ)

(ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು)

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ–೧ ಪ್ರಸ್ತಾವನೆ

೧.೧ ಅಧ್ಯಯನದ ಉದ್ದೇಶ
೧.೨ ಅಧ್ಯಯನದ ವ್ಯಾಪ್ತಿ
೧.೩ ಅಧ್ಯಯನ ವಿಧಾನ
೧.೪ ಅಧ್ಯಯನದ ಮಹತ್ವ
೧.೫ ಅಧ್ಯಾಯಗಳ ವಿನ್ಯಾಸ
೧.೬ ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ-೧

೧. ಪ್ರಸ್ತಾವನೆ

ಭೂಮಿಯ ಮೇಲೆ ಜೀವಿಸುವ ಪ್ರತಿಯೊಂದು ಜೀವಿಯೂ ತನ್ನ ಅಸ್ತಿತ್ವಕ್ಕಾಗಿ ನಿರಂತರವಾಗಿ ಹೋರಾಡುತ್ತಲೇಇರುತ್ತದೆ. ಅದಕ್ಕೆ ಮಾನವನು ಹೊರತಲ್ಲ. ಯಾವುದೇ ಜೀವಿಯಾಗಿರಲಿ, ಅದಕ್ಕೆ ಆಹಾರ, ನೀರು ಅವಶ್ಯಕವಾದದ್ದು. ಹೀಗಾಗಿಯೇ ನೀರು ಇರುವ ಸ್ಥಳದಲ್ಲಿಯೇ ನಾಗರೀಕತೆಗಳ ವಿಕಾಸವಾಗಿರುವುದನ್ನು ನೊಡಬಹುದಾಗಿದೆ. ಆದಿಮಾನವನ ಕಾಲದಿಂದಲೂ ಮಾನವನು ಆಯುಧಗಳನ್ನು ಬಳಸಿ ತನ್ನ ಆಹಾರಕ್ಕಾಗಿ ಬೇಟೆಯಾಡುತ್ತಿದ್ದನು ಎಂಬುದನ್ನು ಚರಿತ್ರೆಯ ಮೂಲಕ ತಿಳಿದಿದ್ದೇವೆ. ಹೀಗೆ ಬೇಟೆಯನ್ನೇ ಆಧರಿಸಿ ಜೀವನ ಮಾಡುತ್ತಿದ್ದ ಹಲವು ಸಮುದಾಯಗಳಲ್ಲಿ ಬೇಡಸಮುದಾಯವು ಒಂದು. ಬಹುತೇಕ ಸಮುದಾಯಗಳು ಈ ನೆಲದ ಮೂಲ ನಿವಾಸಿಗಳಾಗಿದ್ದು ಅವರು ಆಹಾರಕ್ಕಾಗಿ ಬೇಟೆಯನ್ನೇ ಆಶ್ರಯಿಸಿದ್ದರು. ಬೇಟೆಗಾರಿಕೆಯಿಂದ ಪ್ರಾರಂಭಗೊಂಡ ಮಾನವನ ನಾಗರೀಕತೆಯು ತರುವಾಯ ಪಶುಪಾಲನೆಯತ್ತ ಹೊರಳಿತು. ಪಶುಪಾಲನೆಯನ್ನು ಮೈಗೂಡಿಸಿಕೊಂಡ ಬೇಡ ಬುಡಕಟ್ಟು ತನ್ನ ಮೂಲ ವೃತ್ತಿಯಾದ ಬೇಟೆಗಾರಿಕೆಯ ಸಂಕೇತವಾಗಿ 'ಬೇಡ' ಎಂಬ ಪದವನ್ನು ಉಳಿಸಿಕೊಂಡಿದ್ದಾರೆ. ಪಶುಪಾಲನೆಯ ಮೇಯಿಸುವ ಚಟುವಟಿಕೆಯಿಂದ ಮೇಯಿಸ> ಮ್ಯಾಸವಾಗಿ ಉಳಿಯಿತು. ಮೇಯಿಸುವ ಚಟುವಟಿಕೆ ಮ್ಯಾಸ ಪದವನ್ನು ಪೂರ್ವ ಪದವಾಗಿಯೂ, ಪೂರ್ವದಿಂದ ಬಂದ ಬೇಟೆಗಾರಿಕೆಯ ಬೇಡ ಪದವನ್ನು ನಂತರ ಇರಿಸಿಕೊಂಡು ಮ್ಯಾಸ ಬೇಡ ಎನ್ನುವ ಕೂಡುಪದದಿಂದ ಇಂದು ಕರ್ನಾಟಕದ ಸಮುದಾಯವೊಂದಾಗಿ ಗುರುತಿಸಲ್ಪಡುತ್ತಿದೆ. ಇದನ್ನು ಮ್ಯಾಸ ಬೇಡ ಎಂದು ಕರೆಯಲಾಗುತ್ತಿದೆ.

ಬೇಡ ಸಮುದಾಯವು ಮೇಲ್ನೋಟಕ್ಕೆ ಒಂದೇ ಎಂದು ತೋರಿದರೂ ಅದರೊಳಗೆ ನಾನಾ ಒಳಪಂಗಡಗಳಿರುವುದು ಕಂಡುಬರುತ್ತದೆ. ಮುಖ್ಯವಾಗಿ ಊರುಬೇಡರು, ಮ್ಯಾಸಬೇಡರು, ಮೊಂಡಬೇಡರು ಎಂದು ನಾನಾ ಪಂಗಡಗಳು ಬೇಡ ಸಮುದಾಯದೊಳಗಿವೆ. ಇವುಗಳ ಬೆಡಗುಗಳಲ್ಲಿ ಅಂತಹ ವ್ಯತ್ಯಾಸಗಳು ಕಂಡುಬಾರದಿದ್ದರೂ ಆಚರಣೆ, ವೃತ್ತಿ, ದೈವ, ವಿಧಿ-ವಿಧಾನಗಳಲ್ಲಿ ಅಜಗಜಾಂತರ ಅಂತರವಿದೆ. ಮುಖ್ಯವಾಗಿ ಈ ಒಳಪಂಗಡಗಳಲ್ಲಿ ಪರಸ್ಪರ ರಕ್ತಸಂಬಂಧ ಬೆಸೆದುಕೊಳ್ಳುವುದಿಲ್ಲ.

ಪಶುಪಾಲನೆಯನ್ನೇ ಮೂಲವೃತ್ತಿಯಾಗಿಸಿಕೊಂಡಿರುವ ಹಲವಾರು ಸಮುದಾಯಗಳು ಕರ್ನಾಟಕದಲ್ಲಿ ಇಂದಿಗೂ ಕಂಡುಬರುತ್ತಿವೆ. ಗೊಲ್ಲ, ಕಾಡುಗೊಲ್ಲ, ಗೌಳಿ, ಕುರುಬ

ಮುಂತಾದವು ಪಶುಪಾಲನೆಯನ್ನವಲಂಭಿಸಿದ ಸಮುದಾಯಗಳಾಗಿವೆ. ಮ್ಯಾಸಬೇಡ ಸಮುದಾಯವು ಪ್ರಸ್ತುತ ಪಶುಪಾಲನೆಯನ್ನು ಮೂಲವೃತ್ತಿಯಾಗಿಸಿಕೊಳ್ಳದೇ ಹೋಗಿದ್ದರೂ ಅದರ ಆರಾಧನಾ ದೈವಗಳ ಹೆಸರಿನಲ್ಲಿ ಇಂದಿಗೂ ದನಗಳ ಹಟ್ಟಿ ಇವೆ. ದೇವರ ಹೆಸರಿನಲ್ಲಿ ಕಿಲಾರಿ ಎತ್ತುಗಳ ಗುಂಪುಗಳಿವೆ. ಮ್ಯಾಸಬೇಡರ ಸಾಂಸ್ಕೃತಿಕ ನಾಯಕರ ಹಬ್ಬ-ಆಚರಣೆಗಳಲ್ಲಿ ಇಂದಿಗೂ ದನಗಳಿಗೆ ಪ್ರಮುಖ ಸ್ಥಾನವಿದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಮ್ಯಾಸಬೇಡರ ವಿಶಿಷ್ಟ ಹಬ್ಬವಾದ ಗುಗ್ಗರಿ ಹಬ್ಬ. ಒಟ್ಟಾರೆಯಾಗಿ ತಮ್ಮ ಬದುಕಿನ ನಿರ್ವಹಣೆಗಾಗಿ ಮ್ಯಾಸ ಬೇಡರು ಇತರ ವೃತ್ತಿಗಳನ್ನು ಅವಲಂಭಿಸಿದ್ದರೂ ಆಚರಣೆಯ ಹಂತದಲ್ಲಿ ಇನ್ನೂ ಪಶುಪಾಲನೆಯನ್ನು ಮರೆತಿಲ್ಲ.

೧.೧ ಅಧ್ಯಯನದ ಉದ್ದೇಶ:

ಮ್ಯಾಸಬೇಡ ಸಮುದಾಯ ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಕೂಡ್ಲಿಗಿ ತಾಲೂಕುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಾರೆ. ಪ್ರಸ್ತುತ ಮ್ಯಾಸಬೇಡರ ಪಶುಪಾಲನೆ ಮತ್ತು ಆರ್ಥಿಕತೆಯ ಕುರಿತಾಗಿ ಈ ತಿಳಿಸುವ ಉದ್ದೇಶವನ್ನು ಈ ಅಧ್ಯಯನವು ಒಳಗೊಂಡಿದೆ. ಈ ಅಧ್ಯಯನದಲ್ಲಿ ಮುಖ್ಯವಾಗಿ ಮ್ಯಾಸಬೇಡರು ಇಂದಿಗೂ ಪಶುಪಾಲನೆಯನ್ನು ಎಷ್ಟರಮಟ್ಟಿಗೆ ಅವಲಂಭಿಸಿದ್ದಾರೆ ಎಂಬುದನ್ನು ತಿಳಿಯಬಹುದಾಗಿದೆ.

ಅಧ್ಯಯನದ ಉದ್ದೇಶಗಳು

೧. ಪಶುಪಾಲನೆಯನ್ನು ಮ್ಯಾಸಬೇಡರು ಆರ್ಥಿಕ ಮೂಲವಾಗಿ ಪರಿಗಣಿಸಿದ್ದಾರೆಯೇ ಎಂಬುದನ್ನು ತಿಳಿಯುವುದು.

೨. ಪಶುಪಾಲನೆಯ ಹೊರತಾಗಿ ಮ್ಯಾಸಬೇಡರ ಜೀವನ ನಿರ್ವಹಣೆಯ ಆರ್ಥಿಕ ಮೂಲ ಯಾವುದೆಂಬುದನ್ನು ಅರಿಯುವುದು.

೩. ಪ್ರಸ್ತುತ ಸಂದರ್ಭದಲ್ಲಿ ಮ್ಯಾಸಬೇಡರು ತಮ್ಮ ಮೂಲವೃತ್ತಿಗಳಾದ ಬೇಟೆಗಾರಿಕೆ ಮತ್ತು ಪಶುಪಾಲನೆ ವೃತ್ತಿಯಿಂದ ಸ್ಥಿತ್ಯಂತರಗೊಳ್ಳಲು ಇರುವ ಕಾರಣಗಳನ್ನು ಅರಿಯುವ ಉದ್ದೇಶಗಳನ್ನು ಒಳಗೊಂಡಿದೆ.

೧.೨ ಅಧ್ಯಯನದ ವ್ಯಾಪ್ತಿ :

ಮ್ಯಾಸಬೇಡರು ಕರ್ನಾಟಕದಲ್ಲಿ ಬೇರೆ ಬೇರೆ ಕಡೆ ಚದುರಿದಂತಿದೆಯಾದರೂ ಕರ್ನಾಟಕದ ಚಿತ್ರದುರ್ಗ, ಬಳ್ಳಾರಿ ರಾಯಚೂರು ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೆಲೆಸಿದ್ದಾರೆ. ಬಳ್ಳಾರಿ ಜಿಲ್ಲೆಯನ್ನು ನೋಡುವುದಾದರೆ, ವಿಶೇಷವಾಗಿ ಹೊಸಪೇಟೆ, ಕೂಡ್ಲಿಗಿ

ತಾಲೂಕಿನಲ್ಲಿ ಹೆಚ್ಚಾಗಿ ಮ್ಯಾಸಬೇಡರು ಕಂಡುಬರುತ್ತಾರೆ. ಅಧ್ಯಯನಗಳ ಕಾಲ ಮತ್ತು ಮಿತಿಗಳನ್ನು ಗಮನಿಸಿ ಕೇವಲ ಬಳ್ಳಾರಿ ಜಿಲ್ಲೆಯನ್ನು ಮಾತ್ರ ಒಳಪಡಿಸಿ ಜಿಲ್ಲೆಯ ಕೂಡ್ಲಿಗಿ ತಾಲೂಕಿಗೆ ಮಾತ್ರ ಈ ಅಧ್ಯಯನವನ್ನು ಸೀಮಿತಗೊಳಿಸಿಕೊಳ್ಳಲಾಗಿದೆ. ಕೂಡ್ಲಿಗಿ ತಾಲೂಕಿನಲ್ಲಿರುವ ಇಪ್ಪತ್ತು ಗ್ರಾಮಗಳಲ್ಲಿ ಗ್ರಾಮವೊಂದಕ್ಕೆ ಹತ್ತು ಕುಟುಂಬಗಳಂತೆ ಒಟ್ಟು ಎರಡು ನೂರು ಕುಟುಂಬಗಳನ್ನು ಮಾತ್ರ ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧.೩ ಅಧ್ಯಯನ ವಿಧಾನ:

ಪ್ರಸ್ತುತ ಅಧ್ಯಯನವನ್ನು ಮಾಡಲು ರ್‍ಯಾಂಡಮ್ (ಆಯ್ಕೆ) ವಿಧಾನವನ್ನು ಅನುಸರಿಸಿದ್ದು ಅಧ್ಯಯನವನ್ನು ನಡೆಸಲು ಚಾರಿತ್ರಿಕ, ಸಂಖ್ಯಾಶಾಸ್ತ್ರೀಯ, ಪ್ರಶ್ನಾವಳಿ ಹಾಗೂ ಸಂದರ್ಶನ ವಿಧಾನ, ಸಮೀಕ್ಷೆ ಹಾಗೂ ಸಹಭಾಗಿತ್ವ ವಿಧಾನಗಳನ್ನು ಅನುಸರಿಸಲಾಗಿದೆ. ಮಾಹಿತಿದಾರರನ್ನು ಸಂದರ್ಶನ ಮಾಡಲು ಅವಶ್ಯಕವಾದ ಪ್ರಶ್ನಾವಳಿ ಮಾದರಿಗಳನ್ನು ರೂಪಿಸಿಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ಮ್ಯಾಸಬೇಡರ ಕುರಿತು ಇಲ್ಲಿಯವರೆಗೆ ಪ್ರಕಟವಾಗಿರುವ ಕೃತಿಗಳು, ಅಧ್ಯಯನಗಳು, ಗೆಜೆಟಿಯರ್‌ಗಳು, ಪತ್ರಿಕೆಗಳು, ಬಿಡಿ ಲೇಖನಗಳು, ಜನಗಣತಿ ವರದಿ, ಮಾನವಾಭಿವೃದ್ಧಿ ವರದಿ, ಪರಿಶಿಷ್ಟ ಪಂಗಡಗಳ ಕುರಿತಾಗಿ ಬಂದಿರುವ ವರದಿ, ಆಯೋಗಗಳ ವರದಿಗಳು ಹಾಗೂ ಇತರ ಮೂಲಗಳಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನ ಇಪ್ಪತ್ತು ಗ್ರಾಮಗಳಲ್ಲಿ ಗ್ರಾಮವೊಂದಕ್ಕೆ ಹತ್ತು ಕುಟುಂಬಗಳಂತೆ ಒಟ್ಟು ೨೦೦ ಮ್ಯಾಸಬೇಡ ಕುಟುಂಬಗಳನ್ನು ಸಂದರ್ಶಿಸಿ ಮಾಹಿತಿಯನ್ನು ಕಲೆಹಾಕಲಾಗಿದೆ.

- **ಪ್ರಶ್ನಾವಳಿಯ ಮಾದರಿ:**

ಅಧ್ಯಯನದಲ್ಲಿ ಮ್ಯಾಸಬೇಡರ ಪಶುಪಾಲನಾ ವೃತ್ತಿ ಹಾಗೂ ಅವರ ಆರ್ಥಿಕತೆಯನ್ನು ಕುರಿತು ಮಾಹಿತಿ ಪಡೆಯುವುದು ಹಾಗೂ ಅವರ ಸ್ಥಿತಿಗತಿಗಳ ಕುರಿತು ಅರಿಯುವ ಉದ್ದೇಶದಿಂದ ಪ್ರಶ್ನಾವಳಿ ಮಾದರಿಗಳನ್ನು ತಯಾರಿಸಿಕೊಂಡು ಮಾಹಿತಿಯನ್ನು ಪಡೆಯಲಾಗಿದೆ. ಪ್ರಶ್ನಾವಳಿಯಲ್ಲಿ ಎರಡು ವಿಧದ ಪ್ರಶ್ನಾವಳಿಗಳನ್ನು ರೂಪಿಸಿಕೊಳ್ಳಲಾಗಿದೆ. ಮ್ಯಾಸಬೇಡ ಸಮುದಾಯದ ಸಮಗ್ರ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಬದುಕಿನ ಬಗೆಗೆ ಅಧ್ಯಯನಿಸಲಿಕ್ಕಾಗಿ ಒಂದು ಸವಿಸ್ತಾರವಾದ ಪ್ರಶ್ನಾವಳಿಯನ್ನು (Questionnaire) ರೂಪಿಸಿ ಸಂದರ್ಶನ ವಿಧಾನದ (Interview Methods) ಮುಖಾಂತರ ಸಮೀಕ್ಷೆ ನಡೆಸಲಾಗಿದೆ. ಮತ್ತೊಂದು ಅವರ ಜೀವನ ವಿಧಾನವನ್ನು ಅರಿಯಲು ರೂಪಿಸಿದ ಮಾದರಿ ಪ್ರಶ್ನಾವಳಿಯಾಗಿದೆ.

- **ಚಾರಿತ್ರಿಕ ವಿಧಾನ:**

ಮ್ಯಾಸಬೇಡರ ಮೂಲ ತಿಳಿಯುವ ಉದ್ದೇಶದಿಂದ ಚಾರಿತ್ರಿಕ ವಿಧಾನವನ್ನು ಅನುಸರಿಸಲಾಗಿದೆ. ಹಾಗೆಯೇ ಮ್ಯಾಸಬೇಡ ಸಮುದಾಯದ ಜನಸಂಖ್ಯೆಗೆ ಸಂಬಂಧಿಸಿದ ಪೂರ್ಣ ವಿವರಗಳು ದೊರೆಯುವುದು ಕಷ್ಟಸಾಧ್ಯದ ಕೆಲಸವಾಗಿದೆ. ಹೀಗಿದ್ದೂ ಕೂಡ್ಲಿಗಿ ತಾಲೂಕಿನ ಮ್ಯಾಸ ಬೇಡರ ಜನಸಂಖ್ಯೆ, ಸಮೀಕ್ಷೆಗೊಳಪಡಿಸಿದ ಕುಟುಂಬಗಳ ಜನಸಂಖ್ಯೆ ಇತ್ಯಾದಿಗಳನ್ನು ಅರಿಯಲು ಸಂಖ್ಯಾಶಾಸ್ತ್ರ ವಿಧಾನವನ್ನು ಅನುಸರಿಸಲಾಗಿದೆ.

- **ಸಹಭಾಗಿತ್ವ ವಿಧಾನ:**

ಮ್ಯಾಸಬೇಡರ ಜೀವನಶೈಲಿಯನ್ನು ಅರಿಯಲು ಹಾಗೂ ಅವರಲ್ಲಿ ಪ್ರಚಲಿತವಿರುವ ಗುಗ್ಗರಿ ಹಬ್ಬ ಮುಂತಾದ ಹಬ್ಬ, ಆಚರಣೆ, ನಂಬಿಕೆಗಳನ್ನು ಅರಿಯುವ ಉದ್ದೇಶದಿಂದ ಅವರ ಆಚರಣೆಗಳಲ್ಲಿ ಪಾಲ್ಗೊಂಡು ಮಾಹಿತಿಗಳನ್ನು ಪಡೆಯಲಾಗಿದೆ. ಹೀಗೆ ಒಟ್ಟಾರೆಯಾಗಿ ಎಲ್ಲಾ ಮೂಲಗಳಿಂದಲೂ ಮಾಹಿತಿ ಸಂಗ್ರಹಿಸಿ ಅವುಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

೧.೪ ಅಧ್ಯಯನದ ಮಹತ್ವ:

ಮ್ಯಾಸಬೇಡ ಸಮುದಾಯವನ್ನು ಕುರಿತು ಹಲವಾರು ಅಧ್ಯಯನಗಳು ನಡೆದಿವೆಯಾದರೂ ಇಲ್ಲಿಯವರೆಗೆ ಮ್ಯಾಸಬೇಡರ ಪಶುಪಾಲನೆಯಂತಹ ವೃತ್ತಿಯನ್ನು ಆರ್ಥಿಕ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಯಾವುದೇ ತರಹದ ಅಧ್ಯಯನಗಳು ನಡೆದಿರುವುದಿಲ್ಲ. ಹೀಗಾಗಿ ಮ್ಯಾಸಬೇಡರ ಪಶುಪಾಲನೆ ಮತ್ತು ಆರ್ಥಿಕತೆಯನ್ನು ಅರಿಯುವ ಪ್ರಯತ್ನದಲ್ಲಿ ಈ ಅಧ್ಯಯನವು ಮೊದಲ ಪ್ರಯತ್ನವಾಗಿದೆ. ಈ ಅಧ್ಯಯನದಿಂದ ಮ್ಯಾಸಬೇಡರ ಮೂಲವೃತ್ತಿ ಹಾಗೂ ಆರ್ಥಿಕ ಸ್ಥಿತ್ಯಂತರಗಳೊಂದಿಗೆ ಅವರ ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕವಾಗಿಯೂ ಹೇಗೆ ಬದಲಾವಣೆಗೆ ಒಳಗಾಗುತ್ತಿದ್ದಾರೆ ಎಂಬುದನ್ನು ಅರಿಯಬಹುದಾಗಿದೆ. ಮುಖ್ಯವಾಗಿ ಮ್ಯಾಸಬೇಡ ಬುಡಕಟ್ಟು ತನ್ನ ಮೂಲ ಪಾರಂಪರಿಕ ವೃತ್ತಿಗಳನ್ನು ಕಳಚಿಕೊಂಡು ವಿವಿಧ ಪಲ್ಲಟಗಳಿಗೆ ಒಳಗಾಗುತ್ತ ಆರ್ಥಿಕ ಹಾಗೂ ಸಾಮಾಜಿಕ ಅನುಸಂಧಾನಕ್ಕೆ ಒಳಗಾಗಿದೆ ಎಂಬುದು ತಿಳಿದುಬರುತ್ತದೆ. ಒಟ್ಟಾರೆಯಾಗಿ ಮ್ಯಾಸಬೇಡ ಸಮುದಾಯವು ಮೂಲವೃತ್ತಿಯೊಂದಿಗೆ ಪ್ರಸ್ತುತ ಆರ್ಥಿಕ ಕಾರಣಗಳಿಗಾಗಿ ಅವರು ತಮ್ಮ ಜೀವನ ಶೈಲಿಯನ್ನು ಹೇಗೆ ಬದಲಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಅರಿಯುವದರೊಂದಿಗೆ ಅವರು ಪ್ರಸ್ತುತ ದಿನಗಳಲ್ಲಿ ಎದುರಿಸುತ್ತಿರುವ

ಸಮಸ್ಯೆಯನ್ನು ಮತ್ತು ಅದಕ್ಕೆ ನಿವಾರಣೆಯನ್ನು ಕಂಡುಕೊಳ್ಳುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಅಧ್ಯಯನ ಸ್ವರೂಪ:

ಮೊದಲ ಅಧ್ಯಾಯ ಪ್ರಸ್ತಾವನೆಯಾಗಿದ್ದು ಅದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಅಧ್ಯಯನದ ವಿಧಾನ, ಮಹತ್ವ, ಅಧ್ಯಾಯಗಳ ವಿನ್ಯಾಸ, ಮ್ಯಾಸಬೇಡರ ಕುರಿತಾಗಿ ಇಲ್ಲಿಯವರೆಗೂ ನಡೆದ ಅಧ್ಯಯನಗಳ ಪ್ರಕಟಿತ, ಅಪ್ರಕಟಿತ ಕೃತಿಗಳ ಕುರಿತ ಅವಲೋಕನವಿದೆ.

ಎರಡನೇ ಅಧ್ಯಾಯವು ಭೌಗೋಳಿಕತೆ ಎಂದಿದ್ದು ಅದರಲ್ಲಿ ಬಳ್ಳಾರಿ ಜಿಲ್ಲೆಯ ಭೌಗೋಳಿಕತೆ, ಕುಟುಂಬ, ಜನಸಂಖ್ಯೆ, ಭೌಗೋಳಿಕ ವಿಸ್ತೀರ್ಣ, ಕೂಡ್ಲಿಗಿ ತಾಲೂಕನ್ನೊಳಗೊಂಡ ಭೌಗೋಳಿಕ ವಿಸ್ತೀರ್ಣದ ಜೊತೆಗೆ ಆರ್ಥಿಕ ಚಟುವಟಿಕೆಯ ವಿವರಗಳನ್ನು ತಿಳಿಸಲಾಗಿದೆ.

ಮೂರನೇ ಅಧ್ಯಾಯವು ಬೇಡನಾಯಕ ಸಮುದಾಯದ ಒಳಪಂಗಡಗಳ ಸ್ಥೂಲ ಪರಿಚಯವೆಂದಿದ್ದು ಅದರಲ್ಲಿ ಬೇಡನಾಯಕ ಸಮುದಾಯಗಳ ಇತರ ಪಂಗಡಗಳ ಪರಿಚಯದೊಂದಿಗೆ ಮ್ಯಾಸಬೇಡ ಸಮುದಾಯದ ಕುರಿತ ವಿವರಗಳಿವೆ.

ಅಧ್ಯಾಯ ನಾಲ್ಕರಲ್ಲಿ ಆರ್ಥಿಕತೆಯಲ್ಲಿ ಅಧ್ಯಯನಕ್ಕೆ ಆಯ್ದುಕೊಂಡ ಗ್ರಾಮಗಳ ಮ್ಯಾಸಬೇಡ ಕುಟುಂಬಗಳ ಕುಟುಂಬ ಹಾಗೂ ಜನಸಂಖ್ಯೆ, ವಯೋಗುಂಪು, ಶಿಕ್ಷಣ, ಕಾಯಕಾರ್ಹರ ವಿವರ, ಮ್ಯಾಸಬೇಡರ ಮೂಲ ಕಸುಬು, ಪಶುಪಾಲನೆ, ಪಶುಪಾಲನೆಗೆ ಹೊರತಾದ ಇತರ ವೃತ್ತಿಗಳ ಕುರಿತು ಅವಲೋಕನವಿದೆ.

ಕೊನೆಯಲ್ಲಿ ಸಮಾರೋಪವಿದ್ದು ಇದರಲ್ಲಿ ಅಧ್ಯಯನದಲ್ಲಿ ಕಂಡುಬಂದ ಫಲಿತಗಳು ಹಾಗೂ ಪರಿಹಾರೋಪಾಯಗಳನ್ನು ತಿಳಿಸಲಾಗಿದೆ. ಜೊತೆಗೆ ಅನುಬಂಧದಲ್ಲಿ ಪರಾಮರ್ಶನ ಗ್ರಂಥ, ವಕ್ತೃ ವಿವರ, ನಕ್ಷೆ, ಛಾಯಾಚಿತ್ರಗಳನ್ನು ನೀಡಲಾಗಿದೆ.

೧.೬ ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಬೇಡ ಸಮುದಾಯದ ಕುರಿತು ಸಾಕಷ್ಟು ಕೃತಿಗಳು ಕನ್ನಡದಲ್ಲಿ ಬಂದಿವೆ. ಆದರೆ ಬಹುತೇಕ ಕೃತಿಗಳು ಬೇಡರ ವಸ್ತುಸ್ಥಿತಿಯನ್ನು ಅರಿಯುವ ಪ್ರಯತ್ನ ಮಾಡದೆ ಕೇವಲ ಆ ಸಮುದಾಯವನ್ನು ವಿಜೃಂಭಿಸುವ ಕಡೆಗೇ ಹೆಚ್ಚಿನ ಲಕ್ಷ್ಯವನ್ನು ನೀಡಿವೆ. ಇಂಗ್ಲೀಷ್‌ನಲ್ಲಿಯೂ ಬೇಡ ಸಮುದಾಯದ ಕುರಿತು ಮಾಹಿತಿಗಳನ್ನು ತಿಳಿಸುವ ಕೃತಿಗಳು ಪ್ರಕಟಗೊಂಡಿವೆ. ಅವುಗಳು ಈ ಕೆಳಗಿನಂತಿವೆ

ಎಡ್ಗರ್ ಥರ್ಸ್ಟನ್ ರವರ 'ದ ಕಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯ' (೧೯೦೯) ಎನ್ನುವ ಕೃತಿಯಲ್ಲಿ ಬೇಡ ಸಮುದಾಯಗಳ ಪರಿಚಯವಿದೆ. ಮುಖ್ಯವಾಗಿ ಬೇಡ ಸಮುದಾಯದ ಮ್ಯಾಸ ಬೇಡ, ಊರು ಬೇಡ, ಮೊಂಡರುಗಳ ಕುರಿತ ಮಾಹಿತಿ ದೊರೆಯುತ್ತದೆ. ಈ ಪಂಗಡಗಳ ಬೆಡಗು, ಸಂಪ್ರದಾಯಗಳು, ಭಾಷೆ, ವೃತ್ತಿ, ವಾಸಿಸುವ ಸ್ಥಳ ಇತ್ಯಾದಿ ವಿವರಗಳು ದೊರೆಯುತ್ತವೆ.

ಸೈಯದ್ ಸಿರಾಜ್ ಉಲ್ ಹಸನ್‌ರವರ ದ ನಿಜಾಮ್ಸ್ ಡೋಮಿನಿಯನ್ಸ್ (೧೯೨೦)ಎನ್ನುವ ಕೃತಿಯಲ್ಲಿ ಹೈದರಾಬಾದ್ ಪ್ರಾಂತ್ಯದಲ್ಲಿ ಬರುವ ಬೇಡ ಸಮುದಾಯದ ರೀತಿ ನೀತಿಗಳು, ಜೀವನ ಕ್ರಮ, ರಾಜಕೀಯ ಸ್ವರೂಪಗಳ ಚಿತ್ರಣ ಕಂಡುಬರುತ್ತದೆ

ಎಚ್. ವಿ. ನಂಜುಂಡಯ್ಯ ಮತ್ತು ಎಲ್ ಕೆ ಎ ಅಯ್ಯರ್ ರವರ 'ದ ಮೈಸೂರ್ ಟ್ರೈಬ್ಸ್ ಅಂಡ್ ಕಾಸ್ಟ್' (೧೯೨೯) ಎನ್ನುವ ಕೃತಿಯಲ್ಲಿ ಮೈಸೂರು ಪ್ರಾಂತ್ಯದಲ್ಲಿ ನೆಲೆಸಿರುವ ಬೇಡ ಪಂಗಡಗಳು, ಅವರ ಮದುವೆ, ಸಾವು ಮುಂತಾದ ಜೀವನಾವರ್ತನ ಆಚರಣೆಗಳು, ದೇವರು, ಬೆಡಗು, ಜೀವನ ಕ್ರಮ, ಬೇಡ ಸಮುದಾಯದ ಮೂಲ ವೃತ್ತಿ ಇತ್ಯಾದಿ ವಿವರಗಳು ದೊರೆಯುತ್ತವೆ.

'ಚಿತ್ರದುರ್ಗ ಜಿಲ್ಲಾ ಗ್ಯಾಜಿಟೀರ್' ನಲ್ಲಿ ಆ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುವ ಬೇಡ ಸಮುದಾಯದ ಕುರಿತ ವಿವರಗಳೊಂದಿಗೆ ಚಿತ್ರದುರ್ಗವನ್ನು ಆಳಿದ ಬೇಡ ಸಮುದಾಯದ ಪಾಳೆಯಗಾರರ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ಕೊಡಲಾಗಿದೆ

ಆರ್ ರಾಜಣ್ಣ ಅವರ 'ನಾಯಕ ಜನಾಂಗದ ಇತಿಹಾಸ' (೧೯೮೨) ಎನ್ನುವ ಕೃತಿಯಲ್ಲಿ ಬೇಡರ ಮೂಲ ಪರಂಪರೆ, ಸಮುದಾಯದ ಪ್ರಾತಃ ಸ್ಮರಣೀಯರ ಕುರಿತ ಮಾಹಿತಿಗಳು ಕಂಡುಬರುತ್ತವೆ

ಎಂ ಜಿ ಈಶ್ವರಪ್ಪನವರ 'ಮ್ಯಾಸ ಬೇಡರು'(೧೯೮೨) ಕೃತಿಯಲ್ಲಿ ಮ್ಯಾಸ ಬೇಡರ ಹಟ್ಟಿಗಳು, ಅವರ ಬೆಡಗುಗಳು, ಜೀವನ ಕ್ರಮ, ಧಾರ್ಮಿಕ ಆಚರಣೆಗಳು, ದೈವಗಳು, ಜನಪದ, ವೇಷಭೂಷಣ ಮುಂತಾದ ವಿವರಗಳು ದೊರೆಯುತ್ತವೆ. ಈ ಕೃತಿ ಸಂಪೂರ್ಣವಾಗಿ ಮ್ಯಾಸ ಬೇಡರ ಕುರಿತು ಮಾಹಿತಿಯನ್ನು ನೀಡುತ್ತದೆ.

ಬಿ. ಎಸ್. ಶ್ರೀನಿವಾಸನಾಯಕರ 'ಚಿತ್ರದುರ್ಗದ ಕಾಮಗೇತಿ ಅರಸರು'(೧೯೮೪) ಕೃತಿಯಲ್ಲಿ ಚಿತ್ರದುರ್ಗವನ್ನಾಳಿದ ಕಾಮಗೇತಿ ಮನೆತನದ ಅರಸರ ಕುರಿತು ಮಾಹಿತಿ ದೊರೆಯುತ್ತದೆ

ಎಚ್ ವಿ ವೀರನಾಯಕರ 'ಕ್ಷಾತ್ರಾಂಶ ಪ್ರಭೇದ' (೧೯೮೭) ಕೃತಿಯಲ್ಲಿ ಬೇಡ ಸಮುದಾಯದ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಜೊತೆಗೆ ಆ ಸಮುದಾಯದ ಸ್ಥಿತಿಗತಿಗಳನ್ನು ಈ ಕೃತಿ ಪರಿಚಯಿಸುತ್ತದೆ.

ಲಕ್ಷ್ಮಣ ತೆಲಗಾವಿಯವರು ಸಂಪಾದಿಸಿದ 'ಹರತಿಯ ಸಿರಿ' ಎನ್ನುವ ಕೃತಿಯಲ್ಲಿ ಒಟ್ಟು ೯೮ ಲೇಖನಗಳನ್ನು ವಿವಿಧ ಲೇಖಕರು ಬರೆದಿದ್ದಾರೆ. ಈ ಲೇಖನಗಳಲ್ಲಿ ಬೇಡ ಸಮುದಾಯದ ಒಳ ಪಂಗಡಗಳು, ಅವರ ಆಚರಣೆ, ಜೀವನ ಕ್ರಮ ಮುಂತಾದ ವಿಷಯಗಳನ್ನು ತಿಳಿಸುವ ಲೇಖನಗಳನ್ನು ಕಾಣುತ್ತೇವೆ

ಕೃಷ್ಣಮೂರ್ತಿ ಹನೂರುರವರ 'ಮ್ಯಾಸಬೇಡರ ಸಂಸ್ಕೃತಿ'(೧೯೯೩) ಕೃತಿಯಲ್ಲಿ ಕರ್ನಾಟಕದ ಮ್ಯಾಸ ಬೇಡರ ಬೆಡಗುಗಳು, ಜೀವನ ಕ್ರಮ, ದೈವಗಳು, ಸಾಂಸ್ಕೃತಿಕ ವೀರರು, ಸಂಪ್ರದಾಯಗಳು, ನಂಬಿಕೆಗಳು, ಕಲೆ, ಭಾಷೆ, ಜನಪದ ಸಾಹಿತ್ಯ ಮುಂತಾದವುಗಳ ಕುರಿತು ಮಾಹಿತಿ ದೊರೆಯುತ್ತವೆ.

ಪ್ರಹ್ಲಾದ ಬೆಟಗೇರಿಯವರ 'ಅಡವಿ ಚೆಂಚರ ಸಂಸ್ಕೃತಿ' (೧೯೯೩) ಕೃತಿಯಲ್ಲಿಯೂ ಸಹ ಮ್ಯಾಸಬೇಡರ ಕುರಿತು ಪ್ರಾಸಂಗಿಕವಾಗಿ ಮಾಹಿತಿಗಳನ್ನು ನೀಡಿರುವುದು ಕಂಡುಬರುತ್ತದೆ

ಕರಿಶೆಟ್ಟಿ ರುದ್ರಪ್ಪನವರ 'ಮ್ಯಾಸನಾಯಕರು–ಒಂದು ಜನಾಂಗಿಕ ಅಧ್ಯಯನ' ಎಂಬ ಕೃತಿಯಲ್ಲಿ ಮ್ಯಾಸ ಬೇಡರ ಧಾರ್ಮಿಕ ಆಚರಣೆಗಳು, ಅವರ ಹಟ್ಟಿಗಳು, ಜೀವನ ಕ್ರಮ, ಸಾಂಸ್ಕೃತಿಕ ವೀರರು ಮುಂತಾದ ವಿಸ್ತೃತ ಮಾಹಿತಿಗಳು ಇವೆ

ವೀಣಾ ಎಂ ಪಿ ಯವರ 'ಮನೆ ಸಮಾಜ ಸಂಸ್ಕೃತಿ(೨೦೧೧)' ಎನ್ನುವ ಕೃತಿಯಲ್ಲಿ ಊರು ಬೇಡ ಮತ್ತು ಮ್ಯಾಸ ಬೇಡರ ಮನೆಗಳ ರಚನಾ ಕ್ರಮ, ಪರಿಸರ, ಸಂಸ್ಕೃತಿಗಳ ಪರಿಚಯವಿದೆ

ವಿರೂಪಾಕ್ಷಿ ಪೂಜಾರಹಳ್ಳಿಯವರ 'ಗಾದರಿಪಾಲ ನಾಯಕ' (೧೯೯೯) ಎನ್ನುವ ಕೃತಿಯಲ್ಲಿ ಬೇಡ ಬುಡಕಟ್ಟಿನ ಸಾಂಸ್ಕೃತಿಕ ವೀರನ ಹಿನ್ನೆಲೆ, ಜನಪದ ಕಥೆ ಮುಂತಾದ ವಿವರಣೆಗಳು ದೊರೆಯುತ್ತವೆ.

ಎ ಎಸ್ ಪ್ರಭಾಕರರು ಸಂಪಾದಿಸಿರುವ 'ಮ್ಯಾಸ ಬೇಡರ ಕಥನಗಳು' (೨೦೦೨) ಕೃತಿಯಲ್ಲಿ ಮ್ಯಾಸ ಬೇಡರ ಜನಪದ ಕಥನಗೀತೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ

ಮಂಜುನಾಥ ಬೇವಿನಕಟ್ಟಿ ಮತ್ತು ತಾರಿಹಳ್ಳಿ ಹನುಮಂತಪ್ಪ ಸಂಪಾದಿಸಿರುವ 'ವಾಲ್ಮೀಕಿ ಸಂಪದ' ಕೃತಿಯಲ್ಲಿ ವಿವಿಧ ಲೇಖಕರ ಒಟ್ಟು ೩೫ ಲೇಖನಗಳು ಕಂಡುಬರುತ್ತವೆ. ಇವುಗಳೆಲ್ಲ ಬಹುತೇಕ ಬೇಡನಾಯಕ ಸಮುದಾಯದ ಮಾಹಿತಿಯನ್ನು ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳ ವಿವರಗಳನ್ನು ನೀಡುವ ಲೇಖನಗಳು ಇವೆ. ಕರ್ನಾಟಕದ ಬೇಡ ಜನಾಂಗ, ಬೇಡಜನಾಂಗದ ಉಗಮ ಮತ್ತು ವಿಕಾಸ, ಬೇಡ ಬೆಡಗುಗಳ ಪ್ರಾಚೀನತೆ ಈ ಮಾದರಿಯ ಲೇಖನಗಳು ಈ ಕೃತಿಯಲ್ಲಿವೆ

ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ 'ಮೀರಸಾಬಿಹಳ್ಳಿ ಶಿವಣ್ಣನವರ ಮ್ಯಾಸ ಮಂಡಲ' (೨೦೦೩) ಎನ್ನುವ ವಿವಿಧ ಲೇಖನಗಳ ಸಂಗ್ರಹ ಕೃತಿ ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಬೇರೆ ಬೇರೆ ಲೇಖನಗಳೊಂದಿಗೆ ಮ್ಯಾಸ ನಾಯಕರ ಕುರಿತು ಮಾಹಿತಿ ನೀಡುವ ಲೇಖನಗಳೂ ಇವೆ

ವಿರೂಪಾಕ್ಷಿ ಪೂಜಾರಹಳ್ಳಿಯವರ 'ಬೇಟೆ ಮತ್ತು ಬೇಡರು' (೨೦೦೭) ಎನ್ನುವ ಕೃತಿಯು ಮುಖ್ಯವಾಗಿ ಮಧ್ಯಕಾಲೀನ ಕನ್ನಡದ ಕಾವ್ಯಗಳಲ್ಲಿ ನಿರೂಪಿತಗೊಂಡಿರುವ ಬೇಟೆ ಮತ್ತು ಬೇಡರ ಸಂಬಂಧಗಳನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಗಮನಿಸಲಾಗಿದೆ

ಹರ್ತಿಕೋಟೆ ವೀರೇಂದ್ರಸಿಂಹ ಮತ್ತು ಅಮರೇಶ ಯಾತಗಲ್ ರವರು ಸಂಪಾದಿಸಿರುವ 'ವಾಲ್ಮೀಕಿ ಮಂದಾರ'(೨೦೦೮) ಎನ್ನುವ ಸ್ಮರಣ ಸಂಪುಟ ಕೃತಿಯಲ್ಲಿ ಕರ್ನಾಟಕ ನಾಯಕ ಪಾಳೆಯಗಾರರ ಇತಿಹಾಸ -ಸಮಸ್ಯೆ ಸವಾಲುಗಳು, ರಾಷ್ಟ್ರ ಸೇವೆಯಲ್ಲಿ ನಾಯಕ ಜನಾಂಗ, ಹಲಗಲಿ ಬೇಡರು, ಮೊಂಡ ಬೇಡರು, ನಾಯಕ ಜನಾಂಗ ಒಂದು ಪಕ್ಷಿನೋಟ ಮುಂತಾದ ೪೩ ಲೇಖನಗಳಿದ್ದು ಅವೆಲ್ಲವೂ ನಾಯಕ ಸಮುದಾಯ ಹಾಗೂ ಆ ಸಮುದಾಯಕ್ಕೆ ಸೇರಿದವರ ವಿವರಗಳನ್ನೊಳಗೊಂಡಿವೆ

ವಿರೂಪಾಕ್ಷಿ ಪೂಜಾರಹಳ್ಳಿಯವರ 'ವಾಲ್ಮೀಕಿ ಸಿರಿ' (೨೦೦೬) ಎನ್ನುವ ಸಂಪಾದಿತ ಕೃತಿಯಲ್ಲಿ ಒಟ್ಟು ೩೮ ಲೇಖನಗಳನ್ನು ವಿವಿಧ ಲೇಖಕರು ಬರೆದಿದ್ದಾರೆ. ನಾಯಕ ಜನಾಂಗದಲ್ಲಿ ಸಂಪ್ರದಾಯಗಳು ಕರ್ನಾಟಕ ರಾಜ್ಯದಲ್ಲಿ ನಾಯಕರ ಅಭಿವೃದ್ಧಿ ಹೇಗೆ ಸಾಧ್ಯ, ನಾಯಕ ಜನಾಂಗದ ಮೌಖಿಕ ಕಾವ್ಯಗಳು, ಬೇಡರಲ್ಲಿ ಧಾರ್ಮಿಕ ಸಂಪ್ರದಾಯಗಳು ಮುಂತಾದ

ಲೇಖನಗಳಿವೆ. ಹಾಗೆ ಬೇಡ ಸಮುದಾಯಕ್ಕೆ ಸೇರಿದ ವ್ಯಕ್ತಿಗಳ ಕುರಿತ ಲೇಖನಗಳನ್ನು ಈ ಕೃತಿಯಲ್ಲಿ ಕಾಣುತ್ತೇವೆ.

ವಿರೂಪಾಕ್ಷಿ ಪೂಜಾರಹಳ್ಳಿಯವರ 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು' (೨೦೦೨) ಎನ್ನುವ ಕೃತಿಯಲ್ಲಿ ಮುಖ್ಯವಾಗಿ ಬೇಡ ಬುಡಕಟ್ಟಿಗೆ ಸಂಬಂಧಿಸಿದ ಸಾಂಸ್ಕೃತಿಕ ವೀರರ ಚಿತ್ರಣವಿದೆ. ಬೇಡ ಬುಡಕಟ್ಟು ಸಮುದಾಯದ ಪರಿಚಯ, ಬೇಡ ನಾಯಕ ವೀರರ ಆರಾಧನಾ ಕ್ಷೇತ್ರಗಳು, ಮ್ಯಾಸ ನಾಯಕ ಪರಂಪರೆಯಲ್ಲಿ ಬುಡಕಟ್ಟು ವೀರರಾದ ಯರಮಂಚಿನಾಯಕ, ಗಾದರಿಪಾಲ ನಾಯಕ, ಜಗಳೂರು ಪಾಪನಾಯಕ, ಯರಗಾಟನಾಯಕ, ಕೊಡಗಲು ಬೊಮ್ಮಯ್ಯ, ಗಾಜನಾಯಕ, ದಡ್ಡಿ ಸೂರನಾಯಕ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಪೆದ್ದಯ್ಯ, ಗೋಣೆಯ್ಯ ಮುಂತಾದವರೊಂದಿಗೆ ಆಧುನಿಕ ನಾಯಕ ಸಮುದಾಯದ ಮುಖಂಡರನ್ನು ಪರಿಚಯಿಸುವ ಲೇಖನಗಳೂ ಕಂಡುಬರುತ್ತವೆ.

ವಿರೂಪಾಕ್ಷಿ ಪೂಜಾರಹಳ್ಳಿಯವರ 'ವಾಲ್ಮೀಕಿ ಸಮುದಾಯದ ಪ್ರಾತಃಸ್ಮರಣೀಯರು' (೨೦೦೬) ಎನ್ನುವ ಸಂಪಾದಿತ ಕೃತಿಯಲ್ಲಿ ಒಟ್ಟು ೪೧ ಲೇಖನಗಳನ್ನು ವಿವಿಧ ಲೇಖಕರು ಬರೆದಿದ್ದಾರೆ. ಈ ಕೃತಿಯಲ್ಲಿ ಗುಹಾ, ವಾಲ್ಮೀಕಿ, ಶಬರಿ, ಧರ್ಮವ್ಯಾಧ, ಏಕಲವ್ಯ, ಬೇಡರಕಣ್ಣಪ್ಪ ನಂತಹ ಪೌರಾಣಿಕ ವ್ಯಕ್ತಿಗಳ ಕುರಿತು ಮಾಹಿತಿ ನೀಡಲಾಗಿದೆ ಹಾಗೇ ಕುಮಾರರಾಮ, ಕನಕದಾಸ, ಎಚ್ಚೆಮನಾಯಕನಂತಹ ಹಲವಾರು ಚಾರಿತ್ರಿಕ ವ್ಯಕ್ತಿಗಳ ಕುರಿತೂ ಮಾಹಿತಿ ಲೇಖನಗಳಿವೆ ಹಾಗೇ ಪಾಟೀಲ ಪಾಪನಾಯಕ, ಹರತಿ ವೀರನಾಯಕ, ಮಲೆಸಿದ್ದಪ್ಪ, ಸಿಜಿಕೆ ಮುಂತಾದ ಆಧುನಿಕ ವ್ಯಕ್ತಿಗಳ ಕುರಿತೂ ಸಹ ಮಾಹಿತಿಗಳಿವೆ. ಇದೊಂದು ವ್ಯಕ್ತಿ ಚಿತ್ರಗಳನ್ನು ಕಟ್ಟಿಕೊಡುವ ಲೇಖನಗಳಾಗಿವೆ

ಡಿ ಎನ್ ಯೋಗೇಶ್ವರಪ್ಪನವರ ಹಾಗಲವಾಡಿ ನಾಯಕರು (೧೯೯೯) ಒಂದು ಚಾರಿತ್ರಿಕ ಮಾಹಿತಿಯನ್ನು ನೀಡುವ ಕೃತಿಯಾಗಿದ್ದು ಹಾಗಲವಾಡಿಯನ್ನು ಬೇಡ ಸಮುದಾಯದ ವ್ಯಕ್ತಿಗಳು ಆಳಿದರು ಎಂಬ ಮಾಹಿತಿಯನ್ನು ನೀಡುತ್ತದೆ.

ಹರ್ತಿಕೋಟೆ ವೀರೇಂದ್ರಸಿಂಹ ಹಾಗೂ ತೇಜಸ್ವಿ ಕಟ್ಟಿಮನಿಯವರು ಸಂಪಾದಿಸಿದ 'ಘಟ್ಟಿ ಹೊಸಹಳ್ಳಿ ಗಟ್ಟಿಗ'(ಸಿ ಮಲೆಸಿದ್ದಪ್ಪನವರ ಸ್ಮರಣ ಸಂಪುಟ)೨೦೦೨ ದಲ್ಲಿ ಒಟ್ಟು ಮೂರು ಭಾಗಗಳಿದ್ದು ಮೊದಲ ಭಾಗದಲ್ಲಿ ಚರಿತ್ರೆ-ಸಾಹಿತ್ಯ-ಸಂಸ್ಕೃತಿ ಎಂದಿದ್ದು ಇದರಲ್ಲಿ ವಿವಿಧ ಲೇಖಕರು ಬೇಡ ಸಮುದಾಯದ ಕುರಿತು ವಿವಿಧ ಲೇಖನಗಳನ್ನು ಬರೆದಿದ್ದಾರೆ. ಎರಡನೇ ಭಾಗದಲ್ಲಿ ಸಮಾಜವಾದಿ ಚಿಂತನೆ ಮತ್ತು ಹೋರಾಟ, ಮೂರನೇ ಭಾಗದಲ್ಲಿ ಮಲೆಸಿದ್ದಪ್ಪ:

ಜೀವನ- ಸಾಧನೆ ಎಂದಿದ್ದು ಇವುಗಳಲ್ಲಿ ಅವರ ವೈಯಕ್ತಕ ಬದುಕಿನ ಆಯಾಮಗಳ ಕುರಿತು ವಿವಿಧ ಲೇಖನಗಳು ಕಂಡುಬರುತ್ತವೆ

ವಿರೂಪಾಕ್ಷಿ ಪೂಜಾರಹಳ್ಳಿಯವರ 'ಚಿನ್ನಹಗರಿ ಸಿರಿ'(೨೦೦೬) ಎನ್ನುವ ಕೃತಿಯಲ್ಲಿ ಒಟ್ಟು ೪೮ ವಿವಿಧ ವಿಷಯಗಳನ್ನೊಳಗೊಂಡ ಲೇಖನಗಳು ಇವೆ. ಇವುಗಳಲ್ಲಿ ನಾಯಕ ಸಮುದಾಯ ಶತಮಾನದ ಹಿನ್ನೋಟ, ಮ್ಯಾಸ ಬ್ಯಾಡ್ಕಿ ನಾಯಕತನಕ್ಕೆ ಸಂಬಂಧಿಸಿದ ತಾಮ್ರಶಾಸನ ಶೋಧನೆ ಮುಂತಾದ ಕೆಲವು ಲೇಖನಗಳು ಬೇಡನಾಯಕ ಸಮುದಾಯದ ಕುರಿತು ಮಾಹಿತಿಯನ್ನು ನೀಡುತ್ತವೆ

ಲಕ್ಷ್ಮಣ್ ತೆಲಗಾವಿಯವರ 'ಎಪ್ಪತ್ತೇಳು ಪಾಳಯಗಾರರು' ಎನ್ನುವ ಕೃತಿಯಲ್ಲಿ ಆರು ವಿಭಾಗಗಳಿದ್ದು ದಕ್ಷಿಣ ಭಾರತದ ಪಾಳೆಯಗಾರರೊಂದಿಗೆ ಕರ್ನಾಟಕದ ಪಾಳೆಯಗಾರರ ಕುರಿತು ವಿವರಣೆಗಳಿವೆ. ಮುಖ್ಯವಾಗಿ ವಿಜಯನಗರ ಸಿಂಹಾಸನಕ್ಕೆ ಸಾಮಂತರಾಗಿದ್ದು ರಕ್ಕಸತಂಗಡಗಿಯ ನಿರ್ಣಾಯಕ ಯುದ್ಧದಲ್ಲಿ ವಿಜಯನಗರದ ಪರವಾಗಿ ಹೋರಾಡಿದ ೭೭ ಸಂಸ್ಥಾನಿಕ ಪಾಳೆಯಗಾರರ ವಿವರಗಳನ್ನು ಈ ಕೃತಿ ಒಳಗೊಂಡಿದೆ.

ವಿರೂಪಾಕ್ಷಿ ಪೂಜಾರಹಳ್ಳಿಯವರ 'ಕಾಮಗೇತಿ ವಂಶಜರ ಚರಿತ್ರೆ' (೨೦೦೬) ಬೇಡನಾಯಕ ಬುಡಕಟ್ಟಿನ ಸಾಂಸ್ಕೃತಿಕ ಚರಿತ್ರೆ, ಬೇಡನಾಯಕ ಕಟ್ಟೆಮನೆಗಳ ಸ್ಥಾಪನೆ, ನ್ಯಾಯಪಂಚಾಯ್ತಿ, ಕಾಮಗೇತನಹಳ್ಳಿ ಆಚಾರದ ಕಟ್ಟೆಮನೆ ಸ್ಥಾಪನೆ, ಕಾಮಗೇತಿ ವಂಶಜರ ರಾಜಕೀಯ ಚರಿತ್ರೆ ಮುಂತಾದ ವಿವರಗಳು ಕಂಡುಬರುತ್ತವೆ.

ಎಸ್ ಕೆ ಸಣ್ಣ ಓಬಯ್ಯ ನವರ 'ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ' (೨೦೦೨, ಅಪ್ರಕಟಿತ) ಎಂಬ ಪಿಎಚ್ ಡಿ ಮಹಾಪ್ರಬಂಧದಲ್ಲಿ ಎರಡು ಬುಡಕಟ್ಟುಗಳನ್ನು ತೌಲನಿಕವಾಗಿ ನೋಡಲಾಗಿದೆ

ಪಿ ಕೊಟ್ರೇಶ್‌ರವರ 'ಸಾಮಾಜಿಕ ಬದಲಾವಣೆಯ ಹಾದಿಯಲ್ಲಿ ಬೇಡರು'(೨೦೦೩ ಅಪ್ರಕಟಿತ) ಎನ್ನುವ ಎಂಫಿಲ್ ಮಹಾಪ್ರಬಂಧದಲ್ಲಿ ಬೇಡರ ಮೂಲ ಹಾಗೂ ಸಾಮಾಜಿಕ ಬದಲಾವಣೆಯಲ್ಲಿ ಅದು ಸಾಗುತ್ತಿರುವ ಕ್ರಮವನ್ನು ತಿಳಿಸುವುದರೊಂದಿಗೆ ಅವರ ಆರ್ಥಿಕ ಹಾಗೂ ಶೈಕ್ಷಣಿಕ, ಸಾಂಸ್ಕೃತಿಕ ಬದುಕಿನ ಬದಲಾವಣೆಗಳನ್ನು ತಿಳಿಸುತ್ತದೆ

ಜಗದೀಶ ಕುಮಾರ 'ಬೇಡ ಸಮುದಾಯದ ಮಹಿಳೆ'(೨೦೦೯ ಅಪ್ರಕಟಿತ) ಎನ್ನುವ ಪಿಎಚ್ ಡಿ ಮಹಾಪ್ರಬಂಧವು ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳ ಬೇಡ ಸಮುದಾಯದ ಮಹಿಳೆಯರ ಸ್ಥಿತಿಗತಿಗಳ ಚಿತ್ರಣವನ್ನು ಸ್ಥೂಲವಾಗಿ ಒದಗಿಸುತ್ತದೆ.

ಒಟ್ಟಾರೆಯಾಗಿ ಇಲ್ಲಿಯವರೆಗೂ ಪ್ರಕಟಗೊಂಡ ಕೃತಿಗಳನ್ನು ನೋಡಲಾಗಿ ಯಾವೊಂದು ಕೃತಿಯಲ್ಲಿಯೂ ಬೇಡ ಬುಡಕಟ್ಟಿನ ವೃತ್ತಿ ಪಲ್ಲಟಗಳ ಕುರಿತು ವಿವರಗಳು ಕಂಡುಬಂದಿರುವುದಿಲ್ಲ. ಹೀಗಾಗಿ ಬೇಡ ಬುಡಕಟ್ಟಿನ ವೃತ್ತಿ ಪಲ್ಲಟಗಳ ಕುರಿತಾದ ಈ ಅಧ್ಯಯನವು ಮೊದಲ ಪ್ರಯತ್ನವಾಗಿದೆ.

ಅಧ್ಯಾಯ-೨ ಭೌಗೋಳಿಕತೆ

೨.೧. ಬಳ್ಳಾರಿ ಜಿಲ್ಲೆ-ಭೌಗೋಳಿಕತೆ
೨.೨. ಕುಟುಂಬಗಳು
೨.೩. ಜನಸಂಖ್ಯೆ
೨.೪. ಬಳ್ಳಾರಿ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ
೨.೫. ಬಳ್ಳಾರಿ ಜಿಲ್ಲೆಯ ತಾಲೂಕುವಾರು ಭೌಗೋಳಿಕ ವಿಸ್ತೀರ್ಣದ ವಿವರ
೨.೬. ಆರ್ಥಿಕ ಚಟುವಟಿಕೆಗಳು

ಅಧ್ಯಾಯ-೨
ಭೌಗೋಳಿಕತೆ

೨.೧ ಬಳ್ಳಾರಿ ಜಿಲ್ಲೆ-ಭೌಗೋಳಿಕತೆ

ಕರ್ನಾಟಕದ ಒಟ್ಟು ಮೂವತ್ತು ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆಯೂ ಒಂದು. ಐತಿಹಾಸಿಕವಾಗಿ ತುಂಬಾ ಪ್ರಸಿದ್ಧಿಯನ್ನು ಪಡೆದ ವಿಜಯನಗರ ಸಾಮಾಜ್ಯದ ಕೇಂದ್ರ ಸ್ಥಾನವನ್ನು ಹೊಂದಿದ್ದ ಬಳ್ಳಾರಿ ಜಿಲ್ಲೆಯು ಕರ್ನಾಟಕದ ಮಧ್ಯ ಭಾಗದಲ್ಲಿದೆ. ಈ ಜಿಲ್ಲೆಯು ನೈರುತ್ಯ ಈಶಾನ್ಯ ದಿಕ್ಕುಗಳ ನಡುವೆ ಚಾಚಿಕೊಂಡಿದೆ. ಪ್ರಸ್ತುತ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯನ್ನು ಗಮನಿಸಿದಾಗ ನೈರುತ್ಯ ದಿಕ್ಕಿನ ಹಗರಿ ಬೊಮ್ಮನಹಳ್ಳಿ ತಾಲೂಕಿನ ಕಲ್ಲಹಳ್ಳಿ ಗ್ರಾಮದಿಂದ ಈಶಾನ್ಯ ದಿಕ್ಕಿನಲ್ಲಿರುವ ಸಿರಗುಪ್ಪ ತಾಲೂಕಿನ ಸಂತೆ ಕೂಡ್ಲೂರು ಗ್ರಾಮದವರೆಗೆ ಒಟ್ಟು ೧೮೭ ಕಿ.ಮೀ ಉದ್ದವಾಗಿದೆ ಹಾಗೂ ಪೂರ್ವ ದಿಕ್ಕಿನಿಂದ ಪಶ್ಚಿಮಕ್ಕೆ ಬಳ್ಳಾರಿ ತಾಲೂಕಿನ ಕಾರೇಕಲ್ ವೀರಾಪುರ ಗ್ರಾಮದಿಂದ ಹಡಗಲಿ ತಾಲೂಕಿನ ಹಿರೇಬನ್ನಟ್ಟಿ ಗ್ರಾಮದವರೆಗೆ ೧೬೧ ಕಿ.ಮೀ. ಅಗಲವಾಗಿ ವ್ಯಾಪಿಸಿಕೊಂಡಿದೆ.

೧೯೯೭ರಲ್ಲಿ ಕರ್ನಾಟಕ ರಾಜ್ಯವು ಜಿಲ್ಲೆಗಳನ್ನು ಮರುವಿಂಗಡಿಸಿದಾಗ ಹರಪನಹಳ್ಳಿಯು ದಾವಣಗೆರೆ ಜಿಲ್ಲೆಯ ಪಾಲಾಯಿತು. ಹೀಗಾಗಿ ಪ್ರಸ್ತುತ ಬಳ್ಳಾರಿ ಜಿಲ್ಲೆ ಏಳು ತಾಲೂಕುಗಳನ್ನು ಮಾತ್ರ ಹೊಂದಿದೆ. ಪ್ರಸ್ತುತ ಜಿಲ್ಲೆಯು ಭೌಗೋಳಿಕ ವಿಸ್ತೀರ್ಣವು ೮೪೪೭.೦೦ ಚ.ಕಿ. ಮೀಟರ್‌ಗಳಷ್ಟಿದೆ. ಇದು ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ. ೪.೪೦ ರಷ್ಟು ಪಾಲನ್ನು ಹೊಂದಿದೆ. ಅಂದರೆ ರಾಜ್ಯದ ಒಟ್ಟು ಜಿಲ್ಲೆಗಳಿಗೆ ಹೋಲಿಸಿದರೆ ಇದು ವಿಸ್ತೀರ್ಣದಲ್ಲಿ ಎಂಟನೇ ಸ್ಥಾನದಲ್ಲಿದೆ.

ಉತ್ತರಕ್ಕೆ ಕೊಪ್ಪಳ ಜಿಲ್ಲೆ, ದಕ್ಷಿಣಕ್ಕೆ ಚಿತ್ರದುರ್ಗ ಜಿಲ್ಲೆ, ಪಶ್ಚಿಮಕ್ಕೆ ಗದಗ ಜಿಲ್ಲೆ, ಪೂರ್ವಕ್ಕೆ ಆಂದ್ರ ಪ್ರದೇಶಗಳಿಂದ ಬಳ್ಳಾರಿ ಜಿಲ್ಲೆಯು ಸುತ್ತುವರೆದಿದೆ. ಈ ಜಿಲ್ಲೆಯ ಪೂರ್ವಭಾಗವು ಸಮತಟ್ಟಾದ ಭೂಮಿಯನ್ನು ಹೊಂದಿದ್ದು ಕೃಷಿಗೆ ಅನುಕೂಲಕರವಾಗಿದೆ. ಜಿಲ್ಲೆಯು ಉಷ್ಣ ಹವಾಮಾನದಿಂದ ಕೂಡಿದೆ. ಈ ಜಿಲ್ಲೆಯಲ್ಲಿ ಮಳೆ ಪ್ರಮಾಣ ಕಡಿಮೆಯಂದೇ ಹೇಳಬಹುದು. ಶುಷ್ಕ ವಾತಾವರಣದಿಂದ ಕೂಡಿದ ಪೂರ್ವಭಾಗದಲ್ಲಿ ಹೆಚ್ಚು ಅರಣ್ಯ ಪ್ರದೇಶವಿದೆ. ಈ ಭಾಗದಲ್ಲಿ ತುಂಗಾಭದ್ರ ನದಿಯಿಂದಾಗಿ ಪೂರ್ವ ತಾಲೂಕುಗಳಿಗೆ ನೀರಾವರಿ ಸೌಲಭ್ಯ ದೊರೆತಿದೆ. ಜಿಲ್ಲೆಯ ಹಡಗಲಿ ತಾಲೂಕನ್ನು ಪ್ರವೇಶಿಸುವ ತುಂಗಾಭದ್ರಾ ನದಿಯು ಮುಂದೆ ಹಗರಿಬೊಮ್ಮನ ಹಳ್ಳಿ, ಹೊಸಪೇಟೆ, ಸಿರಗುಪ್ಪ ತಾಲೂಕುಗಳನ್ನು ಹಾದು ಆಂಧ್ರ ಪ್ರದೇಶದ

ಮೂಲಕ ಮುಂದೆ ಹೋಗಿ ಸಮುದ್ರ ಸೇರುತ್ತದೆ. ತುಂಗಾಭದ್ರಾ ನದಿಯು ಒಟ್ಟು ಮೂರು ನೂರ ಇಪ್ಪತ್ತು ಕಿ.ಮೀ ದೂರ ಹರಿಯುತ್ತದೆ. ತುಂಗಾಭದ್ರಾ ನದಿಯ ಹೊರತಾಗಿ ಹಗರಿ (ವೇದಾವತಿ) ಎಂಬ ಚಿಕ್ಕ ನದಿಯೊಂದು ಈ ಜಿಲ್ಲೆಯಲ್ಲಿ ಹರಿಯುತ್ತದೆ. ಇವುಗಳ ಹೊರತಾಗಿ ನಾರಿ ಹಳ್ಳದಂತಹ ಚಿಕ್ಕ ಪುಟ್ಟ ಹಳ್ಳಗಳು ಈ ಜಿಲ್ಲೆಯಲ್ಲಿ ಕಂಡು ಬರುತ್ತವೆ. ಇವುಗಳಲ್ಲದೆ ಹಿಂದೆ ಕಂಪಲಿರಾಯ ಮತ್ತು ವಿಜಯನಗರದ ಅರಸರು, ಸಣ್ಣ ಪುಟ್ಟ ಪಾಳೆಯಗಾರರು ನಿರ್ಮಿಸಿದ ಕೆರೆ ಕುಂಟೆಗಳೂ ಸಹ ಜಿಲ್ಲೆಯಾದ್ಯಂತ ಕಂಡುಬರುತ್ತದೆ.

ಅತ್ಯುತ್ತಮ ಗುಣಮಟ್ಟದ ಕಬ್ಬಿಣ ಮತ್ತು ಮ್ಯಾಂಗನೀಸ್ ನಿಕ್ಷೇಪವನ್ನು ಈ ಜಿಲ್ಲೆಯಲ್ಲಿ ಕಾಣಬಹುದು. ಈ ಜಿಲ್ಲೆಯ ಸಂಡೂರು, ಹೊಸಪೇಟೆ, ಬಳ್ಳಾರಿ ತಾಲೂಕುಗಳು ಕಬ್ಬಿಣ ಮತ್ತು ಮ್ಯಾಂಗನೀಸ್ ಹೊಂದಿದ ಬೆಟ್ಟಗಳನ್ನು ಹೊಂದಿವೆ. ಕಬ್ಬಿಣ ನಿಕ್ಷೇಪದ ಪ್ರಮಾಣ ೧೦೩೨.೪೦ ದಶಲಕ್ಷ ಟನ್‌ಗಳಿಷ್ಟಿದೆ ಎಂದು ಭೂಗರ್ಭಶಾಸ್ತ್ರಜ್ಞರು ಅಂದಾಜಿಸಿದ್ದಾರೆ ಹಾಗೇ ಮ್ಯಾಂಗನೀಸ್ ಪ್ರಮಾಣವು ೧೮.೮೧ ದಶಲಕ್ಷ ಟನ್‌ಗಳಿಷ್ಟಿದೆ ಎಂದು ಗುರುತಿಸಲಾಗಿದೆ.

ಇವಲ್ಲದೆ ಗ್ರ್ಯಾನೇಟ್ ಕಲ್ಲುಗಳನ್ನು ಹೊಂದಿದ ಬೆಟ್ಟಗಳು ಬಳ್ಳಾರಿ ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡಿಕೊಂಡಿದೆ. ಹೀಗಾಗಿ ಗ್ರ್ಯಾನೇಟ್ ಗಣಿಗಾರಿಕೆಯು ಇಲ್ಲಿ ವ್ಯಾಪಕವಾಗಿ ಹರಡಿರುವುದನ್ನು ಕಾಣಬಹುದಾಗಿದೆ. ೧೯೯೧ರ ಮಧ್ಯ ಭಾಗದಲ್ಲಿ ಜಾರಿಗೆ ಬಂದ ಹೊಸ ಆರ್ಥಿಕ ನೀತಿಯ ಪರಿಣಾಮ ವಾಗಿ ಜಿಲ್ಲೆಯಲ್ಲಿ ಬೃಹತ್ ಪ್ರಮಾಣದ ಕಂಪನಿಗಳು ಕಬ್ಬಿಣ ಮತ್ತು ಉಕ್ಕು ಉದ್ದಿಮೆಗಳ ಮೇಲೆ ಬಂಡವಾಳ ತೊಡಗಿಸಿವೆ. ಜೊತೆಗೆ ಇದರ ಬೆನ್ನಲ್ಲೇ ಚಿಕ್ಕ ಕಾರ್ಖಾನೆಗಳಿಂದ ಹಿಡಿದು ಜಿಂದಾಲ್ ವಿಜಯನಗರ ಉಕ್ಕು ಕಾರ್ಖಾನೆಯಂತಹ ಬೃಹತ್ ಕಾರ್ಖಾನೆಗಳು ಜಿಲ್ಲೆಯಲ್ಲಿ ತಲೆಯತ್ತಿವೆ. ಇದಲ್ಲದೆ ಮಿತ್ತಲ್‌ನಂತಹ ಕಂಪನಿಗಳು ಕಬ್ಬಿಣ ಕಾರ್ಖಾನೆಗಳನ್ನು ಸ್ಥಾಪಿಸಲು ಮುಂದಾಗಿವೆ.

ಕುಡಿತಿನಿ ಮತ್ತು ತೋರಣಗಲ್‌ನಲ್ಲಿ ಎರಡು ಉಷ್ಣವಿದ್ಯುತ್ ತಯಾರಿಕಾ ಘಟಕಗಳು ತಲೆಯತ್ತಿವೆ. ಕುಡಿತಿನಿಯ ಉಷ್ಣ ವಿದ್ಯುತ್ ಸ್ಥಾವರವನ್ನು ಕರ್ನಾಟಕ ವಿದ್ಯುತ್ ನಿಗಮ ನಿರ್ವಹಿಸಿದರೆ ತೋರಣಗಲ್ಲಿನ ಉಷ್ಣ ಸ್ಥಾವರವನ್ನು ಜಿಂದಾಲ್ ಕಂಪನಿಯು ನಿರ್ವಹಿಸುತ್ತಿದೆ.

ಜಿಲ್ಲೆಯಲ್ಲಿ ಜರಗುತ್ತಿರುವ ಔದ್ಯೋಗಿಕರಣ ಪ್ರಕ್ರಿಯೆ ಜಿಲ್ಲೆಯ ಕೆಲವೇ ಪ್ರದೇಶಗಳಿಗೆ ಸೀಮಿತಗೊಂಡಿವೆ. ಪ್ರಾದೇಶಿಕವಾಗಿ ಈ ಜಿಲ್ಲೆಯನ್ನು ಎರಡು ಭಾಗಗಳಾಗಿ ವಿಂಗಡಿಸಿದ್ದು ಅವನ್ನು ಕ್ರಮವಾಗಿ ಪೂರ್ವಭಾಗ ಮತ್ತು ಪಶ್ಚಿಮ ಭಾಗವೆಂದು ವಿಂಗಡಿಸಲಾಗಿದೆ. ಪೂರ್ವ ಭಾಗದಲ್ಲಿ ಬಳ್ಳಾರಿ, ಹೊಸಪೇಟೆ, ಸಿರುಗುಪ್ಪ, ಸಂಡೂರು ತಾಲೂಕುಗಳನ್ನು ಗುರುತಿಸಿದರೆ

ಪಶ್ಚಿಮ ಭಾಗದಲ್ಲಿ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹಡಗಲಿ ತಾಲೂಕುಗಳನ್ನು ಗುರುತಿಸಲಾಗಿದೆ. ಪಶ್ಚಿಮ ಭಾಗದ ಈ ಮೂರು ತಾಲೂಕುಗಳು ಔದ್ಯಮಿಕ ಚಟುವಟಿಕೆಗಳಿಂದ ದೂರವೇ ಉಳಿದಿವೆ. ಜೊತೆಗೆ ನೀರಾವರಿ ಸೌಲಭ್ಯಗಳಿಂದಲೂ ಈ ಮೂರು ತಾಲೂಕುಗಳು ವಂಚಿತಗೊಂಡಿವೆ. ಹಡಗಲಿ ಮತ್ತು ಹಗರಿಬೊಮ್ಮನಹಳ್ಳಿಯ ಮೂಲಕ ತುಂಗಾಭದ್ರ ನದಿ ಹರಿದರೂ ಅದರ ಲಾಭವನ್ನು ಸಂಪೂರ್ಣವಾಗಿ ಪಡೆಯಲು ಆ ತಾಲೂಕುಗಳು ವಂಚಿತಗೊಂಡಿವೆ ಹಾಗೇ ಜಿಲ್ಲೆಯಲ್ಲಿಯೇ ತುಂಬಾ ಹಿಂದುಳಿದ ತಾಲೂಕೆಂದು ಕೂಡ್ಲಿಗಿಯನ್ನು ಗುರುತಿಸಲಾಗುತ್ತದೆ.

೨.೨. ಕುಟುಂಬಗಳು

೨೦೦೧ರ ಜನಗಣತಿ ಪ್ರಕಾರ ಕರ್ನಾಟಕದ ಒಟ್ಟು ಕುಟುಂಬಗಳು ೧,೦೨,೩೨,೧೩೩ ಎಂದು ಗುರುತಿಸಲಾಗಿದೆ. ಇದರಲ್ಲಿ ಬಳ್ಳಾರಿ ಜಿಲ್ಲೆಯ ಒಟ್ಟು ಕುಟುಂಬಗಳ ಸಂಖ್ಯೆಯು ೩,೭೩,೦೩೪ ರಷ್ಟಿದೆ ಅಂದರೆ ಕರ್ನಾಟಕ ರಾಜ್ಯದ ಒಟ್ಟು ಕುಟುಂಬಗಳಿಗೆ ಹೋಲಿಸಿದರೆ ಬಳ್ಳಾರಿ ಜಿಲ್ಲೆಯು ಶೇ.೩.೬೫ ರಷ್ಟು ಕುಟುಂಬಗಳನ್ನು ಒಳಗೊಂಡಿದೆ. ಇದರಲ್ಲಿ ಜಿಲ್ಲೆಯ ತಾಲೂಕುವಾರು ಕುಟುಂಬಗಳ ಸಂಖ್ಯೆಯನ್ನು ನೋಡಿದರೆ ಹಡಗಲಿಯು ೩೧.೦೮೪ ಕುಟುಂಬಗಳನ್ನು ಒಳಗೊಂಡಿದ್ದರೆ ಹಗರಿಬೊಮ್ಮನಹಳ್ಳಿಯು ೨೮,೮೭೧ ಕುಟುಂಬಗಳನ್ನು, ಹೊಸಪೇಟೆಯು ೭೦,೭೯ ಕುಟುಂಬಗಳನ್ನು, ಸಿರಗುಪ್ಪ ೪೨,೯೮ ಕುಟುಂಬಗಳನ್ನು, ಬಳ್ಳಾರಿಯು ೧,೧೭,೨೩೩ ಕುಟುಂಬಗಳನ್ನು, ಸಂಡೂರು ೩೫,೨೧೮ ಕುಟುಂಬಗಳನ್ನು ಹಾಗೂ ಕೂಡ್ಲಿಗಿ ೪೭,೮೧೧ ಕುಟುಂಬಗಳನ್ನು ಹೊಂದಿರುವುದು ಕಂಡುಬರುತ್ತಿದೆ.

೨.೩. ಜನಸಂಖ್ಯೆ

೨೦೧೧ರ ಜನಗಣತಿ ಪ್ರಕಾರ ಕರ್ನಾಟಕವು ಒಟ್ಟು ೬೧೯೫೨೯೭ ಜನಸಂಖ್ಯೆಯನ್ನು ಹೊಂದಿದೆ ಇದರಲ್ಲಿ ಪುರುಷರು ೩೯೬೬೬೫೭ ರಷ್ಟಿದ್ದರೆ ಮಹಿಳೆಯರು ೩೦೧೨೮೬೪೦ ರಷ್ಟಿದ್ದಾರೆ.

ಪರಿಶಿಷ್ಟ ಜಾತಿಯ (೨೦೧೧) ಒಟ್ಟು ಜನಸಂಖ್ಯೆಯು ೧೦೪೭೪೯೨ರಷ್ಟಿದ್ದು ಪುರುಷರು ೫೨೬೪೫೪೫ ಹಾಗೂ ಮಹಿಳೆಯರು ೫೨೧೦೪೪೭ ರಷ್ಟಿದ್ದಾರೆ. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದ (೨೦೦೧) ಒಟ್ಟು ಜನಸಂಖ್ಯೆಯು ೪೨೪೮೯೮೭ರಷ್ಟಿದ್ದು ಪುರುಷರು ೨೧೩೪೭೫೪ರಷ್ಟಿದ್ದರೆ ಮಹಿಳೆಯರು ೨೧೧೪೨೩೩ ರಷ್ಟಿದ್ದಾರೆ.

ಕರ್ನಾಟಕದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ರಾಜ್ಯದ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯಾ ಪ್ರಮಾಣವು ಕೇವಲ ಶೇ. ೬.೫೮ರಷ್ಟಿದೆ. ಇದರಲ್ಲಿ ಪರಿಶಿಷ್ಟ ಪಂಗಡದ ಪುರುಷರ ಪ್ರಮಾಣವು ಶೇಕಡ ೩.೩೩ ಇದೆ ಹಾಗೂ ಮಹಿಳೆಯರ ಪ್ರಮಾಣವು ಶೇಕಡ ೩.೨೪ ದಷ್ಟು ಇದೆ.

೨೦೧೧ರ ಜನಗಣತಿ ಪ್ರಕಾರ ಬಳ್ಳಾರಿ ಜಿಲ್ಲೆಯ ಒಟ್ಟು ಜನಸಂಖ್ಯೆಯು ೨೪,೫೨,೫೯೫ ರಷ್ಟಿದ್ದು ಇದರಲ್ಲಿ ಪುರುಷರು ೧೨,೩೬,೯೫೪ ರಷ್ಟಿದ್ದಾರೆ ಹಾಗೂ ಮಹಿಳೆಯರು ೧೨,೧೫,೬೪೧ ರಷ್ಟಿದ್ದಾರೆ.

ಪರಿಶಿಷ್ಟ ಜಾತಿಯು ಜನಸಂಖ್ಯೆಯು ಒಟ್ಟು ೫,೧೭,೪೦೯ ರಷ್ಟಿದೆ ಇದರಲ್ಲಿ ಪುರುಷರು ೨,೫೮,೫೮೨ ಹಾಗೂ ಮಹಿಳೆಯರು ೨,೫೮,೮೨೭ ರಷ್ಟಿದ್ದಾರೆ.

ಪರಿಶಿಷ್ಟ ಪಂಗಡದ ಜನಸಂಖ್ಯೆಯು ಜಿಲ್ಲೆಯಲ್ಲಿ ಒಟ್ಟು ೪,೫೧,೪೦೬ ರಷ್ಟಿದ್ದು ಪುರುಷರು ೨,೨೫,೪೫೧ ಹಾಗು ಮಹಿಳೆಯರು ೨,೨೫,೯೫೫ ರಷ್ಟಿದ್ದಾರೆ. ಅಂದರೆ ಕರ್ನಾಟಕದ ಒಟ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಬಳ್ಳಾರಿ ಜಿಲ್ಲೆಯಲ್ಲಿ ವಾಸವಾಗಿರುವ ಪರಿಶಿಷ್ಟ ಪಂಗಡದ ಜನಸಂಖ್ಯೆ ಕೇವಲ ಶೇಕಡ ೧೦.೫೩ರಷ್ಟು ಮಾತ್ರವಿದೆ, ಇದರಲ್ಲಿ ಪುರುಷರ ಪ್ರಮಾಣವು ಶೇಕಡ ೫.೩೦ ರಷ್ಟಿದ್ದರೆ ಮಹಿಳೆಯರ ಪ್ರಮಾಣ ಶೇಕಡ ೫.೨೩ ರಷ್ಟಿದೆ. ೨೦೧೧ರ ಜನಗಣತಿ ಪ್ರಕಾರ ತಾಲೂಕುವಾರು ಮತ್ತು ಜಾತಿವಾರು ಜನಸಂಖ್ಯೆಯು ಈ ಕೆಳಗಿನಂತಿದೆ.

ಜಿಲ್ಲೆಯ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯಲ್ಲಿ ತಾಲೂಕುವಾರು ಜನಸಂಖ್ಯೆಯನ್ನು ನೋಡಿದರೆ ಹಡಗಲಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆಯು ಶೇಕಡ ೩.೫೮ರಷ್ಟಿದೆ ಇದರಲ್ಲಿ ಪುರುಷರು ಶೇಕಡ ೧.೮೧ರಷ್ಟಿದೆ. ಮಹಿಳೆಯರ ಜನಸಂಖ್ಯಾ ಪ್ರಮಾಣವು ಶೇಕಡ ೧.೭೭ರಷ್ಟಿದೆ.

ಹಡಗಲಿ ತಾಲೂಕಿನಲ್ಲಿ ವಾಲ್ಮೀಕಿ ಮತ್ತು ಮೇಧ ಎರಡು ಪರಿಶಿಷ್ಟ ಪಂಗಡಗಳು ಮಾತ್ರ ಕಂಡುಬರುತ್ತವೆ. ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಮೇದ ಸಮುದಾಯದ ಒಟ್ಟು ಪ್ರಮಾಣವು ಶೇ. ೦.೦೮ರಷ್ಟು ಮಾತ್ರ ಕಂಡುಬರುತ್ತದೆ, ಮೇದ ಪುರುಷರ ಜನಸಂಖ್ಯಾ ಪ್ರಮಾಣ ಕೇವಲ ೦.೦೪ರಷ್ಟಿದೆ ಹಾಗೂ ಮಹಿಳೆಯರ ಪ್ರಮಾಣ

೦.೦೪ರಷ್ಟಿದೆ ಆದರೆ ವಾಲ್ಮೀಕಿ ಸಮುದಾಯದ ಜನಸಂಖ್ಯಾ ಪ್ರಮಾಣವು ಒಟ್ಟು ಶೇ. ೩.೫೦ರಷ್ಟಿದೆ.

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಹಕ್ಕಿಪಿಕ್ಕಿ, ಮೇದ ಮತ್ತು ವಾಲ್ಮೀಕಿ ಸಮುದಾಯಗಳು ಕಂಡು ಬರುತ್ತವೆ. ಈ ಮೂರು ಪರಿಶಿಷ್ಟ ಪಂಗಡದ ಸಮುದಾಯಗಳಲ್ಲಿ ಅತ್ಯಲ್ಪ ಪ್ರಮಾಣದ ಜನಸಂಖ್ಯೆಯನ್ನು ಹೊಂದಿದ ಪರಿಶಿಷ್ಟ ಪಂಗಡವೆಂದರೆ ಹಕ್ಕಿಪಿಕ್ಕಿ ಸಮುದಾಯವಾಗಿದೆ. ಹಕ್ಕಿಪಿಕ್ಕಿ ಸಮುದಾಯವು ಆ ತಾಲೂಕಿನ ಯಡ್ರಾಮನಹಳ್ಳಿ ಎನ್ನುವ ಗ್ರಾಮವೊಂದರಲ್ಲಿ ಮಾತ್ರ ನೆಲೆನಿಂತಿದೆ. ಹೊಸಪೇಟೆ ತಾಲೂಕಿನಲ್ಲಿ ಡುಂಗ್ರಿ ಗರಾಸಿಯಾ, ಹಕ್ಕಿಪಿಕ್ಕಿ, ಮೇದ, ವಾಲ್ಮೀಕಿ ಸಮುದಾಯಗಳು ಕಂಡು ಬರುತ್ತಿವೆ. ಇವುಗಳಲ್ಲಿ ಅತ್ಯಲ್ಪ ಪ್ರಮಾಣದ ಜನಸಂಖ್ಯೆ ಹೊಂದಿದ ಸಮುದಾಯವೆಂದರೆ ಡುಂಗ್ರಿ ಗರಾಸಿಯಾವಾಗಿದೆ.

ಈ ತಾಲೂಕಿನಲ್ಲಿ ವಾಲ್ಮೀಕಿ ಸಮುದಾಯದ ಒಟ್ಟು ಜನಸಂಖ್ಯಾ ಪ್ರಮಾಣವು ಶೇಕಡ ೧೬.೨ ರಷ್ಟಿದೆ. ಇದರಲ್ಲಿ ಪುರುಷರು ಶೇಕಡ ೮.೦೪ ರಷ್ಟಿದ್ದರೆ ಮಹಿಳೆಯರು ಶೇಕಡ ೮.೧೮ ರಷ್ಟಿದ್ದಾರೆ

ಸಿರಗುಪ್ಪ ತಾಲೂಕಿನಲ್ಲಿ ಮೇದ ಹಾಗು ವಾಲ್ಮೀಕಿಗಳ ಹೊರತಾಗಿ ಬೇರೆ ಪರಿಶಿಷ್ಟ ಪಂಗಡಗಳು ಕಂಡು ಬರುವುದಿಲ್ಲ. ಜಿಲ್ಲೆಯ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಸಿರಗುಪ್ಪದ ವಾಲ್ಮೀಕಿ ಸಮುದಾಯದ ಒಟ್ಟು ಜನಸಂಖ್ಯಾ ಪ್ರಮಾಣವು ಶೇಕಡ ೧೧.೪೯ ಇದೆ.

ಬಳ್ಳಾರಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಡುಂಗ್ರಿ ಗರಾಸಿಯ, ಹಕ್ಕಿ ಪಿಕ್ಕಿ, ಮೇಧಾ, ವಾಲ್ಮೀಕಿ ಸಮುದಾಯಗಳು ಕಂಡು ಬರುತ್ತವೆ. ಜಿಲ್ಲೆಯ ಜನಸಂಖ್ಯೆಗೆ ಹೋಲಿಸಿದರೆ ಬಳ್ಳಾರಿ ತಾಲೂಕಿನ ವಾಲ್ಮೀಕಿ ಸಮುದಾಯದ ಜನಸಂಖ್ಯೆ ಪ್ರಮಾಣ ಶೇಕಡ ೨೭.೭೬ ರಷ್ಟಿದೆ. ಇದರಲ್ಲಿ ಪುರುಷರು ಶೇಕಡ ೧೪.೦೫ ರಷ್ಟಿದ್ದರೆ ಮಹಿಳೆಯರು ಶೇಕಡ ೧೩.೭೧ ರಷ್ಟಿದ್ದಾರೆ.

ಸಂಡೂರು ತಾಲೂಕಿನಲ್ಲಿ ಮೇದ ಹಾಗು ವಾಲ್ಮೀಕಿ ಸಮುದಾಯಗಳು ಕಂಡು ಬರುತ್ತವೆ. ಇದರಲ್ಲಿ ಮೇದ ಸಮುದಾಯದ ಪ್ರಮಾಣ ಅತ್ಯಲ್ಪವೆಂದೇ ಹೇಳಬಹುದು. ಮೇದ ಸಮುದಾಯದ ಒಟ್ಟು ಜನಸಂಖ್ಯೆಯು (ಜಿಲ್ಲಾ ಜನಸಂಖ್ಯೆಗೆ ಹೋಲಿಸಿದರೆ) ಶೇ. ೦.೦೩ರಷ್ಟು ಮಾತ್ರ ಕಂಡುಬರುತ್ತದೆ. ಇದರಲ್ಲಿ ಪುರುಷರು ಶೇಕಡ ೦.೦೧ರಷ್ಟು ಇದ್ದರೆ ಮಹಿಳೆಯರು ಶೇಕಡ ೦.೦೨ರಷ್ಟು ಕಂಡುಬರುತ್ತಾರೆ.

ಕೂಡ್ಲಿಗಿ ತಾಲೂಕಿನಲ್ಲಿ ಮೇಧ ಹಾಗೂ ವಾಲ್ಮೀಕಿ ಸಮುದಾಯಗಳ ಹೊರತಾಗಿ ಬೇರೆ ಪರಿಶಿಷ್ಟ ಪಂಗಡದ ಬುಡಕಟ್ಟುಗಳು ಕಂಡು ಬರುವುದಿಲ್ಲ. ಅದರಲ್ಲೂ ಮೇದ ಸಮುದಾಯ ಅತ್ಯಲ್ಪ ಪ್ರಮಾಣದಲ್ಲಿದೆ. ತಾಲೂಕಿನ ಪ್ರಮುಖ ಸಮುದಾಯವೆಂದು ಗುರುತಿಸುವ ಸಮುದಾಯ ವಾಲ್ಮೀಕಿ ಸಮುದಾಯವಾಗಿದೆ. ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಈ ಸಮುದಾಯದ ಜನಸಂಖ್ಯಾ ಪ್ರಾಬಲ್ಯ ಅರ್ಥವಾಗುತ್ತದೆ. ಈ ತಾಲೂಕಿನ ವಾಲ್ಮೀಕಿ ಸಮುದಾಯವನ್ನು ಜಿಲ್ಲಾ ಪರಿಶಿಷ್ಠ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಶೇಕಡ ೨೦.೧೭ ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇಕಡ ೧೦.೨೧ ರಷ್ಟಿದೆ ಮಹಿಳೆಯರ ಪ್ರಮಾಣವು ಶೇಕಡ ೯.೯೬ ರಷ್ಟಿದೆ. ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ವಾಲ್ಮೀಕಿ ಸಮುದಾಯದ ಪ್ರಮಾಣವು ಶೇ.೨೭.೦೩ ರಷ್ಟಿದೆ.

೨.೪ ಬಳ್ಳಾರಿ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ


ಕರ್ನಾಟಕದ ಒಟ್ಟು ವಿಸ್ತೀರ್ಣವು ೧,೯೧,೭೯೧ ಚ.ಕಿ.ಮೀ. ಗಳಷ್ಟಿದೆ ಅದರಲ್ಲಿ ಬಳ್ಳಾರಿ ಜಿಲ್ಲೆಯ ಒಟ್ಟು ವಿಸ್ತೀರ್ಣವು ೮,೪೫೦. ಚ.ಕಿ,ಮೀಗಳಾಗಿದೆ. ಅಂದರೆ ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿಯ ಒಟ್ಟು ವಿಸ್ತೀರ್ಣವು ಶೇಕಡ ೪.೪೦ಗಳಷ್ಟಾಗಿದೆ.

ಬಳ್ಳಾರಿ ಜಿಲ್ಲೆಯು ಏಳು ತಾಲೂಕುಗಳನ್ನು ಒಳಗೊಂಡಿದೆ, ಈ ಜಿಲ್ಲೆಯ ಪ್ರತಿಯೊಂದು ತಾಲೂಕಿನ ವಿಸ್ತೀರ್ಣವು ಈ ಕೆಳಗಿನಂತಿದೆ.

ಬಳ್ಳಾರಿ ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಹಡಗಲಿ ತಾಲೂಕಿನ ವಿಸ್ತೀರ್ಣವು ೯೪೭.೮೨ ಚ.ಕಿ.ಮೀ (ಶೇಕಡ ೧೧.೨೯)ಗಳಿದೆ. ಅದೇ ರೀತಿ ಹಗರಿಬೊಮ್ಮನಹಳ್ಳಿ ತಾಲೂಕು ೯೭೩.೯೫ ಚ.ಕಿ.ಮೀ (ಶೇಕಡ ೧೧.೬೦), ಹೊಸಪೇಟೆ ತಾಲೂಕು ೯೦೪.೭೦ ಚ.ಕಿ.ಮೀ(ಶೇಕಡ ೧೦.೭೯), ಸಿರಗುಪ್ಪ ತಾಲೂಕು ೧,೦೩,೬೧೭ ಚ.ಕಿ.ಮೀ (ಶೇಕಡ ೧೨.೩೩), ಬಳ್ಳಾರಿ ತಾಲೂಕು ೧,೬೮೮,೫೯ ಚ.ಕಿ.ಮೀ (ಶೇಕಡ ೧೯.೯೯), ಸಂಡೂರು ತಾಲೂಕು ೧,೧೫೨.೪೨ ಚ.ಕಿ.ಮೀ (ಶೇಕಡ ೧೩.೭೩) ಕೂಡ್ಲಿಗಿ ತಾಲೂಕು ೧,೬೧೮.೮೭ ಚ.ಕಿ.ಮೀ (ಶೇಕಡ ೨೦.೨೭) ವಿಸ್ತೀರ್ಣವನ್ನು ಒಳಗೊಂಡಿವೆ.

೨.೫ ಬಳ್ಳಾರಿ ಜಿಲ್ಲೆಯ ತಾಲೂಕುವಾರು ಭೌಗೋಳಿಕ ವಿಸ್ತೀರ್ಣದ ವಿವರ
(ಚದರ ಕಿಲೋಮೀಟರ್ ಹಾಗೂ ಶೇಕಡವಾರುಗಳಲ್ಲಿ)

ಪೈಚಾರ್ಟ್-೨.೫.



ಒಟ್ಟು ಬಳ್ಳಾರಿ ಜಿಲ್ಲೆಯ ವಿಸ್ತೀರ್ಣಕ್ಕೆ ಹೋಲಿಸಿದರೆ ಆ ಜಿಲ್ಲೆಯ ೭ ತಾಲೂಕುಗಳಲ್ಲಿ ಅತೀ ಹೆಚ್ಚು ಭೂ ವಿಸ್ತೀರ್ಣ ಹೊಂದಿದ ತಾಲೂಕೆಂದರೆ ಬಳ್ಳಾರಿ ತಾಲೂಕಾಗಿದೆ (೧,೬೮೮.೫೯ ಚ.ಕಿ.ಮೀ) ತರುವಾಯದ ಸ್ಥಾನ ಕೂಡ್ಲಿಗಿ ತಾಲೂಕಿಗೆ (೧,೬೧೮.೮೭ ಚ.ಕಿ.ಮೀ) ಸಲ್ಲುತ್ತದೆ. ಮೂರನೇ ಸ್ಥಾನ ಸಿರುಗುಪ್ಪಕ್ಕೆ ಸಲ್ಲಿದರೆ ಕೊನೆಯ ಸ್ಥಾನ ಹೊಸಪೇಟೆ ತಾಲೂಕಿಗೆ ಸಲ್ಲುತ್ತದೆ (೯೦೪.೧೭ ಚ.ಕಿ.ಮೀ) ಆದರೆ ಜನಸಾಂದ್ರತೆಯನ್ನು ಗಮನಿಸಿದರೆ ಜಿಲ್ಲೆಯಲ್ಲಿ ಅತೀ ಹೆಚ್ಚು ಜನಸಾಂದ್ರತೆ ಹೊಂದಿರುವ ತಾಲೂಕು ಹೊಸಪೇಟೆಯಾಗಿದೆ (೧ ಚ.ಕಿ.ಮೀ ಗೆ ೪೧೫ ರಷ್ಟು) ಹಾಗೂ ಅತೀ ಕಡಿಮೆ ಜನಸಾಂದ್ರತೆ ಹೊಂದಿರುವ ತಾಲೂಕು ಹಗರಿಬೊಮ್ಮನಹಳ್ಳಿ (೧೬೪) ಯಾಗಿದೆ. ಇನ್ನೂಳಿದಂತೆ ಬಳ್ಳಾರಿಯು ೩೭೦ ಜನಸಾಂದ್ರತೆ ಹೊಂದಿದ್ದರೆ, ಸಿರುಗುಪ್ಪ ೨೨೭ ಜನಸಾಂದ್ರತೆಯನ್ನು, ಕೂಡ್ಲಿಗಿ ೧೬೮ ಜನಸಾಂದ್ರತೆಯನ್ನು ಸಂಡೂರು ೧೬೬ ಜನ ಸಾಂದ್ರತೆಯನ್ನು ಹಡಗಲಿ ೧೭೭ ಜನಸಾಂದ್ರತೆಯನ್ನು ಹೊಂದಿರುವುದನ್ನು ಕಾಣಬಹುದಾಗಿದೆ.



ಬಳ್ಳಾರಿ ಜಿಲ್ಲೆಯ ಸಾಕ್ಷರತೆಯ ಪ್ರಮಾಣ

೨೦೦೧ರ ಜನಗಣತಿ ಪ್ರಕಾರ ಜಿಲ್ಲೆಯ ಸಾಕ್ಷರರ ಸಂಖ್ಯೆ ೧೧,೦೦,೬೦೨ (ಶೇಕಡ ೫೮.೦೪) ರಷ್ಟಿದೆ. ರಾಜ್ಯದ ಒಟ್ಟು ಸಾಕ್ಷರತೆಗೆ ಹೋಲಿಸಿದರೆ ಜಿಲ್ಲೆಯ ಸಾಕ್ಷರತೆಯ ಪ್ರಮಾಣ ಶೇಕಡ ಒಂಭತ್ತರಷ್ಟು ಕಡಿಮೆ ಇದೆ. ಹೀಗಾಗಿ ಸಾಕ್ಷರತೆಯಲ್ಲಿ ಹಿಂದುಳಿದ ಜಿಲ್ಲೆಗಳಲ್ಲಿ ಇದೂ ಒಂದಾಗಿದೆ. ಇತ್ತೀಚೆಗೆ ಮದ್ಯಾಹ್ನದ ಬಿಸಿಯೂಟ, ಸರ್ವಶಿಕ್ಷಾ ಅಭಿಯಾನ, ಕಡ್ಡಾಯ ಶಿಕ್ಷಣ ಮುಂತಾದ ಯೋಜನೆಗಳಿಂದ ಶಾಲೆಗೆ ಹೋಗುವ ಮಕ್ಕಳ ಪ್ರಮಾಣ ಅಲ್ಪ ಮಟ್ಟಿಗೆ ಹೆಚ್ಚಾಗಿದೆಯೆಂದು ತೋರಿಬಂದರೂ ಜಿಲ್ಲೆಯಲ್ಲಿ ನಡೆಯುವ ಗಣಿಗಾರಿಕೆ, ಕೃಷಿ ಕೂಲಿ ಮುಂತಾದ ಚಟುವಟಿಕೆಗಳ ಕಾರಣಗಳಿಗಾಗಿ ಬಹುತೇಕ ಕೆಳವರ್ಗದ ಮಕ್ಕಳು ಶಾಲೆಯಿಂದ ವಂಚಿತವಾಗಿ ಶಾಲೆಯ ಹೊರಗೆ ಉಳಿಯುವುದೇ ಹೆಚ್ಚಾಗಿ ಕಂಡು ಬರುತ್ತದೆ. ಅದರಲ್ಲೂ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಹಾಗೂ ನಿರ್ಲಕ್ಷಿತ ಅಲ್ಪಸಂಖ್ಯಾತ ಕೆಳಜಾತಿ ವರ್ಗಗಳ ಮಕ್ಕಳು ನಾನಾ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿಯುವುದೇ ಹೆಚ್ಚು, ಅದರಲ್ಲೂ ಶಾಲೆಯಿಂದ ಹೊರಗುಳಿಯುವವರಲ್ಲಿ ಹೆಣ್ಣು ಮಕ್ಕಳ ಪ್ರಮಾಣವೇ ಹೆಚ್ಚಾಗಿ ಕಂಡು ಬರುತ್ತದೆ.

೨.೬ ಆರ್ಥಿಕ ಚಟುವಟಿಕೆಗಳು

ಜಿಲ್ಲೆಯಲ್ಲಿ ನಡೆಯುವ ಕಬ್ಬಿಣ ಮತ್ತು ಮ್ಯಾಂಗನೀಸ್ ಗಣಿಗಾರಿಕೆಯಿಂದ ಔದ್ಯೋಗಿಕ ಚಟುವಟಿಕೆಗಳು ಹೆಚ್ಚಾಗಿ ಜರಗುತ್ತಿದೆ, ಆದರೆ ವಿಪರ್ಯಾಸವೆಂದರೆ ತಾಂತ್ರಿಕ ಶಿಕ್ಷಣದ ಕೊರತೆ, ವೃತ್ತಿ ಪ್ರಾವಿಣ್ಯತೆಯ ಕೊರತೆ ಇತ್ಯಾದಿ ಕಾರಣಗಳಿಗಾಗಿ ಜಿಲ್ಲೆಯ ಬಹುತೇಕ ಯುವ ಶಕ್ತಿ ಔದ್ಯೋಗಿಕ ಚಟುಚಟಿಕೆಗಳಲ್ಲಿ ಪಾಲ್ಗೊಳ್ಳದೆ ಹೊರಗುಳಿಯಬೇಕಾಗಿದೆ. ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸಲು ಉತ್ತರ ಪ್ರದೇಶ, ರಾಜಸ್ಥಾನ ಮುಂತಾದ ಕಡೆಯಿಂದ ಜನ ಬರುವುದರಿಂದ ಸ್ಥಳೀಯ ಜನರು ಕೇವಲ ಕೂಲಿ ಕೆಲಸಕ್ಕೆ ಮಾತ್ರ ಸೀಮಿತ ಎನ್ನುವ ಮಟ್ಟದ ವಾತಾವರಣ ಸೃಷ್ಟಿಗೊಂಡಿದೆ. ಅದರಲ್ಲೂ ಪರಿಶಿಷ್ಠ ಜಾತಿ ಪರಿಶಿಷ್ಠ ಪಂಗಡದ ಯುವಕರು ಉನ್ನತ ಉದ್ಯೋಗ ಅವಕಾಶಗಳಿಂದ ಹೆಚ್ಚು ವಂಚಿತರಾಗಿರುವುದು ಕಂಡುಬರುತ್ತದೆ.

ಬಳ್ಳಾರಿ ಜಿಲ್ಲೆಯನ್ನು ಪ್ರಾದೇಶಿಕವಾಗಿ ಪೂರ್ವ ಭಾಗ ಮತ್ತು ಪಶ್ಚಿಮ ಭಾಗಗಳೆಂದು ವಿಂಗಡಿಸಲಾಗಿದೆ ಮುಖ್ಯವಾಗಿ ಪಶ್ಚಿಮ ಭಾಗದವೆಂದು ಗುರುತಿಸಲಾಗುವ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹಡಗಲಿ ತಾಲೂಕುಗಳು ಔದ್ಯೋಗಿಕ ಚಟುವಟಿಕೆಗಳಿಂದ ದೂರವುಳಿದಿವೆ. ಈ ಪ್ರದೇಶಗಳು ಹೆಚ್ಚಾಗಿ ಲಾಭಕರವಲ್ಲದ ಕೃಷಿ ಚಟುಚಟಿಕೆಗಳಲ್ಲಿ ತೊಡಗಿರುವುದನ್ನು

ನೋಡಬಹುದು. ಜಿಲ್ಲೆಯ ಪೂರ್ವ ಭಾಗದಲ್ಲಿ ಔದ್ಯೋಗಿಕ ಚಟುವಟಿಕೆ, ಗಣಿಗಾರಿಕೆ ಇತ್ಯಾದಿ ಚಟುವಟಿಕೆಗಳು ತೀವ್ರಗತಿಯಲ್ಲಿ ಸಾಗಿವೆ. ಆದರೆ ಈ ಔದ್ಯೋಗಿಕ ಚಟುವಟಿಕೆ ಮತ್ತು ಗಣಿಗಾರಿಕೆಗಳ ಲಾಭ ಮಾತ್ರ ಕೆಲವೇ ಕೆಲವು ಬಂಡವಾಳಶಾಹಿಗಳಿಗೆ ಸೀಮಿತವಾಗಿ ಉಳಿದಿರುವುದು ಕಂಡುಬರುತ್ತದೆ. ಆ ಎಲ್ಲಾ ಚಟುವಟಿಕೆಗಳಿಂದ ಸಾಮಾನ್ಯ ಜನರಿಗೆ ಯಾವುದೇ ರೀತಿಯ ಲಾಭ ಕಂಡು ಬರುವುದಿಲ್ಲ. ಅಂದರೆ ಸಾಮಾನ್ಯ ಜನರು ಅ ಎಲ್ಲಾ ಚಟುವಟಿಕೆಗಳಿಂದ ದೂರವುಳಿದಿದ್ದಾರೆ. ಹೀಗಾಗಿ ಜಿಲ್ಲೆಯು ಮುಖ್ಯವಾಗಿ ಕೃಷಿಯನ್ನು ಅವಲಂಬಿಸಿರುವುದು ಕಂಡು ಬರುತ್ತಿವೆ. ಇತ್ತೀಚೆಗೆ ಕೃಷಿ ವಲಯದ ಭೂಮಿಗಳನ್ನು ಸಹ ಬಂಡವಾಳಶಾಹಿಗಳು ಹೆಚ್ಚಿನ ಲಾಭ ಕೊಡುವ ಆಮಿಷ ಒಡ್ಡಿ ಕೃಷಿಕರಿಂದ ಕೃಷಿ ಭೂಮಿಗಳನ್ನು ತಮ್ಮದಾಗಿಸಿಕೊಳ್ಳುತಿದ್ದಾರೆ. ತರುವಾಯ ಅವರು ಕೃಷಿಯೇತರ ಚಟುವಟಿಕೆಗಳಿಗೆ ಆ ಭೂಮಿಗಳನ್ನು ಬಳಸಿಕೊಳ್ಳುತ್ತಾರೆ. ಕೃಷಿ ಭೂಮಿಯನ್ನು ಮಾರಿಕೊಂಡು, ಇಲ್ಲವೆ ಕಳೆದುಕೊಂಡ ಕೃಷಿಕನು ಕೃಷಿ ಚಟುವಟಿಕೆಯಿಂದ ದೂರವುಳಿಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಅತ್ತ ಕೃಷಿಭೂಮಿ ಇಲ್ಲ ಇತ್ತ ಉದ್ಯೋಗವಿಲ್ಲದಂತಹ ಸ್ಥಿತಿಯಲ್ಲಿರುವ ಜಿಲ್ಲೆಯ ರೈತ ಜೀವನ ನಿರ್ವಹಣೆಗಾಗಿ ಗುಳೆ ಹೋಗಬೇಕಾದ ಸ್ಥಿತಿ ನಿರ್ಮಾಣವಾಗಲು ಹೆಚ್ಚು ದೂರ ಉಳಿದಿಲ್ಲ. ವಲಯವಾರು ದುಡಿಮೆಗಾರರ ವರ್ಗವನ್ನು ನೋಡಿದಾಗ ಪ್ರಾಥಮಿಕ ವಲಯ ಶೇಕಡ ೭೬.೧೮ ರಷ್ಟು ದ್ವಿತೀಯ ವಲಯ ಶೇಕಡ ೭.೪೩ ರಷ್ಟು ತೃತೀಯ ವಲಯ ಶೇಕಡ ೧೬.೦೯ ರಷ್ಟಿದೆ. ರಾಜ್ಯಕ್ಕೆ ಹೋಲಿಸಿದರೆ ಈ ಪ್ರಮಾಣ ಕ್ರಮವಾಗಿ ಶೇಕಡ ೧೬.೦೯ರಷ್ಟಿದೆ.

ಜಿಲ್ಲೆಯ ಒಟ್ಟು ಶ್ರಮ ಶಕ್ತಿಯ ವಲಯವಾರು ವಿತರಣೆ ಹಾಗೂ ಆ ವಿತರಣೆಯಲ್ಲಿ ೧೯೮೧ ರಿಂದ ೧೯೯೧ ರಲ್ಲಿ ಉಂಟಾದ ಬದಲಾವಣೆ ಅಭಿವೃದ್ಧಿಯ ದೃಷ್ಟಿಯಿಂದ ಅಷ್ಟೇನೂ ಅನುಕೂಲಕರವಾಗಿಲ್ಲ ಪ್ರಾಥಮಿಕ ವಲಯವೆಂದರೆ ಕೃಷಿ, ಗಣಿಗಾರಿಕೆ, ಮೀನುಗಾರಿಕೆ ಮುಂತಾದ ಕಸುಬುಗಳನ್ನು ಅವಲಂಬಿಸಿರುವವರ ಪ್ರಮಾಣ ಶೇಕಡ ೮೭.೦೧ ರಿಂದ ಶೇಕಡ ೮೭.೮೭ ರಷ್ಟು ಏರಿಕೆಯಾಗಿದೆ ಇದನ್ನು ಅಭಿವೃದ್ಧಿಯ ವಿಮುಖ ಚಲನೆ ಎಂದು ಹೇಳಲಾಗುತ್ತದೆ.

ತುಂಗಾಭದ್ರಾ ನದಿ ಜಿಲ್ಲೆಯೊಳಗೆ ಹಾದು ಹೋದರೂ ಜಿಲ್ಲೆಯ ಪಶ್ಚಿಮವಲಯದ ತಾಲೂಕುಗಳಾದ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಹಡಗಲಿಗಳು ಕೃಷಿಗಾಗಿ ನೀರಾವರಿ ಸೌಲಭ್ಯ ಪಡೆಯಲು ಸಾಧ್ಯವಾಗಿಲ್ಲ. ನದಿಯ ದಂಡೆಯ ಮೇಲಿನ ಭಾಗದಲ್ಲಿರುವ ಕೆಲವೇ ಕೆಲವು ರೈತರು ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡು ನೀರಾವರಿ ಮಾಡಿಕೊಳ್ಳುವರಾದರೂ ರಾಜ್ಯದ ವಿದ್ಯುತ್ ಅಭಾವದಿಂದಾಗಿ ಪಂಪಸೆಟ್‌ಗಳು ಸಹ ಸರಿಯಾಗಿ ಕಾರ್ಯನಿರ್ವಹಿಸಲು

ಸಾಧ್ಯವಾಗುತ್ತಿಲ್ಲ, ಸಂಡೂರು, ಬಳ್ಳಾರಿ ತಾಲೂಕುಗಳು ಸಹ ಇದರಿಂದ ಹೊರತಾಗಿಲ್ಲ. ಬಳ್ಳಾರಿಯ ಕೆಲವು ಭಾಗಗಳು ಮಾತ್ರ ಎಲ್.ಎಲ್.ಸಿ ಕಾಲುವೆ ಮತ್ತು ಹೆಚ್.ಎಲ್.ಸಿ ಕಾಲುವೆಯ ಸೋರಿಕೆ ನೀರು ಬಳಸಿ ಇಲ್ಲವೆ ಅಲ್ಪಾವಧಿ (೬ತಿಂಗಳು) ನೀರು ಬಳಸಿ ಒಂದು ಬೆಳೆಯನ್ನು ಪಡೆಯಲು ಸಾಧ್ಯವಾಗಿದೆ. ಆದರೆ ಆ ನೀರಾವರಿ ಸೌಲಭ್ಯ ಅಷ್ಟೇನೂ ತೃಪ್ತಿಕರವಾಗಿಲ್ಲ ಎಂಬ ಅಳಲು ರೈತರಿಂದ ಕೇಳಿಬರುತ್ತದೆ.

ಹಡಗಲಿ ಹಗರಿಬೊಮ್ಮನಹಳ್ಳಿಯ ರೈತರಿಗೆ ಅನುಕೂಲ ನೀಡಬಹುದಾದ ಸಿಂಗಟಾಲೂರು ಯೋಜನೆಯೊಂದು ರೂಪುಗೊಂಡಿದೆಯಾದರು ಅದು ಪೂರ್ಣಗೊಂಡು ಕಾರ್ಯಾರಂಭ ಮಾಡಲು ಇನ್ನು ಸಾಧ್ಯವಾಗಿಲ್ಲ.

ಒಟ್ಟಾರೆಯಾಗಿ ಈ ಎಲ್ಲ ಚಟುವಟಿಕೆಗಳನ್ನು ಗಮನಿಸಿದರೆ ಜಿಲ್ಲೆಯು ಒಟ್ಟಾರೆಯಾಗಿ ಹಿಂದುಳಿದಿರುವುದನ್ನು ಸೂಚಿಸುತ್ತವೆ. ಯಾವ ಪ್ರದೇಶವು ಕೇವಲ ಪ್ರಾಥಮಿಕ ವಲಯವನ್ನು ಹೆಚ್ಚು ಅವಲಂಬಿಸಿರುತ್ತದೆಯೋ ಆ ಪ್ರದೇಶವನ್ನು ಹಿಂದುಳಿದ ಪ್ರದೇಶವೆಂದು ಗ್ರಹಿಸಲಾಗಿದೆ.

ಆರ್ಥಿಕವಾಗಿ ಜಿಲ್ಲೆಯ ವರಮಾನವು ೧೯೯೫-೯೬ರ ಅವಧಿಯಲ್ಲಿ ಶೇ.೮೫೪೪ ರೂಪಾಯಿಗಳಿದ್ದು ರಾಜ್ಯದ ಸರಾಸರಿಗಿಂತ ರೂ ೮೪೦ ಕಡಿಮೆ ಇದೆ. ವರಮಾನದಲ್ಲಿ ಜಿಲ್ಲೆಯು ರಾಜ್ಯದಲ್ಲಿ ೮ನೇ ಸ್ಥಾನವನ್ನೂ ಹೊಂದಿದೆ. ಜಿಲ್ಲೆಯಲ್ಲಿ ಗಣಿಗಾರಿಕೆ ಔದ್ಯೋಗಿಕ ವಲಯದ ಪ್ರಗತಿ ಕಂಡುಬರುತಿದ್ದರೂ ಅದು ಕೇವಲ ಕೆಲವೇ ಕೆಲವು ಬಂಡವಾಳಶಾಹಿಗಳ ಹಿಡಿತದಲ್ಲಿರುವುದರಿಂದ ಜಿಲ್ಲೆಯ ಜನಸಾಮಾನ್ಯನ ವರಮಾನ ಅತ್ಯಂತ ಕಡಿಮೆಯಿರುವುದನ್ನು ಕಾಣಬಹುದಾಗಿದೆ.

ಇತ್ತೀಚೆಗೆ ರಾಜ್ಯದ ರಾಜಕೀಯದಲ್ಲಿ ಬಳ್ಳಾರಿ ಜಿಲ್ಲೆಗೆ ವಿಶಿಷ್ಟ ಸ್ಥಾನವಿದೆ. ಇಡೀ ರಾಜ್ಯದ ರಾಜಕೀಯ ದಾಳಗಳು ಬಳ್ಳಾರಿ ಜಿಲ್ಲೆಯ ಬಂಡವಾಳಶಾಹಿಗಳ ಕೈಯಲ್ಲಿದೆ ಎಂಬ ಮಾತು ಇಂದು ಪ್ರತಿಯೊಂದು ಸುದ್ದಿ ಮಾಧ್ಯಮ ವಲಯಗಳ ಮೂಲಕ ಕೇಳಿಬರುತ್ತಿದೆ. ಬಳ್ಳಾರಿಯ ಗಣಿಗಳಿಗೂ ರಾಜ್ಯದ ರಾಜಕೀಯಕ್ಕೂ ಸಂಬಂಧಗಳಿರುವುದನ್ನು ಈ ಮಾದ್ಯಮಗಳು ಹೊರಚಲ್ಲುತ್ತಲಿರುವುದನ್ನು ನೋಡಬಹುದು

ಜಿಲ್ಲೆಯನ್ನು ಆಡಳಿತಾತ್ಮಕವಾಗಿ ಎರಡು ಉಪ ವಿಭಾಗಗಳಾಗಿ ವಿಂಗಡಿಸಲಾಗಿದೆ ಒಂದು ಬಳ್ಳಾರಿ ಮತ್ತೊಂದು ಹೊಸಪೇಟೆ, ಬಳ್ಳಾರಿ ಉಪವಿಭಾಗದಲ್ಲಿ ಮೂರು ತಾಲೂಕುಗಳಿದ್ದರೆ ಹೊಸಪೇಟೆ ಉಪವಿಭಾಗದಲ್ಲಿ ನಾಲ್ಕು ತಾಲೂಕುಗಳು ಇವೆ.

ಹೊಸಪೇಟೆ ತಾಲೂಕು

ಹೊಸಪೇಟೆಯು ಬಳ್ಳಾರಿ ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ಒಂದು. ತುಂಗಾಭದ್ರಾ ನದಿಗೆ ಹೊಸಪೇಟೆ ನಗರದ ಬಳಿಯೇ ಆಣೆಕಟ್ಟು ಕಟ್ಟಲಾಗಿದೆ. ಹೀಗಾಗಿ ಈ ತಾಲೂಕಿನಲ್ಲಿ ಹೊಸಪೇಟೆ ನಗರದಿಂದ ಕೆಳಭಾಗಕ್ಕೆ ಕೃಷಿಗೆ ನೀರಾವರಿ ಸೌಲಭ್ಯ ಸುಲಭವಾಗಿ ಸಿಗುತ್ತದೆ. ಆದರೆ ಹೊಸಪೇಟೆಯ ಮೇಲ್ಭಾಗಕ್ಕೆ ನೀರಾವರಿ ಸೌಲಭ್ಯ ಇರುವುದಿಲ್ಲ. ಹೀಗಾಗಿ ಹೊಸಪೇಟೆಯಿಂದ ಮೇಲ್ಭಾಗದ ಜನರು ಕೇವಲ ಮಳೆಯಾಧಾರಿತ ಒಣ ಬೇಸಾಯವನ್ನೇ ಅವಲಂಬಿಸಬೇಕಾಗಿದೆ. ಈ ತಾಲೂಕಿನಲ್ಲಿ ಮಧ್ಯಮ ಗಾತ್ರದ ಕಬ್ಬಿಣ ಮತ್ತು ಉಕ್ಕು ಉದ್ಯಮವನ್ನು ಹಾಗೂ ಗಣಿಗಾರಿಕೆಯನ್ನು ಕಾಣಬಹುದು. ೨೦೦೧ರ ಇತ್ತಿಚೆಗೆ ಹೊಸಪೇಟೆಯ ಮೇಲ್ಭಾಗಕ್ಕೆ ಸ್ಪಾಂಜ್ ಐರನ್ ಉತ್ಪಾದಿಸುವ ಕಾರ್ಖಾನೆಗಳು ಹೆಚ್ಚಾಗಿ ಹುಟ್ಟಿಕೊಂಡಿವೆ. ಕೇವಲ ಇಪ್ಪತ್ತೈದು ಕಿಲೋ ಮೀಟರ್ ವ್ಯಾಪ್ತಿಯೊಳಗೆ ಸುಮಾರು ಏಳೆಂಟು ಸ್ಪಾಂಜ್ ಐರನ್ ಕಾರ್ಖಾನೆಗಳನ್ನು ಕಾಣಬಹುದು. ಇದಲ್ಲದೆ ಖ್ಯಾದ್ಯ ಎಣ್ಣೆ ಉತ್ಪಾದನಾ ಘಟಕ, ಬಿಸ್ಕಿಟ್ ಕಾರ್ಖಾನೆ ಇತ್ಯಾದಿ ಇತರೆ ಕಾರ್ಖಾನೆಗಳನ್ನು ಹೊಸಪೇಟೆ ನಗರದ ಸುತ್ತ ಮುತ್ತಲೂ ಕಾಣಬಹುದು.

ಹೊಸಪೇಟೆ ತಾಲೂಕು ೯೦೪.೧೭ ಚ.ಕಿ.ಮೀ ವ್ಯಾಪ್ತಿಯಲ್ಲಿ ಹರಡಿಕೊಂಡಿದೆ. ಬಳ್ಳಾರಿ ಜಿಲ್ಲೆಯ ಇನ್ನುಳಿದ ಆರು ತಾಲೂಕುಗಳಿಗಿಂತ ಕಡಿಮೆ ವಿಸ್ತೀರ್ಣ (ಶೇ. ೧೦.೭೦)ವನ್ನು ಹೊಂದಿದೆ. ಹೊಸಪೇಟೆ ತಾಲೂಕು ಜಿಲ್ಲೆಯ ಇತರೆ ತಾಲೂಕುಗಳಿಗಿಂತ ಹೆಚ್ಚಿನ ಜನ ಸಾಂದ್ರತೆ ಹೊಂದಿದೆ.

ಸಿರಗುಪ್ಪ ತಾಲೂಕು

ಸಿರಗುಪ್ಪ ತಾಲೂಕು ಹೊಸಪೇಟೆ, ಬಳ್ಳಾರಿ, ಸಿಂಧನೂರು ತಾಲೂಕುಗಳನ್ನು ಹಾಗೂ ಆಂಧ್ರದ ಗಡಿಯನ್ನು ಹೊಂದಿದೆ. ಆಂಧ್ರದ ಗಡಿಗೆ ಹೊಂದಿಕೊಂಡೇ ಇರುವ ಈ ತಾಲೂಕಿನಲ್ಲಿ ತುಂಗಾಭದ್ರಾ ನದಿಯಿಂದಾಗಿ ನೀರಾವರಿ ಕಂಡುಬರುತ್ತದೆ. ಭತ್ತ, ಕಬ್ಬು ಮೆಕ್ಕೆಜೋಳ, ಜೋಳ, ಹತ್ತಿ ಮುಂತಾಗಿ ಬೆಳೆಯಲಾಗುತ್ತದೆ. ಈ ತಾಲೂಕಿನ ಪ್ರಮುಖ ಬೆಳೆಗಳೆಂದರೆ ಕಬ್ಬು ಮತ್ತು ಭತ್ತವಾಗಿವೆ. ಭೌಗೋಳಿಕವಾಗಿ ಬಳ್ಳಾರಿ ಜಿಲ್ಲೆಯಲ್ಲಿಯೇ ವಿಸ್ತಾರದಲ್ಲಿ ಈ ತಾಲೂಕು ನಾಲ್ಕನೇ ಸ್ಥಾನವನ್ನು ಪಡೆದಿದೆ. ಈ ತಾಲೂಕಿನ ಒಟ್ಟು ವಿಸ್ತೀರ್ಣವು ೧,೦೩೬.೧೭ ಚ.ಕಿ.ಮೀಗಳಷ್ಟಿದೆ. ಪ್ರಾಗೈತಿಹಾಸಿಕ ಕುರುಹುಗಳನ್ನು ಅಡಗಿಸಿಟ್ಟುಕೊಂಡಿರುವ ಗುಡ್ಡಗಳು ಈ ತಾಲೂಕಿನಲ್ಲಿ ಕಂಡುಬರುತ್ತವೆ. ಕೃಷಿಯನ್ನು ಆಧರಿಸಿದ ಪ್ರಮುಖ ತಾಲೂಕು ಇದಾಗಿದೆ. ಈ ತಾಲೂಕು ಆರ್ಥಿಕವಾಗಿ ಮುಂದಿದ್ದರೂ ಜಿಲ್ಲೆಯಲ್ಲಿಯೇ ಶೈಕ್ಷಣಿಕವಾಗಿ ಹಿಂದುಳಿದ ತಾಲೂಕೆಂದು

ಗುರುತಿಸಲ್ಪಟ್ಟಿದೆ. ಒಟ್ಟು ೮೪ ಗ್ರಾಮಗಳನ್ನು ಹೊಂದಿರುವ ಈ ತಾಲೂಕಿನಲ್ಲಿ ೪,೨೯೮ ಕುಟುಂಬಗಳು ನೆಲೆನಿಂತಿವೆ. ಆಂಧ್ರದ ಗಡಿಯಾಗಿರುವುದರಿಂದ ಆಂಧ್ರದಿಂದ ವಲಸೆ ಬಂದ ಕೃಷಿಕರು ಅಲ್ಲಲ್ಲಿ ಚಿಕ್ಕ ಚಿಕ್ಕ ಕ್ಯಾಂಪ್‌ಗಳನ್ನು ನಿರ್ಮಿಸಿಕೊಂಡು ಕೃಷಿ ಚಟುವಟಿಕೆಯಲ್ಲಿ ತೊಡಗಿರುವುದು ಕಂಡು ಬರುತ್ತದೆ. ಒಟ್ಟಾರೆಯಾಗಿ ೨೨೭ ರಷ್ಟು ಜನ ಸಾಂದ್ರತೆಯನ್ನು ಈ ತಾಲೂಕು ಹೊಂದಿದೆ.

ಹಗರಿಬೊಮ್ಮನಹಳ್ಳಿ ತಾಲೂಕು

ಬಳ್ಳಾರಿ ಜಿಲ್ಲೆಯಲ್ಲಿ ಎಣ್ಣೆಕಾಳು ಬೀಜೋತ್ಪಾದನೆಗೆ ಹೆಸರುವಾಸಿಯಾದ ತಾಲೂಕು ಹಗರಿಬೊಮ್ಮನಹಳ್ಳಿ, ಹಡಗಲಿ, ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ ತಾಲೂಕುಗಳಿಂದ ಸುತ್ತುವರೆದಿರುವ ಈ ತಾಲೂಕನ್ನು ಹಾಯ್ದು ತುಂಗಾಭದ್ರ ನದಿ ಮುಂದೆ ಬರುವುದಾದರೂ ಆ ತಾಲೂಕಿಗೆ ನದಿಯಿಂದಾದ ಉಪಯೋಗ ಅತ್ಯಲ್ಪ ಎಂದೇ ಹೇಳಬಹುದು. ತುಂಗಾಭದ್ರ ನದಿ ದಂಡೆಯಲ್ಲಿನ ಭೂಮಿಗಳಿಗೆ ಪಂಪ್‌ಸೆಟ್‌ಗಳ ಮೂಲಕ ನದಿ ನೀರನ್ನು ಹರಿಸಲಾಗುವುದಾದರೂ ತಾಲೂಕಿನ ಎಲ್ಲಾ ಭೂಮಿಗಳಿಗೆ ನೀರನ್ನು ಹಾಯಿಸಲು ಸಾಧ್ಯವಾಗಿಲ್ಲದಿರುವುದು ಕಂಡುಬರುತ್ತದೆ.ಈ ತಾಲೂಕಿನ ಮಾಲವಿ ಎಂಬ ಗ್ರಾಮದಲ್ಲಿ ಹಗರಿಗೆ ಆಣೆಕಟ್ಟನ್ನು ಕಟ್ಟಲಾಗಿದೆಯಾದರೂ ಮಳೆ ಪ್ರಮಾಣ ಅತ್ಯಲ್ಪವಾಗಿರುವ ಪ್ರದೇಶ ಇದಾಗಿರುವುದರಿಂದ ಮಾಲವಿ ಆಣೆಕಟ್ಟಿನಲ್ಲಿ ಮಳೆಯಾದ ವರ್ಷ ಮಾತ್ರ ನೀರನ್ನು ಕಾಣಬಹುದು. ಬಳ್ಳಾರಿ ಜಿಲ್ಲೆಯಲ್ಲಿ ಮೊದಲಿಗೆ ಈ ತಾಲೂಕಿಗೆ ಮಲ್ಲಾಪುರ ತಾಲೂಕು ಎಂದು ಕರೆಯಲಾಗುತ್ತಿತ್ತಾದರೂ ದಶಕಗಳ ಹಿಂದೆ ಮಲ್ಲಾಪುರ ಹೆಸರನ್ನು ತೆಗೆದು ಹಾಕಿ ಹಗರಿಬೊಮ್ಮನಹಳ್ಳಿ ತಾಲೂಕೆಂದು ಮರುನಾಮಕರಣ ಮಾಡಲಾಯಿತು. ಬಹುತೇಕ ಮಳೆಯಾಶ್ರಿತ ಭೂಮಿಯನ್ನು ಹೊಂದಿರುವ ಈ ತಾಲೂಕಿನ ಒಟ್ಟು ವಿಸ್ತೀರ್ಣವು ೯೭೩.೯೫ ಚ.ಕಿ.ಮೀ ಗಳು. ಇಡೀ ತಾಲೂಕಿನಲ್ಲಿ ಹಗರಿಬೊಮ್ಮನಹಳ್ಳಿಯಂತಹ ಚಿಕ್ಕ ಪಟ್ಟಣದಾಚೆ ಒಂದೇ ಒಂದು ನಗರ ಪ್ರದೇಶವನ್ನು ಕಾಣಲು ಸಾಧ್ಯವಾಗುವುದಿಲ್ಲ. ಇಡೀ ತಾಲೂಕಿನಲ್ಲಿ ನೆಲೆನಿಂತಿರುವ ಒಟ್ಟು ಕುಟುಂಬಗಳು ೨೮,೮೭೧ ರಷ್ಟು. ಈ ತಾಲೂಕಿನ ಒಟ್ಟು ಜನ ಸಾಂದ್ರತೆಯು ೧೬೪ ರಷ್ಟಿದೆ.

ಕೂಡ್ಲಿಗಿ ತಾಲೂಕು

ಬಳ್ಳಾರಿ ಜಿಲ್ಲೆಯಲ್ಲಿಯೇ ಆರ್ಥಿಕವಾಗಿ ತುಂಬಾ ಹಿಂದುಳಿದ ತಾಲೂಕೆಂದು ಗುರುತಿಸಲ್ಪಟ್ಟ ತಾಲೂಕು ಕೂಡ್ಲಿಗಿಯಾಗಿದೆ. ಜಿಲ್ಲಾ ಕೆಂದ್ರದಿಂದ ಸುಮಾರು ೧೦೦ ಕಿ.ಮೀ ಗಳಷ್ಟು ಅಂತರದಲ್ಲಿ ತಾಲೂಕು ಕೇಂದ್ರವಿದೆ. ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಸಂಡೂರು

ತಾಲೂಕುಗಳು ಹಾಗೂ ಚಿತ್ರದುರ್ಗ ಜಿಲ್ಲೆಯಿಂದ ಸುತ್ತುವರೆದಿರುವ ಈ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದವರು ಶೇಕಡ ೨೭.೧ ರಷ್ಟಿದ್ದಾರೆ. ಸಾಂಸ್ಕೃತಿಕವಾಗಿ ಸಮೃದ್ಧವಾಗಿರುವ ಈ ತಾಲೂಕು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದೆ. ಬಳ್ಳಾರಿ ತಾಲೂಕಿನ ನಂತರ ಅತೀ ವಿಸ್ತಾರವಾದ ಭೂ ವಿಸ್ತೀರ್ಣವನ್ನು ಹೊಂದಿರುವ ತಾಲೂಕು ಇದಾಗಿದೆ. ಇದರ ಒಟ್ಟು ವಿಸ್ತೀರ್ಣವು ಭೌಗೋಳಿಕವಾಗಿ ೧,೫೨,೮೮೮.೮೦ ಹೆಕ್ಟೇರ್ ಹಾಗೂ ೧.೬೧೮.೮೭ ಚ.ಕಿ.ಮೀಟರ್‌ಗಳಷ್ಟು ವಿಸ್ತಾರವಾಗಿದೆ. ಜಿಲ್ಲೆಯಲ್ಲಿಯೇ ಅತೀ ಹೆಚ್ಚು ಗ್ರಾಮಗಳನ್ನು ಹೊಂದಿರುವ ಈ ತಾಲೂಕಿನಲ್ಲಿ ಒಟ್ಟು ೯೧ ಗ್ರಾಮಗಳಿವೆ. ತಾಲೂಕಿನಲ್ಲಿ ಕೂಡ್ಲಿಗಿಯ ನಂತರ ಕೊಟ್ಟೂರು ಪಟ್ಟಣ ಪ್ರದೇಶವಾಗಿದೆ. ಅವೆರಡರ ಹೊರತಾಗಿ ಇನ್ನುಳಿದವುಗಳೆಲ್ಲಾ ಹಳ್ಳಿಗಳೇ ಆಗಿವೆ. ಇಲ್ಲಿಯ ಬಹುತೇಕ ಗ್ರಾಮಗಳಿಗೆ ಇಂದಿಗೂ ಸಮರ್ಪಕವಾದ ಬಸ್ಸಿನ ಸೌಲಭ್ಯ ಅಥವಾ ಸಾರಿಗೆ ಸಂಪರ್ಕವಿಲ್ಲವಾಗಿದೆ.

ಒಟ್ಟು ೪೮,೬೪೬ ಕುಟುಂಬಗಳನ್ನು ಈ ತಾಲೂಕು ಹೊಂದಿದೆ. ಮಳೆಯಾಶ್ರಿತ ಚಿಕ್ಕ ಪುಟ್ಟ ಕೆರೆಗಳ ಹೊರತಾಗಿ ಇಲ್ಲಿಯ ಜನರಿಗೆ ಸಮರ್ಪಕವಾದ ನೀರಾವರಿ ಸೌಲಭ್ಯವಿಲ್ಲ. ಇಂದಿಗೂ ಮಳೆಯಾಶ್ರಿತ ಒಣಬೇಸಾಯ ಕ್ರಮವನ್ನೇ ರೈತರು ಅನುಸರಿಸುತ್ತಿರುವುದನ್ನು ತಾಲೂಕಿನಾದ್ಯಂತ ಕಾಣಬಹುದು. ಈ ತಾಲೂಕಿನ ಜನಸಾಂದ್ರತೆಯು ೧೬.೮ರಷ್ಟಿದೆ.

೨೦೧೧ ರ ಜನಗಣತಿ ಪ್ರಕಾರ ಈ ತಾಲೂಕಿನ ಒಟ್ಟು ಜನಸಂಖ್ಯೆ ೨,೫೫,೯೩೨ ಇದೆ. ಇದರಲ್ಲಿ ಪುರುಷರು ೧,೩೦,೭೮೪ ಹಾಗೂ ಮಹಿಳೆಯರು ೧,೨೫,೧೪೮ ರಷ್ಟಿದ್ದಾರೆ. ಈ ತಾಲೂಕಿನ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೫೯,೬೮೨ ಇದ್ದು ಪುರುಷರು ೩೦,೩೨೨ ಹಾಗೂ ಮಹಿಳೆಯರು ೨೯,೩೬೦ ರಷ್ಟಿದ್ದಾರೆ. ಹಾಗೇ ಪರಿಶಿಷ್ಟ ಪಂಗಡದಲ್ಲಿ ಒಟ್ಟು ಜನಸಂಖ್ಯೆ ೭೫,೩೨೯ ಇದ್ದು ಇದರಲ್ಲಿ ಪುರುಷರು ೩೮,೧೯೭ ಹಾಗೂ ಮಹಿಳೆಯರು ೩೭,೧೩೨ ರಷ್ಟು ಕಂಡುಬರುತ್ತಾರೆ. ಜಿಲ್ಲೆಯಲ್ಲಿ ಡುಂಗ್ರಿಗರಾಸಿಯ, ಹಕ್ಕಿ ಪಿಕ್ಕಿ, ಮೇಧ ಮುಂತಾದ ಪರಿಶಿಷ್ಟ ಪಂಗಡದ ಸಮುದಾಯಗಳು ಕಂಡು ಬರುತ್ತವೆಯಾದರೂ ಕೂಡ್ಲಿಗಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡಗಳಲ್ಲಿ ವಾಲ್ಮೀಕಿ ಸಮುದಾಯದವರೇ ಶೇಕಡ ೯೯ ರಷ್ಟು ಕಂಡು ಬರುತ್ತಾರೆ.

ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಪ್ರಮಾಣವು ಶೇಕಡ ೧೯.೨ ರಷ್ಟಿದ್ದರೆ ಪರಿಶಿಷ್ಟ ಪಂಗಡದವರ ಪ್ರಮಾಣವು ಶೇಕಡ ೨೭.೧ ರಷ್ಟಿದೆ. ತಾಲೂಕಿನ ರಾಜಕೀಯ ಹಿಡಿತ ಮೇಲ್ವರ್ಗಗಳದ್ದಾದರೂ ಅದರ ನಿರ್ಣಾಯಕ ಶಕ್ತಿಯಿರುವುದು

ಪರಿಶಿಷ್ಟ ಪಂಗಡದಲ್ಲಿದೆ ಎಂಬ ನಂಬುಗೆಯನ್ನು ಈ ತಾಲೂಕು ಉಳಿಸಿಕೊಂಡಿದೆ. ಪ್ರಸ್ತುತ ಕೂಡ್ಲಿಗಿಯು ವಿಧಾನ ಸಭಾ ಸದಸ್ಯರ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರವಾಗಿದೆ. ಜಿಲ್ಲೆಯ ಸಾಕ್ಷರರಿಗೆ ಹೋಲಿಸಿದರೆ ಈ ತಾಲೂಕಿನ ಒಟ್ಟು ಸಾಕ್ಷರತೆಯ ಪ್ರಮಾಣವು ಶೇಕಡ ೬೦ ರಷ್ಟಿದೆ. ಇದರಲ್ಲಿ ಪುರುಷರು ಶೇಕಡ ೬೦ ರಷ್ಟು ಸಾಕ್ಷರರಿದ್ದರೆ ಮಹಿಳೆಯರು ಶೇಕಡ ೪೦ರಷ್ಟು ಸಾಕ್ಷರರಾಗಿದ್ದಾರೆ. ಈ ಜಿಲ್ಲೆಯ ಇತರ ತಾಲೂಕುಗಳಿಗೆ ಹೋಲಿಸಿದರೆ ಸಾಕ್ಷರತೆಯ ಪ್ರಮಾಣದಲ್ಲಿ ಹೊಸಪೇಟೆ (ಶೇ೬೦.೯)ಯ ನಂತರದ ಸ್ಥಾನ ಕೂಡ್ಲಿಗೀ ಸಲ್ಲುತ್ತದೆ.

ಈ ತಾಲೂಕಿನ ಶೇಕಡ ೯೦ ರಷ್ಟು ಗ್ರಾಮಗಳಲ್ಲಿ ಮ್ಯಾಸನಾಯಕರು ನೆಲೆಸಿದ್ದಾರೆ. ಆದರೆ ಅಧ್ಯಯನಕ್ಕೆ ತಾಲೂಕಿನ ೨೦ ಗ್ರಾಮಗಳನ್ನು ಮಾತ್ರ ಆಯ್ಕೆಮಾಡಿಕೊಳ್ಳಲಾಗಿದೆ. ಅವುಗಳು ಕ್ರಮವಾಗಿ ಈ ಕೆಳಗಿನಂತಿವೆ.

ಚೌಡಾಪುರ ಗ್ರಾಮಪಂಚಾಯತಿಗೆ ಸೇರಿದ ಚೌಡಾಪುರ, ಕ್ಯಾಸನಕೆರೆ, ಐಗಳ ಮಲ್ಲಾಪುರ

ಸೂಲದಹಳ್ಳಿ ಗ್ರಾಮಪಂಚಾಯತಿಗೆ ಸೇರಿದ ಸೂಲದಹಳ್ಳಿ, ಗುಣಸಾಗರ, ಪಾಲಯ್ಯನಕೋಟೆ

ಹಾರಕಬಾವಿ ಗ್ರಾಮಪಂಚಾಯತಿಗೆ ಸೇರಿದ ಹಾರಕಬಾವಿ, ಶಾಂತನಹಳ್ಳಿ, ಬೆಳಗಟ್ಟೆ

ಬಣವಿಕಲ್ಲು ಗ್ರಾಮಪಂಚಾಯತಿಯ ಬಣವಿಕಲ್ಲು ಮತ್ತು ಜುಟ್ಟನಿಂಗನಹಟ್ಟಿ

ನಿಂಬಳಗೆರೆ ಗ್ರಾಮಪಂಚಾಯತಿಯ ನಿಂಬಳಗೆರೆ, ಯರಮ್ಮನಹಳ್ಳಿ ಹಾಗೂ ಗಾಣಗಟ್ಟೆ

(ಹೆಚ್ಚು ಮ್ಯಾಸಬೇಡರನ್ನು ಹೊಂದಿದ ಗ್ರಾಮ)

ಮೊರಬ ಗ್ರಾಮಪಂಚಾಯತಿ ವ್ಯಾಪ್ತಿಯ ಮೊರಬನಹಳ್ಳಿ ಹಾಗೂ ಬೀರಲಗುಡ್ಡ

ಮಾಕನಡಕು, ಎಂ.ಬಿ. ಐಯ್ಯನಹಳ್ಳಿ, ದಾಸರ ಹೋಬನಹಳ್ಳಿ, ಚಿರಬಿ ಗ್ರಾಮಗಳಾಗಿವೆ. ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಈ ಗ್ರಾಮಗಳು ತಾಲೂಕು ಕೇಂದ್ರದಿಂದ ೧೫ ಕಿಲೋಮೀಟರ್ ವ್ಯಾಪ್ತಿಯಿಂದ ೨೫ ಕಿಲೋಮೀಟರ್ ವ್ಯಾಪ್ತಿಯ ಒಳಗಿವೆ.

<u>ಆಧಾರ</u>

ಬಳ್ಳಾರಿ ಜಿಲ್ಲಾ ಜನಗಣತಿ ವರದಿ ಕೈಪಿಡಿ (೨೦೧೧), ಕರ್ನಾಟಕ ಸರ್ಕಾರ, ಬೆಂಗಳೂರು.

ಅಧ್ಯಾಯ–೩

ಅ. ಬೇಡನಾಯಕ ಸಮುದಾಯದ ಒಳಪಂಗಡಗಳ ಸ್ಥೂಲ ಪರಿಚಯ
ಆ. ಮ್ಯಾಸಬೇಡರ ಪಶುಪಾಲನೆ ಮತ್ತು ಆರ್ಥಿಕತೆ

೩.೧ ಅಧ್ಯಯನಕ್ಕೆ ಆಯ್ದುಕೊಂಡ ಕುಟುಂಬಗಳ ಜನಸಂಖ್ಯೆಯ ವಿವರ
೩.೨ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಗ್ರಾಮವಾರು ಕುಟುಂವಾರು ಜನಸಂಖ್ಯೆ ವಿವರ
೩.೩ ಸಮೀಕ್ಷೆಗೊಳಪಟ್ಟ ಕುಟುಂಬಗಳ ವಯೊಗುಂಪುವಾರು ವಿವರ
೩.೪ ಶಿಕ್ಷಣ
೩.೫ ಸಮೀಕ್ಷೆಗೊಳಪಟ್ಟ ಮ್ಯಾಸಬೇಡರ ಶೈಕ್ಷಣಿಕ ಸ್ಥಿತಿಗತಿ
೩.೬ ಸಮೀಕ್ಷೆಗೊಳಪಟ್ಟ ಮ್ಯಾಸಬೇಡ ಸಮುದಾಯದ ಲಿಂಗವಾರು ಸಾಕ್ಷರರ್ಹರು
ಸಾಕ್ಷರಸ್ಥರು ಮತ್ತು ನಿರಕ್ಷರಿಗಳು
೩.೭ ಸಮೀಕ್ಷೆಗೊಳಪಟ್ಟ ಮ್ಯಾಸಬೇಡ ಸಮುದಾಯದ ಲಿಂಗವಾರು ಶೈಕ್ಷಣಿಕ ಪ್ರಮಾಣ
೩.೮ ಕಾಯಕಾರ್ಹರು ವಿವರ
೩.೯ ಮ್ಯಾಸಬೇಡರ ಮೂಲ ಕಸುಬು
೩.೧೦ ಅಧ್ಯಯನಕ್ಕೊಳಪಡಿಸಿದ ಮ್ಯಾಸಬೇಡರ ಕುಟುಂಬಗಳಲ್ಲಿ ಪಶುಪಾಲನೆ
ಮಾಡುವವರ ವಿವರ
೩.೧೧ ಪಶುಪಾಲನೆಗೆ ಹೊರತಾದ ಇತರ ವೃತ್ತಿಗಳ ವಿವರ

ಅಧ್ಯಾಯ–೩

ಅ. ಬೇಡನಾಯಕ ಸಮುದಾಯದ ಒಳಪಂಗಡಗಳ ಸ್ಥೂಲ ಪರಿಚಯ

ಬೇಡನಾಯಕ ಸಮುದಾಯವು ತುಂಬಾ ಸ್ವಾಭಿಮಾನದ ಬದುಕನ್ನು ಬದುಕಿದ ಸಮುದಾಯಗಳಲ್ಲೊಂದು. ಮುಖ್ಯವಾಗಿ ಬುಡಕಟ್ಟು ಲಕ್ಷಣಗಳನ್ನು ಹೊಂದಿದ ಈ ಸಮುದಾಯವು ತಮ್ಮದೇ ಆದ ಗುಂಪುಗಳನ್ನು ರಚಿಸಿಕೊಂಡು ಜೀವನ ನಿರ್ವಹಣೆ ಮಾಡುತ್ತವೆ. ಇವುಗಳದೇ ಆದ ಕಟ್ಟೆಮನೆ ಪದ್ಧತಿ, ಜಾತಿ ಪಂಚಾಯ್ತಿಗಳನ್ನು ಇಂದಿಗೂ ಕಾಣಬಹುದು. ಒಂದು ಬುಡಕಟ್ಟು ಸಮುದಾಯ ಮತ್ತೊಂದು ಬುಡಕಟ್ಟು ಸಮುದಾಯದೊಂದಿಗೆ ಅಥವಾ ಬೇರೆ ಜಾತಿಯೊಂದಿಗೆ ಯಾವುದೇ ಕಾರಣಕ್ಕೂ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದಿಲ್ಲ. ಪ್ರತಿಯೊಂದು ಬುಡಕಟ್ಟಿಗೂ ಅವರದೇ ಆದ ವಿಶಿಷ್ಟ ಬೆಡಗುಗಳು, ಆರಾಧನಾ ದೈವಗಳು ಇವೆ. ಇವರದೇ ಆದ ಸಾಂಸ್ಕೃತಿಕ ನಾಯಕರು ಇಂದು ದೈವಗಳಾಗಿ ಪೂಜೆಗೊಳ್ಳುತ್ತವೆ. ಸಚೇತನವಾದಿಗಳಾದ ಬುಡಕಟ್ಟುಗಳು ವೈವಾಹಿಕ ಸಂಬಂಧಗಳನ್ನು ಬೆಳೆಸಲು ಮುಖ್ಯವಾಗಿ ಬೆಡಗುಗಳನ್ನು ಆಧಾರವಾಗಿ ಇರಿಸಿಕೊಳ್ಳುತ್ತವೆ.

ಬೇಡ ನಾಯಕರಲ್ಲಿ ಒಳಪಂಗಡಗಳು ಹಲವಾರಿವೆ. ಇದರಲ್ಲಿ ಮುಖ್ಯವಾಗಿ

* ಊರನಾಯಕರು

* ಮ್ಯಾಸನಾಯಕರು

* ಕರಕರಮೊಂಡ

* ಬುಟ್ಟೆ ನಾಯಕರು – ಮುಂತಾದ ಪಂಗಡಗಳು ಕಂಡುಬರುತ್ತವೆ. ಇಂದು ಬುಟ್ಟೆ ನಾಯಕರು ಎಲ್ಲಿದ್ದಾರೆ ಎಂಬುದು ತಿಳಿದುಬರುವುದಿಲ್ಲವಾದರೂ ಊರ ನಾಯಕರ ಮತ್ತು ಇನ್ನುಳಿದ ಮ್ಯಾಸನಾಯಕ, ಕರಕರ ಮೊಂಡ ಸಮುದಾಯಗಳು ಕಂಡು ಬರುತ್ತವೆ. ಈ ಮೂರು ಪಂಗಡಗಳು ಒಂದೇ ಜಾತಿ ಮೂಲದವರಾದರೂ ಇವುಗಳ ನಡುವೆ ಯಾವುದೇ ರೀತಿಯ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ.

ಕರಕರ ಮೊಂಡರು ಮತ್ತು ಊರ ನಾಯಕರು ದನ, ಹಂದಿ, ಕುರಿ, ಕೋಳಿ, ಉಡ ಮುಂತಾದ ಪ್ರಾಣಿಗಳ ಮಾಂಸವನ್ನು ಭಕ್ಷಣೆ ಮಾಡುತ್ತಾರೆ. ಆದರೆ ಮ್ಯಾಸ ನಾಯಕರು ಕುರಿ, ಕಾಡು ಹಂದಿ ಮತ್ತು ಇತರ ಕಾಡುಪ್ರಾಣಿಗಳನ್ನು ತಿನ್ನುವರಾದರೂ ಕೋಳಿ ಮತ್ತು ಕೋಳಿಯ ಮೊಟ್ಟೆ ಇವರಿಗೆ ನಿಷಿದ್ಧವಾಗಿದೆ. ಹಾಗೇ ಈಚಲು ಹೆಂಡ, ಈಚಲು ಚಾಪೆ, ಈಚಲು ಹಣ್ಣು

ಯಾವುದನ್ನೂ ಇವರು ಬಳಸುವುದಿಲ್ಲ. ಕೋಳಿ ಮತ್ತು ಈಚಲು ಪದಾರ್ಥಗಳನ್ನು ಬಳಸಿದರೆ ಅಂಥವರನ್ನು ಕುಲದಿಂದ ಹೊರಗಿಡುವ ಪದ್ಧತಿ ಇವರಲ್ಲಿದೆ.

ಕಾಡುಗೊಲ್ಲರಂತೆ ಮ್ಯಾಸನಾಯಕರು ಸಹ ಪ್ರತ್ಯೇಕವಾದ ಹಟ್ಟಿಗಳಲ್ಲಿ ವಾಸ ಮಾಡುವ ಪದ್ಧತಿಯನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಆದರೆ ಕರಕರ ಮೊಂಡರು ಇಂದಿಗೂ ಅಲೆಮಾರಿಗಳಾಗಿಯೇ ಜೀವನ ನಿರ್ವಹಣೆ ಮಾಡುತ್ತಾರೆ ಮತ್ತು ಬಿಕ್ಷಾಟನೆಯನ್ನೇ ಮುಖ್ಯ ವೃತ್ತಿಯಾಗಿಸಿಕೊಂಡಿದ್ದಾರೆ. ಅದೇ ರೀತಿ ಡುಂಗ್ರಿಗರಾಸಿಯ ಮತ್ತು ಹಕ್ಕಿಪಿಕ್ಕಿ ಸಮುದಾಯಗಳು ಸಹ ಅಲೆಮಾರಿ ಸಮುದಾಯಗಳಾಗಿಯೇ ಉಳಿದಿವೆ.

ಮ್ಯಾಸಬೇಡರು ಮತ್ತು ಊರಬೇಡರ ನಡುವೆ ಆಚರಣೆಗಳಲ್ಲಿ ವ್ಯತ್ಯಾಸ ಕಂಡುಬರುವುದಾದರೂ ಶೇಕಡ ಎಂಬತ್ತರಷ್ಟು ಆಚರಣೆಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಬೆಡಗುಗಳಲ್ಲಿಯೂ ಬಹುತೇಕ ಹೋಲಿಕೆ ಇದೆ.

ಊರ ನಾಯಕರು ಗಂಡಿನ ಮನೆಮುಂದೆ ಮದುವೆ ಮಾಡುತ್ತಾರೆ. ಅತ್ತಿಕಂಬ, ಆಲಗಂಬ ತರುವುದು, ಮನೆ ಮುಂದೆ ಚಪ್ಪರ ಹಾಕುವುದು, ಐರಣಿ ಮತ್ತು ಸುರಗಿ ಪದ್ಧತಿಗಳು ಜಾರಿಯಲ್ಲಿವೆ. ತಾಳಿ ಕಟ್ಟಲು ಪುರೋಹಿತರನ್ನು ಕರೆಸುತ್ತಾರೆ. ಆದರೆ ಮ್ಯಾಸ ನಾಯಕರು ಹೆಣ್ಣಿನ ಮನೆ ಮುಂದೆ ಮದುವೆ ಮಾಡುತ್ತಾರೆ. ಬಾಸಿಂಗ ದಂಡೆಯನ್ನು ಕಟ್ಟುವುದಿಲ್ಲ. ಗಂಡಿಗೆ ರುಮಾಲನ್ನು ಸುತ್ತಿದರೆ ಹೆಣ್ಣಿಗೆ ಕೇವಲ ಹೂವು ಮುಡಿಸುತ್ತಾರೆ. ಮ್ಯಾಸ ನಾಯಕರು ತಮ್ಮ ಹಟ್ಟಿಗಳಲ್ಲಿಯೇ ಮದುವೆ ಮಾಡುತ್ತಾರೆ. ಕಟ್ಟೆಮನೆಯ ಯಜಮಾನನೇ ಪುರೋಹಿತನಂತೆ ಮದುವೆ ಕಾರ್ಯಗಳನ್ನು ನಡೆಸಿಕೊಡುತ್ತಾನೆ. ಇವರಲ್ಲಿ ಇಂದಿಗೂ ತೆರ ಪದ್ಧತಿ ಜಾರಿಯಲ್ಲಿದೆ.

ಮ್ಯಾಸ ನಾಯಕರಲ್ಲಿ ಮಂಡಲರು ಮತ್ತು ಮಲ್ಲಿನಾಯಕರು ಎಂಬ ಎರಡು ಪಂಗಡಗಳಿವೆ. ಈ ರೀತಿಯ ಪಂಗಡಗಳು ಊರ ನಾಯಕರಲ್ಲಿ ಕಂಡುಬರುವುದಿಲ್ಲ. ಈ ಎರಡು ಪಂಗಡಗಳು ತಮ್ಮನ್ನು ಚಂದ್ರವಂಶ ಮತ್ತು ಸೂರ್ಯವಂಶಗಳಿಗೆ ಸೇರಿದವರು ಎಂದು ತಿಳಿಸುತ್ತಾರೆ. ಈ ಎರಡು ಪಂಗಡಗಳ ನಡುವೆ ವೈವಾಹಿಕ ಸಂಬಂಧಗಳು ಏರ್ಪಡುತ್ತವೆ. ಊರ ನಾಯಕರಲ್ಲಿ ನೆಲ್ಲಬಾಮುಡ್ಲು, ಎನುಮಲೋರು, ಡೋಣಮಂಡ್ಲು, ಬೋಸುರಲು, ನಶೆನೋರು, ಮುನ್ನೋಲ್ಲೋರು, ಗಟ್ಟಿಮತ್ಯೇರು, ಕುಂಬ್ರೇಲು, ಕಾದುಗಡ್ಲೇರು, ಎತ್ತಿನೋರು, ದಡ್ಡಿದಾಸರಿಗಳು, ಪಾಲಜ್ಜಿಗಳು, ಗಾಡವುಲು, ಪುವ್ವಲೋರು, ಓಬನಾಯಕರು, ಪಟ್ಟಪಲ್ಲಾರು, ಭಾನೋರ್, ಬೋನಳ್ಳಿಯೋರ್, ಚಿನ್ನನಾಯ್ಕಲು, ಪಾಮಲ್ಲೇರು, ರಾಯಬೋರ್, ಬಡಸಲೋರ್ ಮುಂತಾದ ಬೆಡಗುಗಳು ಕಂಡುಬರುತ್ತವೆ.

ಮ್ಯಾಸನಾಯಕರಲ್ಲಿ ಮಲ್ಲಿನಾಯಕರು, ಯರಮಂಚನಾಯಕರು, ಮಂದಾಲರು, ಬುಡಗ್ಲೋರು, ಮಂಡ್ಲೋರು ಮುಂತಾದ ಪ್ರಮುಖ ಬೆಡಗುಗಳಿದ್ದು ಅವುಗಳಲ್ಲಿ ಮತ್ತೆ ಉಪಬೆಡಗುಗಳು ಕಂಡು ಬರುತ್ತವೆ.

ಮಲ್ಲಿನಾಯಕ ಬೆಡಗಿನಲ್ಲಿ ಈಶ್ವರೋರು, ಎನುಮನಲೋರ್, ಓಬನಾಯಕರು, ಕಾಟಮಲ್ಲರ್, ಚೆನ್ನಕಾದನೋರ್, ಪೆದ್ಧನಾಯಕರು, ಕೇರುಲೋರ್, ಮೇಸಲೋರ್, ಎಡೇಲೋರು ಎಂಬ ಉಪ ಬೆಡಗುಗಳಿವೆ.

ಯರಮಂಚ ನಾಯಕರಲ್ಲಿ ಅಚ್ಚಪುವೇರ್, ಕರೇನೋರ್, ನಲಗಟೇರ್, ಯರಗೋಟಿಯೇರ್, ಯರಗಟ್ಲಾರ್, ಎಡೇಲರ್ ಎಂದಿವೆ.

ಮಂದಾಲರಲ್ಲಿ ಕಾಮಗೇತಿ, ಗಾದ್ರಿಪಾಲ, ಬುಲ್ಲೋಡರ್, ಸಾಕಲೋರು ಎಂದಿವೆ.

ಮಂಡ್ಲೋರಲ್ಲಿ ಜರಕಡ್ಲು ಪಾಮುಡ್ಲು, ನಲ್ಲ ಪಾಮುಡ್ಲು, ಪೂಜಾರಳ್ಳಿ ಪಾಮುಡ್ಲು, ಯರಪಾಲಮುಡ್ಲುಗಳು ಎಂದಿವೆ.

ದಾಸರಲ್ಲಿ ಗುಗ್ರಿದಾಸರು, ಗೊಡಗು ದಾಸರು, ಬೋಡ ದಾಸರು, ದಡ್ಡಿ ದಾಸರು ಎಂಬ ಉಪಬೆಡಗುಗಳು ಕಂಡುಬರುತ್ತವೆ.

ಮ್ಯಾಸನಾಯಕರು ಮೂಲತಃ ಸಚೇತನವಾದಿಗಳು ಮತ್ತು ಮಾತೃ ದೇವತಾರಾಧನೆಯನ್ನು ಆರಾಧಿಸುತ್ತದೆ. ಆದರೆ ಮ್ಯಾಸನಾಯಕರು ಪ್ರಧಾನವಾಗಿ ಆರಾಧನೆ ಮಾಡುವುದು ತಮ್ಮ ಸಮುದಾಯದ ಸಾಂಸ್ಕೃತಿಕ ವೀರರನ್ನು. ಉದಾಹರಣೆಗೆ ಚಿನ್ನೋಬಳ, ಓಬಳ, ಎತ್ತಪ್ಪ, ಮಿಂಚೇರಪ್ಪ, .. ಮುಂತಾದವರು ಮೂಲತಃ ಸಾಂಸ್ಕೃತಿಕ ವೀರರಾಗಿದ್ದಾರೆ. ಇವರೆಲ್ಲರ ಸಮಾದಿ ಸ್ಥಳಗಳೇ ಇಂದು ಮ್ಯಾಸಬೇಡರ ಗುಂಪುಗಳ ಸಾಂಸ್ಕೃತಿಕ ಕೇಂದ್ರಗಳಾಗಿವೆ. ಹಾಗೆಯೇ ಅವರು ಪಶುಪಾಲನೆ ಮಾಡುತ್ತಿದ್ದ ದನಗಳ ಮುಂದುವರೆದ ವಂಶದ ದನಗಳನ್ನು ಕಿಲಾರಿ ದನಗಳು ಅಥವಾ ದೇವರ ದನಗಳೆಂದು ಪೂಜಿಸಲಾಗುತ್ತದೆ. ಅದು ಮ್ಯಾಸಬೇಡರಿಗೆ ಪವಿತ್ರವಾದ ಕೆಲಸವೆಂದೇ ಭಾವಿಸುತ್ತಾರೆ.

ನಾಯಕ ಸಮುದಾಯದ ಒಳಪಂಗಡಗಳೆಂದು ಹೇಳಿಕೊಳ್ಳುವ ಕರಕರ ಮೊಂಡರಲ್ಲಿ ಮಹಿಳೆಯರನ್ನು ದೇವರಿಗೆ ಬಿಡುವುದು ಅಥವಾ ದೇವದಾಸಿ ಪದ್ಧತಿ ಆಚರಣೆಯಲ್ಲಿಲ್ಲ. ಆದರೆ ಮ್ಯಾಸನಾಯಕ ಮತ್ತು ಊರನಾಯಕರಲ್ಲಿ ಮಹಿಳೆಯರನ್ನು ದೇವರಿಗೆ ಬಿಡುವ ಅಥವಾ ದೇವದಾಸಿ ಪದ್ಧತಿ ಜಾರಿಯಲ್ಲಿದೆ. ಪ್ರಾಯಶಃ ಮಧ್ಯಕಾಲೀನ ಕರ್ನಾಟಕದ ರಾಜರ ಆಡಳಿತ

ಸಂದರ್ಭದಲ್ಲಿ ನಾಯಕ ಸಮುದಾಯದಲ್ಲಿ ಇಂತಹ ಅನಿಷ್ಟ ಆಚರಣೆ ಪ್ರವೇಶ ಪಡೆದಿರಬೇಕು. ಹಿಂದೆ ರಾಜರ ಸೇವಕರಾಗಿ, ಸೈನಿಕರಾಗಿ ನಾಯಕ ಪುರುಷರು ರಾಜ ಮಹಾರಾಜರ ಸೇವೆ ಮಾಡಿದರೆ ಅವರ ಕುಟುಂಬದ ಮಹಿಳೆಯರು ದೇವರ ಸೇವೆಯ ಹೆಸರಿನಲ್ಲಿ ರಾಜಮಹಾರಾಜರ ಲೈಂಗಿಕ ಅಬಿಲಾಷೆಯನ್ನು ತೀರಿಸುವವಳಾಗಿ ಕಾರ್ಯನಿರ್ವಹಿಸುತ್ತಿದ್ದಳೆನಿಸುತ್ತದೆ. ಈ ಅನಿಷ್ಟ ಪದ್ಧತಿ ದೇವರ ಹೆಸರಿನಲ್ಲಿ ಇಂದಿಗೂ ಜಾರಿಯಲ್ಲಿರುವುದು ಕಂಡುಬರುತ್ತದೆ. ಇವರ ಈ ಪದ್ಧತಿಗೆ ಹುಲಿಗೆಮ್ಮ, ಯಲ್ಲಮ್ಮನಂತಹ ದೈವಗಳು ನೆರವಾಗಿವೆ. ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ಕೂಡ್ಲಿಗಿ, ಕಮಲಾಪುರ, ಹೊಸಪೇಟೆ, ಬಳ್ಳಾರಿಯಂತಹ ಊರುಗಳಲ್ಲಿ ದೇವದಾಸಿ ಹೆಸರಿನಲ್ಲಿ ಜೀವನ ನಿರ್ವಹಣೆ ಮಾಡುವ ನಾಯಕ ಸಮುದಾಯದ ಮಹಿಳೆಯರನ್ನು ಕಾಣಬಹುದು. ದೇವದಾಸಿ ಪದ್ಧತಿ ಅಳವಡಿಸಿಕೊಂಡ ಏಕೈಕ ಕಾರಣಕ್ಕಾಗಿ ಈ ನಾಯಕ ಸಮುದಾಯದ ಬಹುತೇಕ ಮಹಿಳೆಯರು ಸಾಮಾಜಿಕವಾಗಿ ತುಂಬಾ ಅಪಮಾನಕಾರಿ ಜೀವನ ನಿರ್ವಹಿಸಬೇಕಾದಂತಹ ಅನಿವಾರ್ಯ ಸ್ಥಿತಿ ನಿರ್ಮಾಣವಾಗಿದೆ. ಇತ್ತೀಚೆಗೆ ವಿದ್ಯಾಭ್ಯಾಸ ನಡೆಸಿ ಶಿಕ್ಷಿತರಾದ ಹೊಸ ತಲೆಮಾರಿನ ಹುಡುಗಿಯರು ಈ ಅನಿಷ್ಟ ಪದ್ಧತಿಯಿಂದ ದೂರವಾಗುತ್ತಿರುವುದು ಸಂತೋಷದ ವಿಚಾರ. ಇದರಾಚೆಗೆ ಊರನಾಯಕರಿಗಿಂತ ಭಿನ್ನವಾದ ಆಚರಣೆಗಳು ಮ್ಯಾಸಬೇಡರಲ್ಲಿವೆ.

ಆ. ಮ್ಯಾಸಬೇಡರ ಪಶುಪಾಲನೆ ಮತ್ತು ಆರ್ಥಿಕತೆ

ಕರ್ನಾಟಕದಲ್ಲಿ ನೆಲೆಸಿರುವ ಬುಡಕಟ್ಟುಗಳನ್ನು ಎರಡು ರೀತಿಯಲ್ಲಿ ವಿಭಾಗಿಸಲಾಗುತ್ತದೆ.

೧) **ಅರಣ್ಯವಾಸಿ ಬುಡಕಟ್ಟುಗಳು:** ಇವು ಬಹುತೇಕ ದಟ್ಟವಾದ ಪಶ್ಚಿಮ ಘಟ್ಟದ ಕಾಡುಗಳನ್ನೇ ಆಶ್ರಯಿಸಿ ಜೀವನ ನಿರ್ವಹಣೆ ಮಾಡುವ ಬುಡಕಟ್ಟುಗಳಾಗಿವೆ. ಇವರು ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಮಾಡಿ ಜೀವನ ನಿರ್ವಹಣೆ ಮಾಡುತ್ತಾರೆ. ಇವರಲ್ಲಿ ಮುಖ್ಯವಾಗಿ ಪಶ್ಚಿಮ ಘಟ್ಟಗಳ ಕಾಡುಗಳನ್ನು ಆಶ್ರಯಿಸಿರುವ ಬುಡಕಟ್ಟುಗಳು ಬಹುತೇಕ ಇಂದಿಗೂ ಜೇನು ಸಂಗ್ರಹಣೆ, ಮರದ ಮೇಲಿನ ಪಾಚಿ ಸಂಗ್ರಹಣೆ, ವನಸ್ಪತಿಗಳ ಸಂಗ್ರಹಣೆ ಮತ್ತು ಮಾರಾಟಗಳಲ್ಲಿ ತೊಡಗಿರುವುದನ್ನು ಕಾಣುತ್ತೇವೆ.

೨) **ಬಯಲು ಸೀಮೆಯನ್ನು ಆಶ್ರಯಿಸಿದ ಬುಡಕಟ್ಟುಗಳು;** ಈ ಬುಡಕಟ್ಟುಗಳು ಬಯಲು ಸೀಮೆಯಲ್ಲಿ ಜೀವನ ನಿರ್ವಹಣೆ ಮಾಡುತ್ತಿರುವ ಬುಡಕಟ್ಟು ಸಮುದಾಯಗಳು ಇವರು ಪಶುಪಾಲನೆ ಮತ್ತು ಸಣ್ಣ ಹಿಡುವಳಿಯ ಬೇಸಾಯ ಕ್ರಮವನ್ನೇ ಹೆಚ್ಚಾಗಿ ಅವಲಂಬಿಸಿದ್ದಾರೆ. ಇವರಲ್ಲಿ ಪ್ರಮುಖವಾಗಿ ಗುರುತಿಸಬಹುದಾದ ಸಮುದಾಯವೆಂದರೆ ಮ್ಯಾಸಬೇಡ ಸಮುದಾಯ. ಈ ಸಮುದಾಯ ಇಂದಿಗೂ ಪಶುಪಾಲನೆ, ಸಣ್ಣ ಹಿಡುವಳಿಯ ಕೃಷಿ, ಕೃಷಿ ಕೂಲಿ ಮುಂತಾದ ಕೆಲಸಗಳಲ್ಲಿ ತೊಡಗಿರುವುದನ್ನು ಕಾಣುತ್ತೇವೆ.

೨೦೧೧ರ ಜನಗಣತಿಯ ಅಂಕಿ ಅಂಶಗಳು ತಿಳಿಸುವಂತೆ ಪರಿಶಿಷ್ಟ ಪಂಗಡದ ಅರ್ಧದಷ್ಟು ಜನರು ದುಡಿಮೆಗಾರ ವರ್ಗದಲ್ಲಿದ್ದಾರೆ. ದುಡಿಮೆಗಾರರಲ್ಲಿ

ಶೇಕಡ ४೧.೭ರಷ್ಟು ಪ್ರಮಾಣದಲ್ಲಿ ಮಹಿಳೆಯರಿದ್ದಾರೆ. ಶೇಕಡ ೮೫ ಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ದುಡಿಮೆಗಾರರು ಗ್ರಾಮೀಣ ಪ್ರದೇಶದಲ್ಲಿದ್ದಾರೆ. ಪರಿಶಿಷ್ಟ ಪಂಗಡದ ಮುಖ್ಯ ಕೆಲಸಗಾರರು ಶೇಕಡ ೭೬.४ರಷ್ಟಿದ್ದಾರೆ. ಬಹುತೇಕ ಶೇಕಡ ೫೧.೫ ರಷ್ಟು ಮುಖ್ಯಕೆಲಸಗಾರರು ಗ್ರಾಮೀಣ ಪ್ರದೇಶದಲ್ಲಿ ಕೇಂದ್ರಿಕೃತವಾಗಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಮುಖ್ಯ ಕೆಲಸಗಾರರ ಪ್ರಮಾಣ (ಶೇಕಡ ೧೧.೫) ಅಧಿಕವಾಗಿದೆ. ಅದರ ನಂತರದ ಸ್ಥಾನ ರಾಯಚೂರಿಗೆ (೭.೮೦) ಸಲ್ಲುತ್ತದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಅತ್ಯಧಿಕ ಪರಿಶಿಷ್ಟ ಪಂಗಡವನ್ನು ಹೊಂದಿರುವ ರಾಯಚೂರು ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಅತಿ ಸಣ್ಣ ಕೆಲಸಗಾರರ ಪ್ರಮಾಣ (ಶೇ ೧೧.೭) ಅತ್ಯಧಿಕವಾಗಿದ್ದು ಈ ಪ್ರಮಾಣವು ರಾಯಚೂರು ಜಿಲ್ಲೆಯಲ್ಲಿನ ಆ ಜನರ ಜೀವನಾಧಾರ ಸ್ಥಿತಿಯನ್ನು ವ್ಯಕ್ತಪಡಿಸುತ್ತದೆ.

ಮುಖ್ಯವಾಗಿ ಬಳ್ಳಾರಿಯಲ್ಲಿಯ ಡುಂಗ್ರಿ ಗರಾಸಿಯಾ, ಮತ್ತು ಹಕ್ಕಿಪಿಕ್ಕಿಗಳು, ಮೇದ ಸಮುದಾಯಗಳು ಭೂ ಹಿಡುವಳಿಯಿಂದ ದೂರವೇ ಉಳಿದಿವೆ. ಈ ಸಮುದಾಯಗಳೆಲ್ಲಾ ತಮ್ಮ ಕೈ ಕಸುಬನ್ನೇ ನಂಬಿ ಜೀವನ ನಡೆಸುತ್ತಿವೆ. ಆದರೆ ನಾಯಕ ಸಮುದಾಯ ಮಾತ್ರ ಅಲ್ಪ ಸ್ವಲ್ಪ ಕೃಷಿ ಭೂಮಿಯನ್ನೇ ನಂಬಿ ಜೀವನ ನಿರ್ವಹಣೆ ಮಾಡುತ್ತಿದೆ. ಅದರಾಚೆಗೆ ಕೆಲವು ಜನ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕದ ಒಟ್ಟು ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ, ಅದರಲ್ಲಿ ಪರಿಶಿಷ್ಟ ಪಂಗಡದ ಕೆಲಸಗಾರರನ್ನು ವಿಂಗಡಸಿದರೆ ದೊರೆಯುವ ಅಂಕಿ ಅಂಶಗಳನ್ನು ಶೇಕಡವಾರುಗಳಲ್ಲಿ ನೀಡಲಾಗಿದೆ. ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣವು ಶೇಕಡ ೪೯.೪೦ ಇದ್ದು ಇದರಲ್ಲಿ ಪುರುಷರು ಶೇಕಡ ೫೮.೩ ಮಹಿಳೆಯರು ಶೇಕಡ ೭೧.೭ ರಷ್ಟಿದ್ದಾರೆ. ಒಟ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆಯಲ್ಲಿ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಕೆಲಸಗಾರರನ್ನು ಕಾಣಬಹುದು. ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣ ಶೇಕಡ ೫೧.೫೦ ಇದ್ದು ಇದರಲ್ಲಿ ಪುರುಷರು ಶೇಕಡ ೫೭.೬೦ ಹಾಗೂ ಮಹಿಳೆಯರು ಶೇಕಡ ೪೫.೩೦ರಷ್ಟಿದ್ದಾರೆ. ಹಾಗೇ ನಗರ ಪ್ರದೇಶದಲ್ಲಿ ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣ ಶೇಕಡ ೩೭.೬೦ ಇದ್ದು ಇದರಲ್ಲಿ ಪುರುಷರು ಶೇಕಡ ೫೨.೬೦ ಹಾಗೂ ಮಹಿಳೆಯರು ಶೇಕಡ ೨೧.೯೦ರಷ್ಟಿದ್ದಾರೆ.

'೦' ವಯೋಮಾನದಿಂದ ೧೮ ವರ್ಷದವರೆಗಿನ ಮತ್ತು ೬೦ ವರ್ಷಕ್ಕೆ ಮೇಲ್ಪಟ್ಟವರನ್ನು ಕೆಲಸಗಾರರೆಂದು ಪರಿಗಣಿಸಿರುವುದಿಲ್ಲ. ಹೀಗಾಗಿ ಇಂತಹ ಕೆಲಸಗಾರರಲ್ಲದವರ ಒಟ್ಟು ಪ್ರಮಾಣ ಶೇಕಡ ೫೦.೬ರಷ್ಟಿದೆ.

ಮುಖ್ಯ ಕೆಲಸಗಾರರೆಂದು ಪರಿಗಣಿತವಾದವರ ಒಟ್ಟು ಪ್ರಮಾಣವು ಶೇಕಡ ೭೭.೯೦ರಷ್ಟಿದೆ. ಇದರಲ್ಲಿ ಗ್ರಾಮೀಣ ಪ್ರದೇಶದ ಒಟ್ಟು ಮುಖ್ಯಕೆಲಸಗಾರರು ಶೇಕಡ ೭೬.೪೦ರಷ್ಟಿದ್ದರೆ ನಗರ ಪ್ರದೇಶದಲ್ಲಿ ಇವರ ಪ್ರಮಾಣವು ಶೇಕಡ ೮೯.೧೦ರಷ್ಟಿದೆ.

ಖಾಯಂ ಆಗಿ ವರ್ಷಪೂರ್ತಿ ಕೆಲಸವಿಲ್ಲದೆ ಅರೆಕಾಲಿಕ ಕೆಲಸಗಾರರಾಗಿ ದುಡಿಯುವವರ ಪ್ರಮಾಣವು ಒಟ್ಟು ಶೇಕಡ ೨೨.೧ ಇದ್ದು ಇದು ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇಕಡ ೨೩.೬೦ ರಷ್ಟಿದ್ದರೆ ನಗರ ಪ್ರದೇಶದಲ್ಲಿ ಇವರ ಪ್ರಮಾಣವು ಶೇಕಡ ೧೦.೯೦ರಷ್ಟಿದೆ.[೧]

೩.೧ ಅಧ್ಯಯನಕ್ಕೆ ಆಯ್ದುಕೊಂಡ ಕುಟುಂಬಗಳ ಜನಸಂಖ್ಯೆಯ ವಿವರ

ಕೂಡ್ಲಿಗಿ ತಾಲೂಕಿನಲ್ಲಿ ಮ್ಯಾಸಬೇಡರು ನೆಲೆಸಿರುವ ಒಟ್ಟು ೨೦ ಗ್ರಾಮಗಳಲ್ಲಿ ಗ್ರಾಮಕ್ಕೆ ೧೦ ಕುಟುಂಬದಂತೆ ಒಟ್ಟು ೨೦೦ ಮ್ಯಾಸಬೇಡರ ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಂಡು ಕ್ಷೇತ್ರಕಾರ್ಯ ಮಾಡಲಾಯಿತು.

ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಕೂಡ್ಲಿಗಿ ತಾಲೂಕಿನ ಗ್ರಾಮವಾರು ಮ್ಯಾಸಬೇಡ ಕುಟುಂಬಗಳ ವಿವರ

ಊರಿನ ಹೆಸರು	ಕುಟುಂಬಗಳ ಸಂಖ್ಯೆ
ಚೌಡಾಪುರ	೯೦
ಬಣವಿಕಲ್ಲು	೪೦
ಹಾರಕಬಾವಿ	೮೫
ಕ್ಯಾಸಿನಕೇರಿ	೩೦
ಶಾಂತನಹಳ್ಳಿ	೨೦
ಗಾಣಗಟ್ಟೆ	೧೩೦
ಸೂಲದರಹಳ್ಳಿ	೧೮೦
ಗುಣಸಾಗರ	೪೦
ಯರಮನಹಳ್ಳಿ	೩೫
ಚಿರಿಬಿ	೪೬
ಮಾಕನಾಡುಕು	೫೮
ಬೆಳಕಟ್ಟೆ	೧೫
ಜೂಟ್ಟನಿಂಗನಹಟ್ಟಿ	೩೫
ಪಾಲಯ್ಯನಕೋಟೆ	೮೦
ಬಿರಲಗುಡ್ಡ	೩೦
ಮೊರಬನಹಳ್ಳಿ	೪೫
ಎಂಬಿಅಯ್ಯನಹಳ್ಳಿ	೫೫
ದಾಸರ ಓಬನಹಳ್ಳಿ	೪೫
ನಿಂಬಳಗೇರಿ	೨೫
ಒಟ್ಟು	೧೦೮೦

ಚೌಡಾಪುರ ಗ್ರಾಮದಲ್ಲಿ ೯೦ ಮ್ಯಾಸಬೇಡ ಕುಟುಂಬಗಳಿವೆ. ಅದೇ ರೀತಿಯಾಗಿ ಬಣವಿಕಲ್ಲು ೪೦, ಹಾರಕಬಾವಿ ೮೫, ಕ್ಯಾಸನಕೇರಿ ೩೦, ಶಾಂತನಹಳ್ಳಿ ೨೦, ಗಾಣಗಟ್ಟೆ ೧೩೦, ಸೂಲದಹಳ್ಳಿ ೧೮೦, ಗುಣಸಾಗರ ೪೦, ಯರಮನಹಳ್ಳಿ ೩೫, ಚಿರಬಿ ೪೬, ಮಾಕನಡಕು

೫೮, ಬೆಳಗಟ್ಟೆ ೧೫, ಜುಟ್ಟನಿಂಗನಹಟ್ಟಿ ೩೫, ಪಾಲಯ್ಯನಕೋಟೆ ೮೦, ಬೀರಲಗುಡ್ಡ ೩೦, ಮೊರಬನಹಳ್ಳಿ ೪೫, ಎಂ.ಬಿ.ಅಯ್ಯನಹಳ್ಳಿ ೫೫, ದಾಸರ ಓಬನಹಳ್ಳಿ ೪೫, ನಿಂಬಳಗೆರೆ ೨೫ ಕುಟುಂಬಗಳಿವೆ. ಈ ಇಪ್ಪತ್ತು ಗ್ರಾಮಗಳಲ್ಲಿ ಒಟ್ಟು ೧೦೮೦ ಮ್ಯಾಸಬೇಡರ ಕುಟುಂಬಗಳು ನೆಲೆಸಿವೆ. ಇದರಲ್ಲಿ ಅತೀಹೆಚ್ಚು ಮ್ಯಾಸಬೇಡರ ಕುಟುಂಬಗಳಿರುವ ಗ್ರಾಮ ಸೂಲದಹಳ್ಳಿಯಾಗಿದೆ. ಈ ಗ್ರಾಮದಲ್ಲಿ ೧೮೦ ಕುಟುಂಬಗಳಿವೆ. ಅತ್ಯಂತ ಕಡಿಮೆ ಕುಟುಂಬಗಳಿರುವ ಗ್ರಾಮ ಬೆಳಗಟ್ಟೆಯಾಗಿದೆ. ಇಲ್ಲಿ ಕೇವಲ ೧೫ ಕುಟುಂಬಗಳು ಮಾತ್ರ ನೆಲೆಸಿವೆ. ಈ ೨೦ ಗ್ರಾಮಗಳಿಂದಲೂ ಗ್ರಾಮವೊಂದಕ್ಕೆ ಕೇವಲ ೧೦ ಮ್ಯಾಸಬೇಡ ಕುಟುಂಬಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ. ಆಯ್ಕೆ ಮಾಡಿಕೊಳ್ಳುವಾಗ ಮೇಲ್ಮಧ್ಯಮ, ಮಧ್ಯಮ ಹಾಗೂ ಅದಕ್ಕಿಂತ ಕಡಿಮೆ ಆರ್ಥಿಕ ಸ್ಥಿತಿಯನ್ನು ಹೊಂದಿದ ಕುಟುಂಬಗಳನ್ನು ಸಮನಾಗಿ ವಿಭಾಗಿಸಿ ಆಯ್ಕೆ ಮಾಡಿಕೊಳ್ಳಲಾಗಿದೆ.

೩.೨ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಗ್ರಾಮವಾರು ಕುಟುಂಬ, ಜನಸಂಖ್ಯೆ ವಿವರ


ಕ್ರ.ಸಂ.	ಪಂಚಾಯಿತಿ	ಕುಟುಂಬ	ಗಂಡು	ಹೆಣ್ಣು	ಒಟ್ಟು	ಲಿಂಗಾನುಪಾತ
೧	ಮೊರಬ	೨೦	೫೧	೪೮	೯೯	೯೪೧.೨
೨	ಚಿರಬಿ	೧೦	೩೩	೨೧	೫೪	೬೩೬.೪
೩	ಚೌಡಾಪುರ	೩೦	೭೦	೭೧	೧೪೧	೧೦೧೪
೪	ಎಂ.ಬಿ. ಐಯ್ಯನಹಳ್ಳಿ	೧೦	೨೭	೩೫	೬೨	೧೨೯೬
೫	ಮಾಕನಡಕು	೧೦	೩೭	೩೭	೭೪	೧೦೦೦
೬	ಖಾನಹೊಸಳ್ಳಿ	೨೦	೬೨	೫೬	೧೧೮	೯೦೩.೨
೭	ಸೂಲದಹಳ್ಳಿ	೩೦	೧೧೦	೮೧	೧೯೧	೭೩೬.೪
೮	ಹಾರಕಭಾವಿ	೩೦	೭೪	೬೨	೧೩೬	೮೩೭.೮
೯	ಹಿರೇಕುಂಬಳ ಗುಂಟೆ	೧೦	೩೨	೨೩	೫೫	೭೧೮.೮
೧೦	ನಿಂಬಳಗೇರೆ	೩೦	೮೯	೯೧	೧೮೦	೧೦೨೨
	ಒಟ್ಟು	೨೦೦	೫೮೫	೫೨೫	೧೧೧೦	೮೯೭.೪೩

ಆಯ್ಕೆ ಮಾಡಿಕೊಂಡ ೨೦೦ ಕುಟುಂಬಗಳ ಒಟ್ಟು ಜನಸಂಖ್ಯೆ ೧೧೧೦ ಆಗಿದೆ. ಇದರಲ್ಲಿ ಪುರುಷರು ೫೮೦ ಹಾಗೂ ಮಹಿಳೆಯರು ೫೨೫ ಜನರಿದ್ದಾರೆ. ಅಂದರೆ ಸರಾಸರಿ ೧೦೦೦ ಪುರುಷರಿಗೆ ೮೯೭.೪೩ರಷ್ಟು ಮಹಿಳೆಯರಿದ್ದಾರೆ.

೩.೩ ಸಮೀಕ್ಷೆಗೊಳಪಟ್ಟ ಕುಟುಂಬಗಳ ವಯೋಗುಂಪುವಾರು ವಿವರ

ವಯೋಗುಂಪು	ಗಂಡು	ಹೆಣ್ಣು	ಒಟ್ಟು
೦-೫	೨೮	೩೮	೬೬
೬-೧೭	೧೨೭	೧೩೧	೨೫೮
೧೮-೪೦	೨೮೫	೨೩೮	೫೨೩
೪೧-೬೦	೧೦೮	೮೪	೧೯೨
೬೧+ರ ಮೇಲ್ಪಟ್ಟ	೩೭	೩೪	೭೧
ಒಟ್ಟು	**೫೮೫**	**೫೨೫**	**೧೧೧೦**


ಸಮೀಕ್ಷೆಗಳಪಡಿಸಿದ ೨೦೦ ಕುಟುಂಬಗಳ ಒಟ್ಟು ಜನಸಂಖ್ಯೆಯಲ್ಲಿ ವಯೋವಾರು ಜನಸಂಖ್ಯೆಯನ್ನು ನೋಡಲಾಗಿ ಕಂಡುಬಂದ ಅಂಶಗಳು ಹೀಗಿವೆ. ಐದು ವರ್ಷದೊಳಗಿನ ಮಕ್ಕಳ ಸಂಖ್ಯೆ ೬೬ ಇದೆ. ಇದರಲ್ಲಿ ಗಂಡು ೨೮ ಹಾಗೂ ಹೆಣ್ಣು ೩೮ ಇವೆ.



ಸಮೀಕ್ಷೆಗೊಳಪಟ್ಟ ಮ್ಯಾಸಬೇಡ ಸಮುದಾಯದ ಲಿಂಗವಾರು ವಯೋಗುಂಪು ಪ್ರಮಾಣ

ಹದಿನೆಂಟು ವರ್ಷದೊಳಗಿನ ಮಕ್ಕಳು ಒಟ್ಟು ೨೫೮ ಇದ್ದು ಅದರಲ್ಲಿ ಗಂಡು ೧೨೭ ಹಾಗೂ ಹೆಣ್ಣು ೧೩೧ ಇವೆ. ಹದಿನೆಂಟು ವರ್ಷದಿಂದ ೪೦ ವರ್ಷದೊಳಗಿನವರ ಒಟ್ಟು ಜನಸಂಖ್ಯೆ ೫೨೩ ಇದೆ. ಇದರಲ್ಲಿ ಪುರುಷ ೨೮೫ ಹಾಗೂ ಮಹಿಳೆ ೨೩೮ ಇದೆ. ೪೦ ವರ್ಷ ಮೇಲ್ಪಟ್ಟು ೬೦ ವರ್ಷದೊಳಗಿನವರ ಸಂಖ್ಯೆಯು ೧೯೨ ಇದ್ದು ಪುರುಷರು ೧೦೮, ಮಹಿಳೆಯರು ೮೪ ಜನರಿದ್ದಾರೆ. ಅರವತ್ತು ವರ್ಷಕ್ಕಿಂತ ಮೇಲ್ಪಟ್ಟವರು ೭೧ ಜನರಿದ್ದಾರೆ. ಇದರಲ್ಲಿ ಪುರುಷರು ೩೭ ಹಾಗೂ ಮಹಿಳೆ ೩೪ ಜನರಿದ್ದಾರೆ.





ಅಂದರೆ ಆರು ವರ್ಷದೊಳಗಿನ ಮಕ್ಕಳ ಪ್ರಮಾಣ ಶೇಕಡ ೬, ಆರು ವರ್ಷದಿಂದ ೧೮ ವರ್ಷದೊಳಗಿನ ಮಕ್ಕಳು ಶೇಕಡ ೨೩, ಹದಿನೆಂಟು ವರ್ಷಕ್ಕೆ ಮೇಲ್ಪಟ್ಟು ೪೦ ವರ್ಷದೊಳಗಿನವರು ಶೇಕಡ ೪೭, ನಲವತ್ತರಿಂದ ಅರವತ್ತು ವರ್ಷದೊಳಗಿನವರು ಶೇಕಡ ೧೭, ಅರವತ್ತು ವರ್ಷ ಮೇಲ್ಪಟ್ಟವರು ಶೇಕಡ ೭ರಷ್ಟಿದ್ದಾರೆ.

೩.೪ ಶಿಕ್ಷಣ

ಶಿಕ್ಷಣಕ್ಕೂ ಆರ್ಥಿಕತೆಗೂ ಪರಸ್ಪರ ಸಂಬಂಧವಿದೆ. ಹಾಗೆಯೇ ಯಾವುದೇ ಸಮುದಾಯವು ತಮ್ಮ ಮೂಲ ಕಸುಬಿನಿಂದ ದೂರ ಸರಿಯಲು ಇರುವ ಮುಖ್ಯಕಾರಣಗಳಲ್ಲಿ ಆಧುನಿಕ ಶಿಕ್ಷಣದ ಪಾಲೂ ಇದೆ. ಆಧುನಿಕ ಶಿಕ್ಷಣ ಪಡೆದಂತೆಲ್ಲಾ ವ್ಯಕ್ತಿಯು ಹೊರಗಿನ ಪ್ರಪಂಚವನ್ನು ನೋಡುವ ದೃಷ್ಟಿಕೋನ ಬದಲಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ವ್ಯಕ್ತಿಯು ತಮ್ಮ ಮೂಲವೃತ್ತಿಯ ಕುರಿತು ಕೀಳರಿಮೆಗೊಳ್ಳುತ್ತ ಸಾಗುತ್ತಾನೆ. ಈ ಕೀಳರಿಮೆಗೆ ಆಧುನಿಕ ಜಗತ್ತು ಅಪ್ಪಿಕೊಂಡಿರುವ ಜಾಗತೀಕರಣವೂ ಕಾರಣವೆಂಬುದು ಸ್ಪಷ್ಟ.

ಈ ಎಲ್ಲಾ ದೃಷ್ಟಿಕೋನಗಳಿಂದ ಸಮುದಾಯವೊಂದರ ಆರ್ಥಿಕ ಹಿನ್ನೆಲೆಯನ್ನು ಅರಿಯಲು ಅವರಲ್ಲಿ ಪ್ರವೇಶಗೊಂಡ ಆಧುನಿಕ ಶಿಕ್ಷಣವನ್ನು ಅವಲೋಕಿಸಬೇಕಾಗುತ್ತದೆ. ಹೀಗಾಗಿ ಮ್ಯಾಸಬೇಡರ ಪಶುಪಾಲನೆ ಮತ್ತು ಆರ್ಥಿಕತೆಯ ಹಿನ್ನೆಲೆಯನ್ನು ಅರಿಯಲು ಆ

ಸಮುದಾಯದ ಶೈಕ್ಷಣಿಕ ಸ್ಥಿತಿಯು ಕಾರಣವಾಗಬಲ್ಲುದು ಎಂಬ ದೃಷ್ಟಿಯಿಂದ ಆ ಸಮುದಾಯದ ಶೈಕ್ಷಣಿಕ ಸ್ಥಿತಿಯನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

೩.೫ ಸಮೀಕ್ಷೆಗೊಳಪಟ್ಟ ಮ್ಯಾಸಬೇಡರ ಶೈಕ್ಷಣಿಕ ಸ್ಥಿತಿಗತಿ


ಕ್ರಸಂ.	ಪಂಚಾಯಿತಿ	೦-೬ ಸಾಕ್ಷರರ್ಹರಲ್ಲದವರು			೬-೬೧ ಸಾಕ್ಷರರ್ಹರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಮೊರಬ				೫೧	೪೮	೯೯
೨	ಚಿರಬಿ	೧	೨	೩	೩೨	೧೯	೫೧
೩	ಚೌಡಾಪುರ	೩	೨	೫	೬೭	೬೯	೧೩೬
೪	ಎಂ.ಬಿ. ಐಯ್ಯನಹಳ್ಳಿ	೨	೩	೫	೨೫	೩೨	೫೭
೫	ಮಾಕನಡಕು	೪	೭	೧೧	೩೩	೨೯	೬೨
೬	ಖಾನಹೊಸಳ್ಳಿ	೩	೪	೭	೫೯	೫೨	೧೧೧
೭	ಸೂಲದಹಳ್ಳಿ	೨	೮	೧೦	೧೦೬	೭೫	೧೮೧
೮	ಹಾರಕಭಾವಿ	೪	೧	೫	೭೦	೬೧	೧೩೧
೯	ಹಿರೇಕುಂಬಳ ಗುಂಟೆ	೩	೧	೪	೨೯	೨೨	೫೧
೧೦	ನಿಂಬಳಗೇರೆ	೬	೧೦	೧೬	೮೫	೮೦	೧೬೫
	ಒಟ್ಟು	೨೮	೩೮	೬೬	೫೫೭	೪೮೭	೧೦೪೪

ಸಾಮಾನ್ಯವಾಗಿ ಹುಟ್ಟಿದ ಮಗುವಿನಿಂದ ಹಿಡಿದು ೬ ವರ್ಷದವರೆಗೂ ಮಕ್ಕಳನ್ನು ಶಾಲೆಗೆ ಸೇರಿಸುವುದಿಲ್ಲ. ಯಾವುದೇ ಒಂದು ಮಗು ಶಾಲೆಗೆ ತೆರಳಬೇಕೆಂದರೆ ಕನಿಷ್ಠ ೬ ವರ್ಷವಾದರೂ ತುಂಬಲೇಬೇಕು ಎಂಬ ನಿಯಮವಿದೆ. ಸಮೀಕ್ಷೆ ಮಾಡಿದ ಕುಟುಂಬಗಳಲ್ಲಿ ೦-೬ರೊಳಗಿನ ಒಟ್ಟು ೬೬ ಮಕ್ಕಳಿದ್ದಾರೆ. ಇದರಲ್ಲಿ ೨೮ ಗಂಡು ಹಾಗೂ ೩೮ ಹೆಣ್ಣುಮಕ್ಕಳಿದ್ದಾರೆ. ಈ ಅರವತ್ತಾರು ಮಕ್ಕಳ ಹೊರತಾಗಿ ಉಳಿದ ೧೦೪೪ ಜನರು ಶಿಕ್ಷಣ ಪಡೆಯಲು ಅರ್ಹವಾದವರಾಗಿದ್ದಾರೆ. ಅಂದರೆ ಶೇಕಡ ೯೪.೦೫ ರಷ್ಟು ಜನ ಶಿಕ್ಷಣ ಪಡೆಯಲು ಅರ್ಹವಾಗಿದ್ದರೆ ಶೇಕಡ ೫.೫ರಷ್ಟು ಜನ ಶಿಕ್ಷಣ ಪಡೆಯಲು ಅರ್ಹವಾಗಿರುವುದಿಲ್ಲ.

೩.೬ ಸಮೀಕ್ಷೆಗೊಳಪಟ್ಟ ಮ್ಯಾಸಬೇಡ ಸಮುದಾಯದ ಲಿಂಗವಾರು ಸಾಕ್ಷರರ್ಹರು, ಸಾಕ್ಷರಸ್ಥರು ಮತ್ತು ನಿರಕ್ಷರಿಗಳು

ಕ್ರ.ಸಂ.	ಪಂಚಾಯಿತಿ	ಕುಟುಂಬ	ಸಾಕ್ಷರರ್ಹರು			ಸಾಕ್ಷರಸ್ಥರು			ನಿರಕ್ಷರಿಗಳು		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಮೊರಬ	೨೦	೫೧	೪೮	೯೯	೩೨	೨೨	೫೪	೧೯	೨೬	೪೫
೨	ಚಿರಬಿ	೧೦	೩೨	೧೯	೫೧	೨೦	೧೧	೩೧	೧೨	೮	೨೦
೩	ಚೌಡಾಪುರ	೩೦	೬೭	೬೯	೧೩೬	೫೨	೪೭	೯೯	೧೫	೨೨	೩೭
೪	ಎಂ.ಬಿ. ಐಯ್ಯನಹಳ್ಳಿ	೧೦	೨೫	೩೨	೫೭	೧೭	೧೭	೩೪	೮	೧೫	೨೩
೫	ಮಾಕನಡಕು	೧೦	೩೩	೨೯	೬೨	೨೪	೧೯	೪೩	೯	೧೦	೧೯
೬	ಖಾನಹೊಸಳ್ಳಿ	೨೦	೫೯	೫೨	೧೧೧	೪೨	೨೯	೭೧	೧೭	೨೩	೪೦
೭	ಸೂಲದಹಳ್ಳಿ	೩೦	೧೦೬	೭೫	೧೮೧	೬೮	೩೫	೧೦೩	೩೮	೪೦	೭೮
೮	ಹಾರಕಭಾವಿ	೩೦	೭೦	೬೧	೧೩೧	೫೨	೨೯	೮೧	೧೮	೩೨	೫೦
೯	ಹಿರೇಕುಂಬಳ ಗುಂಟೆ	೧೦	೨೯	೨೨	೫೧	೧೫	೬	೨೧	೧೪	೧೬	೩೦
೧೦	ನಿಂಬಳಗೇರೆ	೩೦	೮೫	೮೦	೧೬೫	೪೭	೩೪	೮೧	೩೮	೪೬	೮೪
	ಒಟ್ಟು	೨೦೦	೫೫೭	೪೮೭	೧೦೪೪	೩೬೯	೨೪೯	೬೧೮	೧೮೮	೨೩೮	೪೨೬

ಕೂಡ್ಲಿಗಿ ತಾಲೂಕಿನಲ್ಲಿರುವ ೧೦ ಗ್ರಾಮಪಂಚಾಯತಿಯಡಿಯಲ್ಲಿ ಬರುವ ಇಪ್ಪತ್ತು ಗ್ರಾಮಗಳಲ್ಲಿರುವ ೨೦೦ ಕುಟುಂಬಗಳನ್ನು ಸಮೀಕ್ಷಿಸಲಾಗಿ ಕಂಡುಬಂದ ಅಂಶಗಳು ಹೀಗಿವೆ.




ಸಾಕ್ಷರತೆಗೆ ಅರ್ಹವಾದವರು ಒಟ್ಟು ೧೦೪೪ ಜನರಿದ್ದಾರೆ. ಇದರಲ್ಲಿ ೫೫೭ ಪುರುಷರು ಹಾಗೂ ೪೮೭ ಮಹಿಳೆಯರಿದ್ದಾರೆ. ಆದರೆ ಸಾಕ್ಷರತೆಯನ್ನು ಹೊಂದಿದವರು ಒಟ್ಟು ೬೧೮ ಜನರಿದ್ದಾರೆ. ಇದರಲ್ಲಿ ೩೬೯ ಪುರುಷ ಹಾಗೂ ೨೪೯ ಮಹಿಳಾ ಸಾಕ್ಷರರಿದ್ದಾರೆ. ಅಂದರೆ ಶೇಕಡ ೫೯.೧೯ರಷ್ಟು ಸಾಕ್ಷರತೆ ಸಮೀಕ್ಷೆಗೊಳಪಟ್ಟ ಮ್ಯಾಸಬೇಡರಲ್ಲಿದೆ. ಶೇಕಡ ೪೦.೮೧ರಷ್ಟು ಜನ ನಿರಕ್ಷರಿಗಳಿದ್ದಾರೆ. ಸಾಕ್ಷರತೆಗೆ ಒಳಪಟ್ಟವರು ಬಹುತೇಕ ತಮ್ಮ ಮೂಲ ಕಸುಬಿನಿಂದ ದೂರ ಸರಿದು ಇತರೆ ವೃತ್ತಿಗಳನ್ನವಲಂಬಿಸಿದ್ದಾರೆ.

೩.೭ ಸಮೀಕ್ಷೆಗೊಳಪಟ್ಟ ಮ್ಯಾಸಬೇಡ ಸಮುದಾಯದ ಲಿಂಗವಾರು ಶೈಕ್ಷಣಿಕ ಪ್ರಮಾಣ

ಶೈಕ್ಷಣಿಕ ಹಂತ	ಗಂಡು	ಹೆಣ್ಣು	ಒಟ್ಟು
ಪ್ರಾಥಮಿಕ	೨೦೨	೧೬೮	೩೭೦
ಮಾಧ್ಯಮಿಕ	೮೫	೬೫	೧೫೦
ಪ್ರೌಢಶಾಲೆ	೧೯೭	೧೨೨	೩೧೯
ಡಿಪ್ಲೋಮಾ	೨೩	೦	೨೩
ಪದವಿ ಪೂರ್ವ	೫೪	೩೫	೮೯
ಪದವಿ	೨೩	೧೪	೩೭
ಸ್ನಾತ ಕೋತ್ತರ	೩೧	೭	೩೮
ಇತರೆ	೦	೦	೦
ಒಟ್ಟು	೬೧೫	೪೧೧	೧೦೨೬



ಸಾಕ್ಷರತೆಯನ್ನು ಹೊಂದಿದವರಲ್ಲಿ ಪ್ರಾಥಮಿಕ ಹಂತ ಪೂರೈಸಿದವರು ಶೇಕಡ ೩೬.೧ರಷ್ಟಿದ್ದಾರೆ. ಮಾಧ್ಯಮಿಕ ಹಂತವನ್ನು ತಲುಪಿದವರು ಶೇಕಡ ೧೪.೬, ಪ್ರೌಢ ಹಂತದವರು ಶೇಕಡ ೩೧.೧, ಡಿಪ್ಲೊಮೊ ಓದಿದವರು ಶೇಕಡ ೨.೨೪, ಪದವಿಪೂರ್ವ ಹಂತದವರು ಶೇಕಡ ೮.೬೭, ಪದವಿ ಹಂತದವರು ಶೇಕಡ ೩.೬೧, ಸ್ನಾತಕೋತ್ತರ ಹಂತದವರು ಶೇಕಡ ೩.೭ ಜನರಿದ್ದಾರೆ. ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದವರೆಗೆ ನೋಡಿದರೂ ಸಾಕ್ಷರತೆ ಹೊಂದುವಲ್ಲಿ ಮಹಿಳೆಯರು ಪುರುಷರಿಗಿಂತ ಹಿಂದಿರುವುದು ಕಂಡುಬರುತ್ತದೆ.



೩.೮ ಕಾಯಕಾರ್ಹರ ವಿವರ

ಯಾವುದೇ ಸಮುದಾಯವಾಗಿರಲಿ ಕಾಯಕಾರ್ಹರನ್ನು ಗುರುತಿಸಲು ಕೆಲವು ಮಾನದಂಡಗಳನ್ನು ಉಪಯೋಗಿಸಲಾಗುತ್ತದೆ. ೦-೧೮ ರೊಳಗಿನ ಮಕ್ಕಳು ಶಾಲೆಗೆ ಹೋಗುವ ಹಂತದಲ್ಲಿರುವುದಿಲ್ಲ. ಹಾಗೆಯೇ ೬೦ರ ವಯೋಮಾನಕ್ಕಿಂತ ಮೇಲ್ಪಟ್ಟವರು ವಯೋಸಹಜವಾಗಿ ನಿವೃತ್ತಿ ಹೊಂದುತ್ತಾರೆ. ಹೀಗಾಗಿ ೦-೧೮ ವರ್ಷದೊಳಗಿನವರು ಹಾಗೂ ೬೦ ವಯಸ್ಸಿಗಿಂತ ಮೇಲ್ಪಟ್ಟವರನ್ನು ಅವಲಂಭಿತ ವರ್ಗವೆಂದು ಪರಿಗಣಿಸಲಾಗುತ್ತದೆ. ಒಟ್ಟಾರೆಯಾಗಿ ಕಾಯಕಾರ್ಹರು ೭೧೫ ಜನರಿದ್ದಾರೆ.



ಕಾಯಕಾರ್ಹರ ಹಾಗೂ ಅವಲಂಭಿತ ಗುಂಪುಗಳ ವಿವರ

ಕ್ರಸಂ	ಕಾಯಕಾರ್ಹರು			ಅವಲಂಭಿತರು		
	ಗಂ	ಹೆ	ಒ	ಗಂ	ಹೆ	ಒ
	೩೯೩	೩೨೨	೭೧೫	೧೯೨	೨೦೩	೩೯೫

ಇದರಲ್ಲಿ ಪುರುಷರು ೩೯೩ ಹಾಗೂ ಮಹಿಳೆ ೩೨೨ ಜನರಿದ್ದಾರೆ. ಅವಲಂಬಿತ ಗುಂಪಿನಲ್ಲಿ ಒಟ್ಟು ೩೯೫ ಜನರಿದ್ದಾರೆ. ಇದರಲ್ಲಿ ಪುರುಷರು ೧೯೨ ಹಾಗೂ ಮಹಿಳೆಯರು ೨೦೩ ಜನರಿದ್ದಾರೆ. ಒಟ್ಟಾರೆ ಶೇಕಡವಾರುಗಳಲ್ಲಿ ಹೇಳುವುದಾದರೆ ಶೇಕಡ ೬೪.೪೧ ಜನ ಕಾಯಕಾರ್ಹರು ಹಾಗೂ ಶೇಕಡ ೩೫.೫೯ರಷ್ಟು ಅವಲಂಬಿತರು ಇರುವುದು ತಿಳಿದುಬರುತ್ತದೆ.

ಕಾಯಕನಿರತರ ವಿವರ

ಕ್ರಸಂ	ಕಾಯಕಾರ್ಹರು			ಕಾಯಕನಿರತರು		
	ಗಂ	ಹೆ	ಒ	ಗಂ	ಹೆ	ಒ
	೩೯೩	**೩೨೨**	**೭೧೫**	**೪೮೫**	**೪೨೫**	**೯೧೦**

ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೬೪.೪೧ ರಷ್ಟು ಕಾಯಕಾರ್ಹರಿದ್ದಾರೆ. ಆದರೆ ಕಾಯಕನಿರತರು ಶೇಕಡ ೮೧.೯೮ ರಷ್ಟಿದ್ದಾರೆ. ಅಂದರೆ ಕಾಯಕಾರ್ಹರಿಗಿಂತ ಕಾಯಕನಿರತರ ಪ್ರಮಾಣವು ಶೇಕಡ ೧೭.೫೭ ರಷ್ಟು ಹೆಚ್ಚಿದೆ.

೩.೯ ಮ್ಯಾಸಬೇಡರ ಮೂಲ ಕಸುಬು

ಕರ್ನಾಟಕದ ಮ್ಯಾಸಬೇಡ ಸಮುದಾಯವು ಮೂಲತಃ ಬೇಟೆ ಸಂಸ್ಕೃತಿಯಿಂದ ಪಶುಪಾಲನಾ ವೃತ್ತಿಗೆ ಪ್ರವೇಶಗೊಂಡಿತೆಂಬುದನ್ನು ಅದರ ಮ್ಯಾಸಬೇಡ ಎಂಬ ಹೆಸರೇ ಸೂಚಿಸುತ್ತದೆ.

ಮ್ಯಾಸಬೇಡರು ಮೂಲತಃ ಹಟ್ಟಿ ಸಂಸ್ಕೃತಿಯವರು. ಕಾಡುಗೊಲ್ಲರಂತೆ ಮ್ಯಾಸಬೇಡರು ಹಟ್ಟಿಗಳನ್ನು ಹೊಂದಿದ್ದಾರೆ ಎಂಬುದನ್ನು ಚಿತ್ರದುರ್ಗ ಜಿಲ್ಲೆಯ ಎಷ್ಟೋ ಮ್ಯಾಸಬೇಡರ ಹಟ್ಟಿಗಳು ಇಂದಿಗೂ ಜೀವಂತವಾಗಿರುವುದು ಸಾಕ್ಷಿಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಮ್ಯಾಸರ ಹಟ್ಟಿ, ಬೇಡರಹಳ್ಳಿ ಹೆಸರುಗಳೇ ಸೂಚಿಸುತ್ತವೆ. ಚಿತ್ರದುರ್ಗದ ಚಿಕ್ಕುಂತಿಯಲ್ಲಿ ಓಬಳದೇವರ ಕಿಲಾರಿ ಇದೆ. ಇಲ್ಲಿ ವರ್ಷಕ್ಕೊಮ್ಮೆ ಗುಗ್ಗರಿಹಬ್ಬದಲ್ಲಿ ಕಿಲಾರಿ (ದೇವರ) ಎತ್ತುಗಳಿಗೆ ಹೆಚ್ಚಿನ ಸ್ಥಾನವಿರುತ್ತದೆ. (ವಿವರಿಸು)

ಚಿಕ್ಕುಂತಿಗೆ ಹತ್ತಿರದಲ್ಲಿಯೇ ಬರುವ (೨೫ಕಿಮೀ ಒಳಗೆ) ಬಳ್ಳಾರಿ ಜಿಲ್ಲೆಯ ಪೂಜಾರಹಳ್ಳಿಯಲ್ಲಿ ಗುರುನಾಥ ಹೆಸರಿನ ಮ್ಯಾಸಬೇಡರ ದೈವದ ಗುಡಿ ಇದೆ. ಇದು ಮ್ಯಾಸಬೇಡರಿಗೆ ಸಂಬಂಧಿಸಿದ ಸಾಂಸ್ಕೃತಿಕ ಕೇಂದ್ರಗಳಲ್ಲಿ ಒಂದು. ಈ ದೈವಕ್ಕೆ ಸೇರಿದ ಮೂವತ್ತು ಕಿಲಾರಿ ದನಗಳು ಜುಟ್ಟನಿಂಗನಹಟ್ಟಿಯಲ್ಲಿ ಇವೆ. ಈ ಹಟ್ಟಿಯ ಮೂಲ ವಂಶದ ಒಂದು ಗುಂಪು ಇಂದಿಗೂ ಈ ಕಿಲಾರಿ ದನಗಳ ಪಾಲನೆಯಲ್ಲಿದೆ. ಎತ್ತಿನ ಚೌಡಪ್ಪ ಕಿಲಾರಿಯೆಂಬುವವರು ಈ ದನಗಳ ಪೋಷಕರು. ಪಾಮುಂಡ್ಲ ಬೆಡಗಿನ ಮೂಲದೈವ ಗುರುನಾಥ. ಗುರುನಾಥ ದೈವವು ಜುಮ್ಮೋಬನಹಳ್ಳಿಯ ದಟ್ಟ ಅರಣ್ಯ (ಹಿಂದೆ ದಟ್ಟಾರಣ್ಯವಾಗಿದ್ದು ಈಗ ಕುರುಚಲು ಕಾಡಿನಿಂದ ಕೂಡಿದೆ) ದಲ್ಲಿ ಕಾರಿಕೊಳ್ಳದಲ್ಲಿ ಹುಟ್ಟಿತಂತೆ. ಪಾಮುಂಡ್ಲ ಬೆಡಗಿನವರು ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಕೊಪ್ಪಳ, ತುಮಕೂರು ಜಿಲ್ಲೆಗಳಲ್ಲಿ ನೆಲೆಸಿದ್ದಾರೆ. ಈ ಎಲ್ಲಾ ಜಿಲ್ಲೆಯ ಪಾಮುಂಡ್ಲ ಬೆಡಗಿನವರು ಗುರುನಾಥನ ಗುಗ್ಗರಿಹಬ್ಬಕ್ಕೆ ಪೂಜಾರಹಳ್ಳಿಯಲ್ಲಿ ಸೇರುತ್ತಾರೆ. ಈ ಎಲ್ಲಾ ಕುಟುಂಬಗಳು ಏಳು ಪುಟ್ಟಿಗಳನ್ನು ಹೊಂದಿವೆ. ಏಳು ಪುಟ್ಟಿಗಳೆಂದರೆ ಏಳು ಜನ ಅಣ್ಣತಮ್ಮಂದಿರ ವಂಶಕ್ಕೆ ಸೇರಿದವರು. ಏಳು ಪುಟ್ಟಿಯವರೂ ದೈವದ ಕೆಲಸಕ್ಕೆ ಸಂಬಂಧಿಸಿದಂತೆ ಏಳು ರೀತಿಯ ಜವಾಬ್ದಾರಿಯನ್ನು ಹೊಂದಿರುವರು. ಆ ಏಳು ಪುಟ್ಟಿ (ಮನೆತನ)ಯವರನ್ನು ಈ ಕೆಳಗಿನಂತೆ ಗುರುತಿಸಲಾಗುತ್ತದೆ.

೧ ಬಾಬಿನವರು : ದೇವರ ಚಂದಾ ವಸೂಲಿ ಮಾಡುವುದು

೨ ಕಿಲಾರಿ/ಎತ್ತಿನವರು: ಕಿಲಾರಿ ದನಗಳನ್ನು ಪೋಷಿಸುವರು

೩ ಪೂಜಾರಿ: ಗುರುನಾಥ ದೈವದ ಪೂಜೆಯ ಕಾರ್ಯ ಮಾಡುವವರು

೪ ಯಜಮಾನ: ದೈವದ ಮೇಲುಸ್ತುವಾರಿ ನೋಡಿಕೊಳ್ಳುವರು

೫ ದಗ್ಮರು: ದೈವದ ಸೇವೆ ಮಾಡುವವರು

೬ ಕೊಕಟ್ಟೇರು (ಗೋಕಟ್ಟೇರು): ದನಗಳ ಗೋಕಟ್ಟೆಯ ಚಾಕರಿದಾರರು

೭ ಗುಮ್ಮೇರು: ತಳವಾರಿಕೆ ಮಾಡುವವರು

ಪಾಮ್ಲೋರು ಬೆಡಗಿನ ಮೂಲತಃ ಒಂದೇ ಕುಟುಂಬದ ಅವಿಭಕ್ತ ಕುಟುಂಬಕ್ಕೆ ಸೇರಿದ ಅಣ್ಣತಮ್ಮಂದಿರು ಪರಸ್ಪರ ಜಗಳವಾಡದಂತೆ ಒಪ್ಪಿಗೆಯಮೇಲೆ ಹಂಚಿಕೊಂಡ ಕೆಲಸವಾಗಿರಬೇಕು. ಆ ಅಣ್ಣ ತಮ್ಮಂದಿರಿಗೆ ಸೇರಿದ ವಂಶಸ್ಥರೇ ತಮ್ಮ ಮೂಲಪುರುಷರು ಹಂಚಿಕೊಂಡ ವೃತ್ತಿಗಳನ್ನೇ ಇಂದಿಗೂ ದೇವರ ಹೆಸರಿನಲ್ಲಿ ದೈವದ ಕಾರ್ಯದ ವೃತ್ತಿಯಾಗಿ ಮುಂದುವರೆದಿವೆ. ಪ್ರಸ್ತುತ ದೈವದ ಗುಗ್ಗರಿ ಹಬ್ಬದಲ್ಲಿ ಈ ಏಳು ವಂಶಸ್ಥರು ತಮ್ಮ ವಂಶದ ಕಸುಬನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಏಳು ವಂಶದವರಲ್ಲಿ ನಿರಂತರವಾಗಿ ಕಾಯಕ ಮಾಡುವವರು ಕಿಲಾರಿಗಳನ್ನು ಮೇಯಿಸುವ, ಉಸ್ತುವಾರಿ ನೋಡಿಕೊಳ್ಳುವ ಮನೆಯವರು ಹಾಗೂ ಪೂಜಾಕಾರ್ಯವನ್ನು ಚಾಚೂ ತಪ್ಪದಂತೆ ಮಾಡಿಕೊಂಡು ಬರುವವರು. ಈ ಎರಡೂ ಮನೆತನಗಳವರು ಆ ಕಾರ್ಯಗಳಿಗಾಗಿ ತಮ್ಮ ಮನೆಯ ಒಬ್ಬೊಬ್ಬ ವ್ಯಕ್ತಿಯನ್ನು ಮೀಸಲಾಗಿರಿಸಿರುವುದು. ಪೂಜಾರಿ ಮನೆಯವರು ತಮ್ಮ ಮನೆಯ ವ್ಯಕ್ತಿಯೊಬ್ಬನನ್ನು ಪೂಜಾಕಾರ್ಯಕ್ಕೆ ನೇಮಿಸಿಬಿಟ್ಟಿದ್ದಾರೆ. ಪೂಜಾರಿಗೆ ಅತ್ಯಂತ ಗೌರವದ ಸ್ಥಾನವಿದೆ ಮತ್ತು ಅವನು ತಮ್ಮ ಹಿರೀಕರಂತೆ ಕೂದಲನ್ನು ತೆಗೆಯದೆ ಉದ್ದ ಕೂದಲನ್ನು ಬಿಟ್ಟಿರುತ್ತಾನೆ ಮತ್ತು ಬಿಳಿಯ ಧೋತರ, ಬಿಳಿಯ ಸೆಲ್ಲೆ ಹಾಕಿಕೊಂಡಿರುತ್ತಾನೆ. ಪೂಜಾ ಕಾರ್ಯದ ಹೊರತಾಗಿ ಬೇರೆ ಕೆಲಸ ಮಾಡುವುದಿಲ್ಲ. ಪೂಜಾರಿ ತೀರಿಕೊಂಡರೆ ಅವನ ಸ್ಥಾನದಲ್ಲಿ ತಮ್ಮ ಮನೆತನದ ವ್ಯಕ್ತಿಯೊಬ್ಬನಿಗೆ ಯಜಮಾನನ ಸಮ್ಮುಖದಲ್ಲಿ ಧೀಕ್ಷೆ ನೀಡಿ (ಪಟ್ಟಾಭಿಷೇಕ) ಪೂಜಾಕಾರ್ಯಕ್ಕೆ ನೇಮಿಸಲಾಗುತ್ತದೆ. ಅದೇ ರೀತಿ ದನಗಳನ್ನು ನೋಡಿಕೊಳ್ಳುವ ವ್ಯಕ್ತಿಗೂ ಪವಿತ್ರವಾದ ಸ್ಥಾನವಿದೆ. ಅವನು ದೇವರ ದನಗಳನ್ನು ಕಾಯುವುದರ ಹೊರತಾಗಿ ಬೇರೆ ಕಾರ್ಯ ಮಾಡುವಂತಿಲ್ಲ. ದೇವರ ದನಗಳನ್ನು ನೋಡಿಕೊಳ್ಳುವ ವ್ಯಕ್ತಿಯು ತೀರಿಕೊಂಡರೆ ಅದೇ ಕುಟುಂಬದ ಬೇರೊಬ್ಬ

ವ್ಯಕ್ತಿಯನ್ನು ಧೀಕ್ಷೆ ನೀಡುವ ಮೂಲಕ ದನಗಳನ್ನು ಕಾಯುವ ಕಾರ್ಯಕ್ಕೆ ನೇಮಿಸಲಾಗುತ್ತದೆ. ದೇವರ ದನಗಳಿಂದ ಬರುವ ಹಾಲು, ಬೆಣ್ಣೆ, ತುಪ್ಪ, ಮೊಸರು ಕೊನೆಗೆ ಅದರ ಗೊಬ್ಬರ ಯಾವುದನ್ನೂ ಮಾರಿಕೊಳ್ಳುವಂತಿಲ್ಲ. ಹೆಚ್ಚೆಂದರೆ ದನಕಾಯುವ ಕುಟುಂಬದವರು ಹಾಲುಹೈನ ಬಳಸುತ್ತಾರೆ ಮತ್ತು ದನಗಳಿಂದ ಬಂದ ಗೊಬ್ಬರವನ್ನು ತಮ್ಮ ಹೊಲಗಳಿಗೆ ಬಳಕೆ ಮಾಡಿಕೊಳ್ಳುತ್ತಾರೆ. ಅಂದಿನಿಂದ ಇಂದಿಗೂ ಇದು ಅಲಿಖಿತ ನಿಯಮವಾಗಿ ಜಾರಿಗೊಂಡಿದೆ.

ಈ ಒಂದು ಗುಂಪಿಗೆ ಸೇರಿದ ಪುಟ್ಟಿಯವರು ದೇವರ ಕೆಲಸವನ್ನು ಚಾಚುತಪ್ಪದೆ ಗುಗ್ಗಿರಿ ಹಬ್ಬದಲ್ಲಿ ನೇರವಾಗಿ ಪಾಲ್ಗೊಳ್ಳುತ್ತಾರೆ.

ಗುರುನಾಥ ದೈವದ ಕುರಿತು ಐತಿಹ್ಯ

ಗುರುನಾಥ ದೈವದ ಕುರಿತು ಐತಿಹ್ಯವೊಂದು ಮ್ಯಾಸನಾಯಕರಲ್ಲಿದೆ. ಪಾಮುಂಡ್ಲ ವಂಶದ ಮೂಲಪುರುಷ ಯರಮಂಚನಾಯಕ. ಯರಮಂಚನಾಯಕನು ಕಾಡಿನಲ್ಲಿ ತಮ್ಮ ದನ ಮೇಯಿಸುತ್ತಾ ಹೋಗುತ್ತಿದ್ದಾಗ ಸ್ಥಳೀಯ ರಾಜನೊಬ್ಬ ತುಂಬಾ ವೈಭವದಿಂದ ಯಜ್ಞಯಾಗಾದಿಗಳನ್ನು ಹಮ್ಮಿಕೊಂಡಿರುತ್ತಾನಂತೆ. ರಾಜನು ಪುರೋಹಿತರನ್ನು ಕರೆಸಿ ಮುಗಿಲು ಮುಟ್ಟುವಂತೆ ಹೊಗೆಯಬ್ಬಿಸಿ ತುಂಬಾ ವೈಭವದಿಂದ ಯಜ್ಞ ಮಾಡುವುದನ್ನು ಕೋಲೂರಿ ನೋಡುತ್ತ ನಿಂತ ದನಗಾಹಿ ಯರಮಂಚನಾಯಕನಿಗೆ ಶಿಕ್ಷೆ ವಿಧಿಸಲಾಗುತ್ತದಂತೆ. ರಾಜನ ಆಜ್ಞೆ ಪಾಲಿಸುವ ಸೇವಕರು ಯರಮಂಚನಾಯಕನನ್ನು ಕಾದಿರುವ ಸುಣ್ಣದ ಬಾನಿಯಲ್ಲಿ ಹಾಕಿ ಬೇಯಿಸಿ ಆ ಬಾನಿಯನ್ನು ಮುಚ್ಚಿಬಿಡುತ್ತಾರಂತೆ. ತರುವಾಯ ಸ್ವಲ್ಪ ಸಮಯದ ನಂತರ ಯರಮಂಚನಾಯಕ ಸತ್ತಿರುವನೋ ಬದುಕಿರುವನೋ ಎಂದು ನೋಡಲು ಸುಣ್ಣದ ಬಾನಿಯ ಮುಚ್ಚಳ ಸರಿಸಿ ನೋಡುತ್ತಾರಂತೆ. ಬಾನಿಯಲ್ಲಿ ಯರಮಂಚನಾಯಕ ಕಾಣದೆ ಅವನ ಬದಲಿಗೆ ಜೀವಂತವಾದ ಹಾವು, ಚೇಳುಗಳು ಬಾನಿಯಿಂದ ಹೊರಬರುತ್ತವಂತೆ. ಯರಮಂಚನಾಯಕನ ಪವಾಡವನ್ನು ನೋಡಿದ ರಾಜನು ತನ್ನ ಅಸ್ಥಾನದಲ್ಲಿ ಗದ್ದಿಗೆ ಮಾಡಿ ಗುರುವಯ್ಯ ಯರಮಂಚನಾಯಕನನ್ನು ಪೂಜಿಸತೊಡಗಿದನಂತೆ. ಈ ಯರಮಂಚನೇ ಗುರುನಾಥನಾಗಿ ಪೂಜೆಗೊಳ್ಳುತ್ತಿರುವುದು. ಅವನ ದನಗಳನ್ನೇ ಇಂದಿಗೂ ಪಾಮುಂಡ್ಲ ಬೆಡಗಿನವರು ಕಾಯುತ್ತಿರುವುದು ಎನ್ನುವ ನಂಬಿಕೆ ಮ್ಯಾಸಬೇಡರಲ್ಲಿದೆ.

ಜುಟ್ಟನಿಂಗನಹಟ್ಟಿಯ ಪಾಮುಂಡ್ಲ ಬೆಡಗಿನ ಐದು ಕುಟುಂಬದವರು ಕಿಲಾರಿ ದನಗಳ ಸೇವೆಯನ್ನು ವರ್ಷಕ್ಕೊಬ್ಬರಂತೆ ಮಾಡುತ್ತಾರೆ. ಈ ದನಗಳ ಚಾಕರಿ ಮಾಡುವ ವ್ಯಕ್ತಿಗೆ ವರ್ಷಕ್ಕೊಮ್ಮೆ ಭಕ್ತರು ಕಾಣಿಕೆ ರೂಪದಲ್ಲಿ ತಮಗೆ ತಿಳಿದಷ್ಟು ಕಾಣಿಕೆ ಸಲ್ಲಿಸುತ್ತಾರೆ. ಈ

ಕಾಣಿಕೆಯ ಹಣವನ್ನು ದನಗಳಿಗಾಗಿಯೇ ಉಪಯೋಗಿಸಲಾಗುತ್ತದೆ. ಕಿಲಾರಿ ದನಗಳು ಸತ್ತರೆ ಅವುಗಳನ್ನು ತುಂಬಾ ಪೂಜನೀಯವಾಗಿ ಶವಸಂಸ್ಕಾರ ಮಾಡುವ ಪದ್ಧತಿ ಇವರಲ್ಲಿದೆ. ಅಂತಹ ಕಾರ್ಯಕ್ಕೆ ಕಾಣಿಕೆ ರೂಪದ ಹಣ ವ್ಯಯ ಮಾಡಲಾಗುತ್ತದೆ.

ಗುಗ್ಗರಿ ಹಬ್ಬದ ಮೂರುದಿನ ಜುಟ್ಟನಿಂಗನಹಟ್ಟಿಯಿಂದ ಪೂಜಾರಹಳ್ಳಿಗೆ ಕಿಲಾರಿ ದನಗಳನ್ನು ಹೊಡೆದುಕೊಂಡು ಹೋಗಲಾಗುತ್ತದೆ. ಪೂಜಾರಹಳ್ಳಿಯಲ್ಲಿ ಭಕ್ತರು ಮೀಸಲಿನಿಂದ ತಂದಂತಹ ದವಸಧಾನ್ಯಗಳನ್ನು (ವಿಶೇಷವಾಗಿ ಹುರಳಿ) ಮೀಸಲಿಂದ ಬೇಯಿಸುತ್ತಾರೆ. ಹೀಗೆ ಬೇಯಿಸಿದ ಗುಗ್ಗರಿಯನ್ನು ದೇವರಿಗೆ ನೈವೇಧ್ಯ ಸಲ್ಲಿಸಿ ನಂತರ ಕಿಲಾರಿಗಳಿಗೆ ಪೂಜೆಮಾಡಿ ಅವುಗಳಿಗೆ ತಿನ್ನಲು ನೀಡುತ್ತಾರೆ. ದನಗಳು ತಿಂದುಬಿಟ್ಟ ಗುಗ್ಗರಿಯನ್ನು ತರುವಾಯ ಭಕ್ತಾದಿಗಳು ಪ್ರಸಾದ ರೂಪದಲ್ಲಿ ಸ್ವೀಕರಿಸುತ್ತಾರೆ. ಹಬ್ಬದ ಕೊನೆಯ ದಿನ ಕಿಲಾರಿ ದನಗಳು ಗುರುನಾಥನ ಗದ್ದುಗೆಯನ್ನು ಮೂರುಸಲ ಸುತ್ತುತ್ತವೆ. ಹೀಗೆ ಮೂರುಸಲ ಪ್ರದಕ್ಷಿಣೆಯನ್ನು ಹಾಕಿದ ತರುವಾಯ ಹಲಗೆ, ಡೊಳ್ಳುಗಳನ್ನು ಬಾರಿಸುತ್ತ ಮೆರವಣಿಗೆಯಲ್ಲಿ ಜುಟ್ಟನಿಂಗನಹಟ್ಟಿಗೆ ಕಿಲಾರಿಗಳನ್ನು ತಲುಪಿಸಿಬರಲಾಗುತ್ತದೆ.

ಗುಗ್ಗರಿ ಹಬ್ಬದಲ್ಲಿ ದನಗಳು ತುಂಬಾ ಇಷ್ಟಪಡುವ ಹುರುಳಿಗೆ ಮಹತ್ವವಾದ ಸ್ಥಾನವಿದೆ. ಹುರುಳಿಯನ್ನು ಬೇಯಿಸಿ ಕಿಲಾರಿ ದನಗಳಿಗೆ ತಿನ್ನಿಸುವ ಸಂಭ್ರಮದ ಆಚರಣೆಯೇ ಗುಗ್ಗರಿ ಹಬ್ಬವಾಗಿದೆ.

ಮಾಕನಡಕಿನ ಕಂಚೋಬಳೇಶನ ಕಿಲಾರಿ.

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ಮಾಕನಡಕಿನಲ್ಲಿ ಕಂಚೋಬಳೇಶನ ಕಿಲಾರಿಗಳಿವೆ. ಮಂಡ್ಲರ ಬೆಡಗಿನವರ ಮೂಲ ದೈವ ಕಂಚೋಬಳೇಶ. ಈ ಕಂಚೋಬಳೇಶನ ಹೆಸರಿನಲ್ಲಿ ಇಂದು ಕೇವಲ ನಾಲ್ಕು ಕಿಲಾರಿ ಎತ್ತುಗಳು ಮಾತ್ರ ಉಳಿದಿವೆ. ಮಂಡ್ಲರ ಬೆಡಗಿನ ಉಸ್ತುವಾರಿಯಲ್ಲಿ ಈ ಕಿಲಾರಿಗಳಿವೆಯಾದರೂ ಇವುಗಳನ್ನು ನಿಯಮಿತವಾಗಿ ಕಾಯುವುದಿಲ್ಲ. ದೇವರ ಹೆಸರಿನಲ್ಲಿರುವ ಈ ಕಿಲಾರಿ ಎತ್ತುಗಳು ದೇವರ ಗೂಳಿಗಳಂತೆ ಊರಲ್ಲಿ ತಮ್ಮ ಪಾಡಿಗೆ ತಾವು ಮೇಯುತ್ತವೆ. ಇವು ಊರುಬಿಟ್ಟು ಬೇರೆಕಡೆ ಹೋಗದಂತೆ ಕಣ್ಗಾವಲನ್ನು ಮಂಡ್ಲರ ಕುಟುಂಬದವರು ಮಾಡುತ್ತಾರೆ. ಅದರಾಚೆಗೆ ಇವುಗಳ ಕುರಿತು ಹೆಚ್ಚಿನ ಕಾಳಜಿಯನ್ನೇನೂ ಮಾಡಲಾಗುವುದಿಲ್ಲ. ಕಂಚೋಬಳೇಶನ ಗುಗ್ಗರಿ ಹಬ್ಬದಲ್ಲಿ ಮಾತ್ರ ಈ ಎತ್ತುಗಳಿಗೆ ವಿಶೇಷವಾಗಿ ಅಲಂಕರಿಸಲಾಗುತ್ತದೆ. ಮೂರು ದಿನ ನಡೆಯುವ ಗುಗ್ಗರಿ ಹಬ್ಬದಲ್ಲಿ ಈ ದನಗಳಿಗೆ ವಿಶೇಷವಾದ ಮನ್ನಣೆ ದೊರೆಯುತ್ತದೆ. ಗುಗ್ಗರಿ ಹಬ್ಬದ ತರುವಾಯ ಕಿಲಾರಿ ಎತ್ತುಗಳು

ಊರೊಳಗೆ ಸುತ್ತುತ್ತಾ ಮೇವು ಕಂಡಲ್ಲಿ ಮೇಯುತ್ತ ಇರುತ್ತವೆ. ಯಾವ ಹೊಲಕ್ಕೆ ನುಗ್ಗಲಿ ಅಥವಾ ಯಾರದೇ ಮೇವಿಗೆ ಬಾಯಿಹಾಕಿದರೂ ಕಿಲಾರಿಗಳನ್ನು ಯಾರೂ ಬೈಯುವುದಿಲ್ಲ ಮತ್ತು ಹೊಡೆಯುವುದಿಲ್ಲ. ಅವುಗಳಿಗೆ ಬೈದರೆ ಅಥವಾ ಹೊಡೆದರೆ ದೈವಕ್ಕೆ ಹೊಡೆದಂತೆ ಎಂದು ಜನರು ಭಾವಿಸುತ್ತಾರೆ. ಕಿಲಾರಿಗಳು ತಮ್ಮ ಹೊಲಗಳಿಗೆ ನುಗ್ಗಿ ಮೇಯ್ದರೆ ಆ ವರ್ಷ ತಮ್ಮ ಹೊಲ ತುಂಬಾ ಹುಲುಸಾಗಿ ಬೆಳೆಯುತ್ತದೆಂಬ ನಂಬಿಕೆ ಸ್ಥಳೀಯರಲ್ಲಿದೆ. ಒಟ್ಟಾರೆಯಾಗಿ ಕಿಲಾರಿ ದನಗಳಿಗೆ ಗೌರವದ ಸ್ಥಾನ ಅಲ್ಲಿದೆ.

ದೇವರ ಎತ್ತುಗಳು	ಸ್ಥಳ	ಸಂಖ್ಯೆ
ಗುರುನಾಥ ದೇವರ ಕಿಲಾರಿ	ಜುಟ್ಟನಿಂಗನಹಟ್ಟಿ	೩೦
ಕಂಚೋಬಳೇಶನ ಕಿಲಾರಿ	ಮಾಕನಾಡುಕು	೪
ಒಟ್ಟು		೩೪

೩.೧೦ ಅಧ್ಯಯನಕ್ಕೊಳಪಡಿಸಿದ ಮ್ಯಾಸಬೇಡರ ಕುಟುಂಬಗಳಲ್ಲಿ ಪಶುಪಾಲನೆ ಮಾಡುವವರ ವಿವರ

ಮ್ಯಾಸಬೇಡರಲ್ಲಿ ಪಶುಪಾಲನೆಗೆ ಅತೀ ಮಹತ್ವದ ಸ್ಥಾನವಿದೆ. ಅದರಲ್ಲಿಯೂ ಕೃಷಿ ಚಟುವಟಿಕೆಗೆ ಬಳಕೆಗೊಳ್ಳುವ ದನಗಳ ಪಾಲನೆಯೇ ಅವರಿಗೆ ಅತೀ ಮುಖ್ಯವೆಂಬುದನ್ನು ಅವರ ಗುಗ್ಗರಿ ಹಬ್ಬ ಹಾಗೂ ಕಿಲಾರಿ ದನಗಳ ಪಾವಿತ್ರ್ಯದ ಕುರಿತಾಗಿ ಆ ಸಮುದಾಯಕ್ಕಿರುವ ನಂಬಿಕೆಯೇ ತಿಳಿಸಿಕೊಡುತ್ತದೆ. ಆದರೆ ಆಧುನಿಕ ಬದುಕಿಗೆ ಸ್ಥಿತ್ಯಂತರಗೊಂಡ ಈ ಸಮುದಾಯದ ಜನ ಪಶುಪಾಲನೆಯನ್ನು (ಕಿಲಾರಿ ದನಗಳನ್ನು ಹೊರತುಪಡಿಸಿ) ಅದರಲ್ಲಿಯೂ ದನಗಳ ಸಾಕಣೆಯಿಂದ ದೂರ ಸರಿಯುತ್ತಿರುವುದು ಕಂಡುಬರುತ್ತದೆ.

ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಪಶುಪಾಲಕರು ಮತ್ತು ಪಶುಗಳ ವಿವರ

ಊರಿನ ಹೆಸರು	ಪಶುಪಾಲಕರ ಹಸರು	ದನ	ಎಮ್ಮೆ	ಕುರಿ	ಮೇಕೆ	ಒಟ್ಟು
ಚೌಡಾಪುರ	ಬಿ,ಚಂದ್ರಪ್ಪ			೬೦		೬೦
	ಅಂಜಿನಪ್ಪ			೧೫	೪	೧೯
	ಮಾರಪ್ಪ	೧೩				೧೩
ಚಿರಿಬಿ	ಚೌಡಪ್ಪ		೬೧			೬೧
ಪಾಲಯ್ಯನಕೋಟೆ	ಕೆ.ಬಸಪ್ಪ			೬೦		೬೦
	ಅನಂದ.ಕೆ			೧೫		೧೫
	ಮೂಗಪ್ಪ.ಕೆ			೧೫	೮	೨೩
	ಸಿದ್ದಪ್ಪ.ಎಮ್			೧೫	೪	೧೯
ಎಂಬಿಆಯ್ಯನಹಳ್ಳಿ	ಮೂರ್ತಿ			೧೦		೧೦
	ಓಬಳೇಶ			೨೦	೧೦	೩೦
ಐಗಳಮಲ್ಲಪುರ	ಗಂಗಮ್ಮ			೧೦	೫	೨೫
ಕ್ಯಾಸನಕೇರಿ	ಮಲ್ಲಿಕಾರ್ಜನ	೫	೫			೧೦
ಯರಮನಹಳ್ಳಿ	ಮಹೇಸ್ವರಪ್ಪ	೯				೯
ನಿಂಬಳಗೇರಿ	ಮುಪ್ಪೆನಪ್ಪ			೪೦		೪೦
	ಅಂಜಿನಪ್ಪ			೬೦		೬೦
ಗುಣಸಾಗರ	ಶ್ರೀಪತಿ	೧೮				೧೮
ಹಾರಕಬಾವಿ	ಕೆಬಿಬಸವರಾಜ	೪	೬			೧೦
	ಒಟ್ಟು	೪೯	೭೨	೩೨೦	೩೧	೪೮೨

ಒಟ್ಟು ೨೦ ಗ್ರಾಮಗಳಿಂದ ಗ್ರಾಮವೊಂದಕ್ಕೆ ಹತ್ತು ಕುಟುಂಬಗಳಂತೆ ೨೦೦ ಕುಟುಂಬಗಳನ್ನು ಸಂದರ್ಶನಕ್ಕೆ ಒಳಪಡಿಸಲಾಗಿದೆ. ೨೦೦ ಕುಟುಂಬಗಳಲ್ಲಿ ಚೌಡಾಪುರ, ಕ್ಯಾಸನಕೆರೆ, ಯರಮ್ಮನಹಳ್ಳಿ, ಗುಣಸಾಗರ, ಹಾರಕಬಾವಿ ಎನ್ನುವ ಐದು ಗ್ರಾಮಗಳಿಂದ ಐದು ಕುಟುಂಬಗಳು ಮಾತ್ರ ಕೇವಲ ೪೯ ದನಗಳನ್ನು ಮಾತ್ರ ಸಾಕಲಾಗಿದೆ. ಈ ೪೯ ದನಗಳಲ್ಲಿ ೧೨ ಎತ್ತುಗಳಾಗಿದ್ದರೆ ೨೬ ಆಕಳಾಗಿವೆ. ಇನ್ನುಳಿದ ಹನ್ನೊಂದು ಕರುಗಳಾಗಿವೆ.

ಚಿರಬಿ ೬೧, ಕ್ಯಾಸನಕೆರೆ ೫, ಹಾರಕಬಾವಿ ೬ ಒಟ್ಟು ಮೂರು ಗ್ರಾಮಗಳ ಮೂರು ಕುಟುಂಬಗಳು ೭೨ ಎಮ್ಮೆಗಳನ್ನು ಸಾಕಿದ್ದಾರೆ. ಪಾಲಯ್ಯನಕೋಟೆಯ ನಾಲ್ಕು ಕುಟುಂಬಗಳಲ್ಲಿ ಒಂದು ಕುಟುಂಬ ಮಾತ್ರ ೬೦ ಹಾಗೂ ಇನ್ನುಳಿದ ಮೂರು ಕುಟುಂಗಳು ತಲಾ ೧೫ರಂತೆ ಒಟ್ಟು ೧೦೫ ಕುರಿ ಸಾಕಿದ್ದಾರೆ. ಇನ್ನು ಮೇಕೆಗಳ ಸಾಕಣೆಯು ಕ್ಷೇತ್ರಧ್ಯಯನಕ್ಕೆ ಒಳಪಟ್ಟ ಕುಟುಂಬಗಳು ಎಷ್ಟರಮಟ್ಟಿಗೆ ಮೇಕೆ ಸಾಕಣಿಕೆ ಮಾಡುತ್ತಿವೆಯಂಬುದನ್ನು ನೋಡಲಾಯಿತು. ಚೌಡಾಪುರದ ಒಂದು ಕುಟುಂಬವು ೪ ಮೇಕೆ, ಪಾಲಯ್ಯನಕೋಟೆಯ ಎರಡು ಕುಟುಂಬಗಳಲ್ಲಿ ಒಂದು ಕುಟುಂಬ ೪ ಹಾಗೂ ಮತ್ತೊಂದು ಕುಟುಂಬ ೮, ಎಂ.ಬಿ. ಅಯ್ಯನಹಳ್ಳಿಯ ಒಂದು ಕುಟುಂಬ ೧೦, ಐಗಳ ಮಲ್ಲಾಪುರ ೫ ಹೀಗೆ ನಾಲ್ಕು ಗ್ರಾಮಗಳ ೫ ಕುಟುಂಬಗಳು ತಮ್ಮ ಕುರಿಗಳೊಂದಿಗೆ ಒಟ್ಟು ೩೧ ಮೇಕೆಗಳನ್ನು ಮಾತ್ರ ಸಾಕಿವೆ.

ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಒಟ್ಟು ೨೦ ಗ್ರಾಮಗಳಲ್ಲಿ ೧೦ ಗ್ರಾಮಗಳಲ್ಲಿ ಮಾತ್ರ ಪಶುಪಾಲನೆ ಕಂಡುಬರುತ್ತದೆ. ಹತ್ತು ಗ್ರಾಮಗಳ ನೂರು ಕುಟುಂಬಗಳಲ್ಲಿ ೧೭ ಕುಟುಂಬಗಳಲ್ಲಿ ಮಾತ್ರ ವಿವಿಧ ರೀತಿಯ ೪೮೨ ಪಶುಸಂಪತ್ತು ಇವೆ. ಒಟ್ಟಾರೆಯಾಗಿರುವ ಈ ಪಶುಸಂಪತ್ತಿನಲ್ಲಿ ಶೇಕಡ ೧೦.೧೬ ದನ, ಶೇಕಡ ೧೪.೯೩ ಎಮ್ಮೆ, ಶೇಕಡ ೬೬. ೪೦ ಕುರಿ, ಶೇಕಡ ೬.೩೪ ಮೇಕೆಗಳು ಇವೆ. ಅತ್ಯಂತ ಕಡಿಮೆ ಪ್ರಮಾಣದಲ್ಲಿ ಮೇಕೆಗಳಿದ್ದರೆ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಕುರಿಗಳಿವೆ. ಇವುಗಳ ಹೊರತಾಗಿ ಎರಡನೇ ಸ್ಥಾನದಲ್ಲಿ ಎಮ್ಮೆ, ಮರನೇ ಸ್ಥಾನದಲ್ಲಿ ದನಗಳಿವೆ.

ಕ್ಷೇತ್ರಕಾರ್ಯದಲ್ಲಿ ದೊರೆತ ಮ್ಯಾಸಬೇಡ ಕುಟುಂಬಗಳ ಚಿತ್ರಣವನ್ನು ಗಮನಿಸಿದಾಗ ಮ್ಯಾಸಬೇಡರು ತಮ್ಮ ಮೂಲ ಕಸುಬಾದ ದನಗಳ ಸಾಕಣೆಯನ್ನು ದೂರಸರಿಸಿದ್ದಾರೆ ಮತ್ತು ಬೇರೆ ರೀತಿಯ ಲಾಭದಾಯಕ ಪ್ರಾಣಿಯ ಸಾಕಣೆಗಳ ಕಡೆಗೆ ಮನಸ್ಸು ಮಡಿರುವುದು ಕಂಡುಬರುತ್ತದೆ.

ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಒಟ್ಟು ೨೦ ಗ್ರಾಮಗಳಲ್ಲಿ ೧೦ ಗ್ರಾಮದ ೧೭ ಕುಟುಂಬಗಳು ಮಾತ್ರ ವಿವಿಧ ಪ್ರಾಣಿಸಂಕುಲಗಳನ್ನು ಸಾಕಿದ್ದಾರೆ. ಬಹುತೇಕ ಅವೆಲ್ಲವೂ ಆರ್ಥಿಕ ಸಬಲತೆಗಾಗಿ ರೂಢಿಸಿಕೊಂಡ ಪಶುಪಾಲನಾ ವೃತ್ತಿಯಾಗಿದೆಯೇ ಹೊರತು ಸಮುದಾಯನಿಷ್ಠ ಪಶುಪಾಲನಾ ವೃತ್ತಿಯಾಗಿರದೇ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಒಟ್ಟು ೨೦೦ ಕುಟುಂಬಗಳಲ್ಲಿ ಪಶುಪಾಲನೆಗೆ ಅಂಟಿಕೊಂಡಿರುವ ಕುಟುಂಬಗಳು ಕೇವಲ ಹದಿನೇಳು ಮಾತ್ರವಾಗಿವೆ. ಅಂದರೆ ಶೇಕಡ ೮.೫೦ ಕುಟುಂಬಗಳು ಮಾತ್ರ ಪಶುಪಾಲನೆಗೆ ಅಂಟಿಕೊಂಡಿವೆ. ಅದರಲ್ಲೂ ದನಗಳನ್ನು ಸಾಕುವವರ ಪ್ರಮಾಣ ಕೇವಲ ೨.೫೦ರಷ್ಟು ಜನ ಮಾತ್ರ ಆಕಳು, ಎತ್ತುಗಳನ್ನು ಸಾಕಿದ್ದಾರೆ. ಒಟ್ಟು ಮ್ಯಾಸಬೇಡರ ೨೦೦ ಕುಟುಂಬಗಳಲ್ಲಿ ಪಶುಪಾಲನೆ ಮಾಡದೇ ದೂರವುಳಿದವರು ಶೇಕಡ ೯೧.೫೦ರಷ್ಟು ಜನರಿದ್ದಾರೆ. ಅಂದರೆ ಒಟ್ಟಾರೆಯಾಗಿ ಆಧುನಿಕತೆಯ ಭರಾಟೆಯಲ್ಲಿ ತಮ್ಮ ಮೂಲ ಮೇಯಿಸುವ ವೃತ್ತಿಯಿಂದ ಶೇಕಡ ೯೦ಕ್ಕಿಂತ ಹೆಚ್ಚಿನ ಜನ ದೂರ ಸನ್ದಿರುವುದನ್ನು ಗಮನಿಸಿದಾಗ ಗಾಭರಿಯಾಗುತ್ತದೆ.

೩.೧೧ ಪಶುಪಾಲನೆಗೆ ಹೊರತಾದ ಇತರ ವೃತ್ತಿಗಳ ವಿವರ

ಪಶುಪಾಲನೆಯು ಹಿಂದೆ ಆರ್ಥಿಕ ಮೂಲವಾಗಿತ್ತು. ಪಶುಸಂಪತ್ತನ್ನು ಯಾರು ಹೆಚ್ಚು ಹೊಂದಿರುತ್ತಾರೋ ಅವರೇ ಶ್ರೀಮಂತರೆಂದು ಪರಿಗಣಿಸಲಾಗುತ್ತಿತ್ತು. ದನಗಳನ್ನು ಭಾರತೀಯರು ಪೂಜ್ಯತೆಯಿಂದ ಕಾಣಲು ಅವು ಸಂಪತ್ತಿನ ಅಂಗವೆಂಬ ಕಾರಣಕ್ಕೇ ಇರಬೇಕು. ರಾಜಮಹಾರಾಜರ ಕಾಲದಲ್ಲಿ ಸಂಪತ್ತಿನ ಅಪಹರಣವೆಂದರೆ ದನಗಳ ಅಪಹರಣವಾಗಿರುತ್ತಿತ್ತು. ಪಾಂಡವರಿಗೆ ಆಶ್ರಯ ನೀಡಿದ ವಿರಾಟರಾಜನ ಪಶುಗಳನ್ನು ಅಪಹರಿಸಲು ಕೌರವರು ಬರುವ ಚಿತ್ರಣವೊಂದು ಮಹಾಭಾರತ ಕಥೆಯಲ್ಲಿ ಬಂದಿದೆ. ಇಲ್ಲಿ ಪಶುಗಳ ಅಪಹರಣವೆಂದರೆ ಸಂಪತ್ತಿನ ಅಪಹರಣವೆಂದೇ ಅರ್ಥ. 'ಕನ್ನಡ ಶಾಸನಗಳಲ್ಲಿ ಈ ರೀತಿ ಪಶುಗಳನ್ನು ಅಪಹರಿಸಲು ಬಂದ ಸೈನಿಕರೊಂದಿಗೆ ಹೋರಾಡಿ ತಮ್ಮ ರಾಜ್ಯದ ಪಶುಗಳನ್ನು ಕಾಪಾಡಿ ವೀರಮರಣವಪ್ಪಿದವರ ನೆನಪಿಗಾಗಿ ವೀರಗಲ್ಲುಗಳನ್ನು ನಿರ್ಮಿಸಲಾಗಿದೆ.'[೪] ಆದರೆ ಕಾಲಾಂತರದಲ್ಲಿ ಪಶುಪಾಲನೆಯಂಬುದು ಕೇವಲ ಕೃಷಿಪೂರಕ ಚಟುವಟಿಕೆಯಾಯಿತು. ಬರಬರುತ್ತಾ ಪಶುಪಾಲನೆಗೆ ಮಹತ್ವ ಕಳೆದಂತೆಲ್ಲಾ ಪಶುಪಾಲನೆ ಲಾಭದಾಯಕವಲ್ಲದ ಚಟುವಟಿಕೆಯನ್ನುವಂತಾಯಿತು. ಕೃಷಿಯ ಬಳಕೆಗೊಳ್ಳುತ್ತಿದ್ದ ದನಗಳ ಸ್ಥಾನದಲ್ಲಿ ಟ್ರಾಕ್ಟರಿನಂತಹ ಆಧುನಿಕ ಯಂತ್ರಗಳ ಪ್ರವೇಶವಾಯಿತು. ದನಗಳು ಮೂರು-ನಾಲ್ಕು ದಿನ ಮಾಡುವ ಕೆಲಸವನ್ನು ಅದಕ್ಕಿಂತ ಕಡಿಮೆ ಮೊತ್ತದಲ್ಲಿ ಒಂದೇ ದಿನದೊಳಗೆ ಈ ಯಂತ್ರಗಳು ಮಾಡಿಮುಗಿಸುತ್ತವೆ. ಇನ್ನು ಗೊಬ್ಬರದ ಸಲುವಾಗಿಯೇ ದನಗಳನ್ನು ಸಾಕುವುದು ಮರೆತಿರುವ

ಜನ ಆಧುನಿಕ ಗೊಬ್ಬರಕ್ಕೆ ಮೊರೆಹೋಗಿದ್ದಾರೆ. ಹೀಗೆ ಪಶುಗಳು ಅನುತ್ಪಾದಕವಾದವುಗಳು ಎಂಬುದಾಗಿ ತಿಳಿದ ಮನುಷ್ಯರು ಪಶುಪಾಲನೆಯಿಂದ ದೂರ ಸರಿದರು. ಇಂದು ಅಕಸ್ಮಾತ್ ಪಶುಪಾಲನೆಯಂದರೆ ಆರ್ಥಿಕವಾಗಿ ಸ್ವಲ್ಪ ಲಾಭಕೊಡುವ ಕುರಿ, ಮೇಕೆಗಳನ್ನು ಕೆಲವು ಕುಟುಂಬಗಳು ಸಾಕುತ್ತವೆ. ಇದನ್ನು ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯೇ ತಿಳಿಸುತ್ತದೆ. ಎರಡನೇದಾಗಿ ಎಮ್ಮೆಗಳನ್ನು ಕೇವಲ ಹಾಲೋತ್ಪಾದನೆಯ ಅಂಗವಾಗಿ ಮಾತ್ರ ನೋಡಲಾಗುತ್ತದೆ. ಅದರಾಚೆಗೆ ದನಗಳನ್ನು ಸಾಕಿದವರು ತಮ್ಮ ಕೃಷಿ ಚಟುವಟಿಕೆಗಳ ಹಿಂದಿನ ಬದುಕಿಗೆ ಅಂಟಿಕೊಂಡ ಕೆಲವೇ ಕೆಲವು ಕುಟುಂಬಗಳು ಅಂಟಿಕೊಂಡಿವೆ.


೩.೧೧ ಪಶುಪಾಲನೆಗೆ ಹೊರತಾದ ಇತರ ವೃತ್ತಿಗಳ ವಿವರ

ಕಸುಬುಗಳು	ಗಂಡು	ಹೆಣ್ಣು	ಒಟ್ಟು
ಕೃಷಿ	೧೭೫	೧೩	೧೮೮
ಕೃಷಿಕೂಲಿ	೩೧೭	೨೦೨	೫೧೯
ಸರ್ಕಾರಿ	೪	೦	೪
ಖಾಸಗಿ	೪	೨	೬
ಇತರೆ	೨೧	೨	೨೩
ಒಟ್ಟು	**೫೨೧**	**೨೧೯**	**೭೪೦**

ಒಟ್ಟು ೨೦೦ ಕುಟುಂಬಗಳಲ್ಲಿ ಕೇವಲ ಶೇಕಡ ೮.೫೦ರಷ್ಟು ಜನ ಮಾತ್ರ ಎಲ್ಲಾ ರೀತಿಯ (ಎಮ್ಮೆ, ಕುರಿ, ಆಡು, ದನ ಇತ್ಯಾದಿ) ಪಶುಪಾಲನೆಯಲ್ಲಿ ತೊಡಗಿವೆ. ಅದರಾಚೆಗೆ ದನಗಳನ್ನು ಸಾಕಿದವರ ಪ್ರಮಾಣ ಅತ್ಯಂತ ಕಡಿಮೆ ಇದೆ. ಇಲ್ಲಿ ಪೂರ್ಣ ಪ್ರಮಾಣದ ಕೃಷಿಗೇ ಅಂಟಿಕೊಳ್ಳದೆ ಪಶುಪಾಲನೆಯನ್ನು ತಮ್ಮ ಕೃಷಿಯ ಚಟುವಟಿಕೆಯೊಂದಿಗೆ ಇರಿಸಿಕೊಳ್ಳಲಾಗಿದೆ.

ಮ್ಯಾಸ ಬೇಡರಲ್ಲಿ ಬಹುತೇಕ ತುಂಡುಭೂಮಿ ಹೊಂದಿದವರ ಪ್ರಮಾಣವೇ ಹೆಚ್ಚು. ವಿಶೇಷವಾಗಿ ಕೂಡ್ಲಿಗಿಯಂತಹ ಹಿಂದುಳಿದ ಮಳೆಯಾಶ್ರಿತ ಕೃಷಿ ಚಟುವಟಿಕೆಯಂಬುದು ಕೇವಲ ಅರೆಕಾಲಿಕವಾದ ವೃತ್ತಿಯಾಗಿದೆ. ವರ್ಷದಲ್ಲಿ ಬರುವ ಒಂದೆರಡು ಮಳೆಗಳನ್ನು ನೆಚ್ಚಿಕೊಂಡು ಕೃಷಿ ಮಾಡಬೇಕು. ಅಕಸ್ಮಾತ್ ಮಳೆ ಕಾಲಕಾಲಕ್ಕೆ ಸರಿಯಾಗಿ ಬಂದರೆ ಬಿತ್ತಿದ ಫಲ ದೊರೆಯುತ್ತದೆ. ಮಳೆ ಕೈಕೊಟ್ಟರೆ ಬಿತ್ತಿದ ಫಲವೂ ಮಣ್ಣುಪಾಲಾಗುತ್ತದೆ. ಹೀಗೆ ಮಳೆಯನ್ನೇ ನೆಚ್ಚಿಕೊಂಡು ಕೃಷಿ ಮಾಡುವ ರೈತರು ಮಳೆಗಾಲದ ಹೊರತಾದ ಇತರ ದಿನಗಳಲ್ಲಿ ಕೂಲಿಯನ್ನರಸಿ ಕಾಫಿ ಸೀಮೆಯಂದೆ ಗುರುತಿಸುವ ಚಿಕ್ಕಮಗಳೂರು, ಕೊಡಗಿಗೆ ಹೋಗುತ್ತಾರೆ ಇಲ್ಲವೇ ಇತರ ಕೂಲಿಗಳನ್ನು ಹುಡುಕಿಕೊಂಡು ಮಂಗಳೂರು, ಬೆಂಗಳೂರು, ಗೋವಾ ಮುಂತಾದ ಕಡೆ ವಲಸೆ ಹೋಗುತ್ತಾರೆ.

ಕ್ಷೇತ್ರಕಾರ್ಯದಲ್ಲಿ ಸಮೀಕ್ಷೆಗೊಳಪಡಿಸಿದ ಕುಟುಂಬಗಳಲ್ಲಿ ಭೂಮಿಯನ್ನು ಹೊಂದಿದ ಮ್ಯಾಸಬೇಡರು ಒಟ್ಟು ಶೇಕಡ ೨೫.೪ರಷ್ಟಿದ್ದಾರೆ. ಕೃಷಿಯನ್ನವಲಂಭಿಸಿದವರಲ್ಲಿ ಪುರುಷರು ೧೭೫ ಹಾಗೂ ಮಹಿಳೆಯರು ೧೩ ಜನರಿದ್ದಾರೆ. ಕೃಷಿಯ ಹೊರತಾಗಿ ಕೂಲಿಕಾರ್ಮಿಕರು ಶೇಕಡ ೭೦.೧ ರಷ್ಟಿದ್ದಾರೆ. ಅಂದರೆ ಕೂಲಿಕಾರ್ಮಿಕರಲ್ಲಿ ಒಟ್ಟು ೫೧೯ ಜನರಿದ್ದಾರೆ. ಇದರಲ್ಲಿ ೩೧೭ ಪುರುಷ, ೨೦೨ ಮಹಿಳೆಯರಿದ್ದಾರೆ. ಸರ್ಕಾರಿ ವೃತ್ತಿಯನ್ನು ಅವಲಂಭಿಸಿದವರು ಕೇವಲ ನಾಲ್ಕು ಜನ (ಶೇ. ೦.೫೪) ಪುರುಷರಿದ್ದಾರೆ. ವಿವಿಧ ಖಾಸಗಿ ವಲಯಗಳಲ್ಲಿ ಕಾರ್ಯನಿರ್ವಹಿಸುವವರು ೬ (ಶೇ೦.೮೧) ಜನರಿದ್ದಾರೆ. ಇವುಗಳ ಹೊರತಾಗಿ ತರಕಾರಿ ಮಾರುವುದು, ಬೀಡಿ ಅಂಗಡಿ ಇತ್ಯಾದಿ ಇತರೆ ವೃತ್ತಿಗಳನ್ನವಲಂಭಿಸಿದವರು ಒಟ್ಟು ೨೩ ಜನರಿದ್ದಾರೆ. ಇದರಲ್ಲಿ ೨೧ ಪುರುಷ, ಇಬ್ಬರು ಮಹಿಳೆಯರಿದ್ದಾರೆ. ಒಟ್ಟಾರೆ ಮೇಲ್ಕಾಣಿಸಿದ ಎಲ್ಲಾ ವೃತ್ತಿಯವರಲ್ಲಿ ಪುರುಷ ಶೇಕಡ ೭೦, ಮಹಿಳೆ ಶೇಕಡ ೩೦ರಷ್ಟು ಪಾಲ್ಗೊಂಡಿರುವುದು ಕಂಡುಬಂದಿದೆ.



ಭೂ ಹಿಡುವಳಿ

ಪರಿಶಿಷ್ಟ ಪಂಗಡಗಳು ಹೊಂದಿರುವ ಭೂಮಿಗಳು ಸಣ್ಣ ಹಿಡುವಳಿಯ ತುಂಡು ಭೂಮಿಗಳಾಗಿವೆ. ಅದರಲ್ಲೂ ಇವರ ಕೃಷಿ ಭೂಮಿಗಳು ಕೆಳಮಟ್ಟದ ಉತ್ಪಾದನೆಯನ್ನು ನೀಡುವ ಭೂಮಿಗಳೇ ಹೆಚ್ಚಾಗಿವೆ. ಇವರು ಹೆಚ್ಚಿನ ಆದಾಯ ತರುವ ಯಾವ ಹುದ್ದೆಯಲ್ಲೂ ಇರದಿರುವುದಕ್ಕೆ ಕಾರಣ ಇವರ ಕೆಳಮಟ್ಟದ ಸಾಕ್ಷರತೆ, ವೃತ್ತಿ ಕೌಶಲ್ಯಗಳ ಕೊರತೆ ಇರುವುದರಿಂದ ಕಡಿಮೆ ಸಂಭಾವನೆ ಬರುವಂಥ ಕೆಲಸಗಳಿಗೆ ಅವರು ತಳ್ಳಲ್ಪಟ್ಟಿದ್ದಾರೆ. ಅವರ ತಲಾವಾರು ಮಾಸಿಕ ವೆಚ್ಚವು ತಮ್ಮ ಅಗತ್ಯಕ್ಕಿಂತಲೂ ಕಡಿಮೆ ಕೂಲಿ ಪಡೆಯುತ್ತಿರುವುದನ್ನು ಪ್ರತಿನಿಧಿಸುತ್ತದ[೫] ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡದವರಿಗೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿರುವ ಪರಿಶಿಷ್ಟ ಪಂಗಡದವರು ಸ್ವಲ್ಪ ಉತ್ತಮ ಸ್ಥಿತಿಯಲ್ಲಿದ್ದಾರೆ. ೨೦೦೧ ರ ಜನಗಣತಿ ಪ್ರಕಾರ ಪರಿಶಿಷ್ಟ ಪಂಗಡದವರಲ್ಲಿ ಶೇಕಡ ೭.೬ ರಷ್ಟು ಸಾಗುವಳಿದಾರರಿದ್ದಾರೆ. ಶೇಕಡ ೧೧.೮೬ ರಷ್ಟು ಕೃಷಿ ಕಾರ್ಮಿಕರಿದ್ದರೆ ಶೇಕಡ ೪.೭೦ ಯಷ್ಟು ಗೃಹ ಸಂಬಂಧಿ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ.



ಪರಿಶಿಷ್ಟ ಪಂಗಡದ ಮಹಿಳೆಯರಲ್ಲಿ ಅಧಿಕ ಮಹಿಳೆಯರು, ಅಂದರೆ ಶೇಕಡ ೫೮.೮೦ ರಷ್ಟು ಮಹಿಳೆಯರು ಗೃಹ ಸಂಬಂಧಿ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ. ಕೇವಲ ಶೇಕಡ ೫೯.೮೯ ರಷ್ಟು ಮಹಿಳೆಯರು ಮಾತ್ರ ಸಾಗುವಳಿದಾರರಾಗಿದ್ದಾರೆ.

ಮಾದರಿ ಸಮೀಕ್ಷೆಯು ತಿಳಿಸುವಂತೆ ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಶೇಕಡ ೫೭.೩೯ ರಷ್ಟು ಕುಟುಂಬಗಳು ಭೂ ಒಡೆತನ ಹೊಂದಿವೆ. ಅದರಲ್ಲಿ ಶೇಕಡ ೭೪.೩೫ ರಷ್ಟು ಒಣಭೂಮಿಯಾಗಿದೆ. ರಾಜ್ಯದಲ್ಲಿ ಬಿತ್ತನೆಗೊಳ್ಳುವ ನೀರಾವರಿ ಕೃಷಿ ಭೂಮಿಯು ಶೇಕಡ ೨೧ ರಷ್ಟು ಮಾತ್ರವಾಗಿದೆ.[೬] ೨೦೧೧ ರ ಕರ್ನಾಟಕ ಕೃಷಿ ಗಣತಿಯ ಪ್ರಕಾರ ಪರಿಶಿಷ್ಟ ಪಂಗಡದವರಲ್ಲಿ ಶೇಕಡ ೩೦.೯ ರಷ್ಟು ಅತಿ ಸಣ್ಣ ಹಿಡುವಳಿದಾರರು ಮತ್ತು ಶೇಕಡ ೧೯.೪ ರಷ್ಟು ಅರೆ ಮಧ್ಯಮ ಗಾತ್ರದ ಹಿಡುವಳಿದಾರರಿದ್ದಾರೆ ಈ ವಿಷಯದಲ್ಲಿ ಪರಿಶಿಷ್ಟ ಪಂಗಡದವರಿಗೆ ಮತ್ತು ಇತರರಿಗೆ ಅಷ್ಟೇನೂ ವ್ಯತ್ಯಾಸವಿಲ್ಲ.

ಆದರೆ ಮದ್ಯಮ (ಶೇಕಡ ೭.೯) ಮತ್ತು ದೊಡ್ಡ ಹಿಡುವಳಿಗಳ (ಶೇಕಡ ೧.೦) ಪ್ರಮಾಣ ಕಡಿಮೆ ಇದೆ. (ಮೇಲಿನ ಕೋಷ್ಟಕ ನೋಡಿ)

ಇಲ್ಲಿ ಗಮನಿಸಬೇಕಾದ ಅತಿ ಮುಖ್ಯವಾದ ಅಂಶವೆಂದರೆ ಬಹುಪಾಲು ಪರಿಶಿಷ್ಟ ಪಂಗಡಗಳು ಕಡಿಮೆ ಉತ್ಪಾದಕತೆಯ ಸಣ್ಣ ಘಟಕಗಳನ್ನು ಹೊಂದಿವೆ. ಅವು ಆರ್ಥಿಕವಾಗಿಯೂ ಲಾಭಕರವಲ್ಲ. ಆದ್ದರಿಂದಲೇ ಬಹುತೇಕ ಸಣ್ಣ ಹಿಡುವಳಿದಾರರು ಜೀವನ ನಿರ್ವಹಣೆಗಾಗಿ ಕೂಲಿ ಕಾರ್ಮಿಕ ವೃತ್ತಿಗೆ ತಳ್ಳಲ್ಪಟ್ಟಿದ್ದಾರೆ.

‘ವರಮಾನದ ವಿಚಾರವಾಗಿ ತಿಳಿಸಬಹುದೇನೆಂದರೆ ೧೯೯೯-೨೦೦೦ ಅಂಕಿ ಅಂಶಗಳ ಪ್ರಕಾರ ಬಹುಪಾಲು ಗ್ರಾಮೀಣ ಪರಿಶಿಷ್ಟ ಪಂಗಡದ ಕುಟುಂಬಗಳ ವರಮಾನದ ಮೂಲವೆಂದರೆ ಕೃಷಿ ಕಾರ್ಮಿಕರಾಗಿ ಕೆಲಸಮಾಡುವುದು. (ಶೇಕಡ ೯.೭) ಸಾಗುವಳಿ (ಶೇಕಡ ೭.೭) ಮೀನುಗಾರಿಕೆ ಹಾಗೂ ಇತರ ಸಣ್ಣ ಪುಟ್ಟ ಉದ್ದಿಮೆಗಳು (ಶೇಕಡ ೧೧.೪) ಅವರ ವರಮಾನದ ಮೂಲಗಳಾಗಿವೆ.

ನಗರ ಪ್ರದೇಶದಲ್ಲಿಯ ಪರಿಶಿಷ್ಟ ಪಂಗಡದವರ ವಾರ್ಷಿಕ ತಲಾವಾರು ವರಮಾನ ರೂ ೧೦.೯೮೭ ರಷ್ಟಾಗಿದ್ದರೆ ಗ್ರಾಮೀಣ ಪ್ರದೇಶದಲ್ಲಿಯ ಪರಿಶಿಷ್ಟ ಪಂಗಡದವರ ವಾರ್ಷಿಕ ತಲಾವಾರು ವರಮಾನ ಕೇವಲ ರೂ ೪.೭೬೮ ಆಗಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರವೆಂದರೆ ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಪಂಗಡದ ಕುಟುಂಬಗಳ ಪೈಕಿ ಶೇಕಡ

೪೦ ರಷ್ಟು ಕುಟುಂಬಗಳು ಬಡತನ ರೇಖೆಯ ಕೆಳಗಿನ ಕುಟುಂಬಗಳಾಗಿವೆ. ಇದೇ ನಗರ ಪ್ರದೇಶದ ಪರಿಶಿಷ್ಟ ಪಂಗಡದ ಕುಟುಂಬಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಪ್ರಮಾಣ ಶೇಕಡ ೨೫ ರಷ್ಟಾಗಿದೆ'[೭]

ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಪಂಗಡಗಳ ಜನರ ತಲಾವಾರು ಮಾಸಿಕ ವೆಚ್ಚವು ಅತ್ಯಂತ ಕಡಿಮೆ ಇದೆ. ಪರಿಶಿಷ್ಟ ಪಂಗಡಗಳ ತಲಾವಾರು ಮಾಸಿಕ ವೆಚ್ಚ ರೂ ೪೮೯ ಆಗಿದ್ದರೆ ಇತರರ ತಲಾವಾರು ವೆಚ್ಚ ರೂ ೫೦೦ ಆಗಿದೆ. ಇತರರ ಮಾಸಿಕ ತಲಾವಾರು ವೆಚ್ಚಕ್ಕೆ ಹೋಲಿಸಿದರೆ ಪರಿಶಿಷ್ಟ ಪಂಗಡದವರ ತಲಾವಾರು ವೆಚ್ಚವು ಅತ್ಯಂತ ಕಡಿಮೆಯಂದೇ ಹೇಳಬಹುದು. ನಗರವಾಸಿ ಪರಿಶಿಷ್ಟ ಪಂಗಡಗಳ ತಲಾವಾರು ಮಾಸಿಕ ವೆಚ್ಚವು ರೂ ೬೩೪ ಆಗಿದ್ದು ನಗರವಾಸಿ ಇತರರಿಗೆ ಹೋಲಿಸಿದರೆ ಅವರ ತಲಾವಾರು ವೆಚ್ಚದ ಪ್ರಮಾಣ ಅತ್ಯಂತ ಕಡಿಮೆಯೆನಿಸುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡಗಳು ತಮ್ಮ ಜೀವನ ನಿರ್ವಹಣೆಗಾಗಿ ಕೃಷಿ ಕೂಲಿ ಮತ್ತು ಕೃಷಿಯನ್ನೇ ಆಧರಿಸಿರುವುದರಿಂದ ಅವರ ಮಾಸಿಕ ತಲಾವಾರು ವೆಚ್ಚವು ಕಡಿಮೆಯಾಗಿರುವುದು ಸಹಜವಾಗಿದೆ. ಸಾಮಾನ್ಯವಾಗಿ ಮಳೆಯಾಶ್ರಿತ ಕೃಷಿ ಚಟುವಟಿಕೆಗಳು ವರ್ಷದಲ್ಲಿ ಕೇವಲ ಆರು ತಿಂಗಳು ಮಾತ್ರ ಚುರುಕಾಗಿರುತ್ತದೆ. ಇನ್ನುಳಿದ ಆರು ತಿಂಗಳು ಕೃಷಿಕರಿಗೆ ಬೇರೆ ಯಾವುದೇ ಕೆಲಸವಿರುವುದಿಲ್ಲ. ಅದೂ ಮಳೆ ಬಂದರೆ ಮಾತ್ರ ಕೃಷಿ ಚಟುವಟಿಕೆಗಳು ನಡೆಯುತ್ತವೆ. ಮಳೆ ಸರಿಯಾಗಿ ಬಾರದೇ ಇದ್ದರೆ ಆ ಆರು ತಿಂಗಳು ಸಹ ಅಂತಹ ಹೇಳಿಕೊಳ್ಳುವಂತಹ ಕೆಲಸಗಳು ಇರುವುದಿಲ್ಲ. ಹೀಗಾಗಿ ಅನಿಶ್ಚಿತವಾದ ದುಡಿಮೆಯನ್ನೇ ಪರಿಶಿಷ್ಟ ಪಂಗಡದವರು ನೆಚ್ಚಿಕೊಂಡಿರುಬೇಕಾಗುತ್ತದೆ. ಸಾಮಾನ್ಯವಾಗಿ ಬಳ್ಳಾರಿ ಜಿಲ್ಲೆಯಂತಹ ಬಿರು ಬಿಸಿಲ ನಾಡಲ್ಲಿ ಕೃಷಿ ಚಟುವಟಿಕೆ ಪೂರ್ಣಗೊಂಡ ತರುವಾಯ ಸಣ್ಣ ಹಿಡುವಳಿದಾರ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಜೀವನೋಪಾಯಕ್ಕಾಗಿ ಚಿಕ್ಕಮಗಳೂರು ಮುಂತಾದ ಕಡೆಯ ಕಾಫಿ ಎಸ್ಟೇಟುಗಳಲ್ಲಿ ಕೂಲಿಗಳಾಗಿ ದುಡಿಯಲು ಹೋಗುತ್ತಾರೆ. ಇಲ್ಲವಾದರೆ ಕೂಲಿ ಕೆಲಸವನ್ನು ಹುಡುಕಿಕೊಂಡು ಬೆಂಗಳೂರು, ಗೋವಾ, ಹೈದರಾಬಾದು ಮುಂತಾದ ಕಡೆ ವಲಸೆ ಹೋಗುತ್ತಾರೆ. ಬಹುತೇಕ ಈ ರೀತಿ ವಲಸೆ ಹೋಗುವ ಅನಿವಾರ್ಯತೆ ಇರುವುದರಿಂದ ಇವರ ಮಕ್ಕಳು ಶಾಲೆಗೆ ಸಮರ್ಪಕವಾಗಿ ಹೋಗಲು ಸಾಧ್ಯವಾಗುವುದಿಲ್ಲ.

ಬಳ್ಳಾರಿ ಜಿಲ್ಲೆಯಲ್ಲಿ ಕೂಡ್ಲಿಗಿಯ ಒಣಬೇಸಾಯವನ್ನು ಅವಲಂಬಿಸಿದ ಮ್ಯಾಸಬೇಡ ಹಾಗೂ ಇತರ ತಳಸಮುದಾಯದ ಕುಟುಂಬಗಳು ಗೋವಾ, ಚಿಕ್ಕಮಗಳೂರು, ಕೊಡಗು ಮುಂತಾದ ಕಡೆ ಕೂಲಿಯನ್ನು ಹುಡುಕಿಕೊಂಡು ವಲಸೆ ಹೋಗುವುದು ಸಹಜ. ಈ ರೀತಿ ವಲಸೆ ಹೋದವರು ಮರಳಿ ತಮ್ಮ ಗ್ರಾಮಗಳಿಗೆ ಮರಳುವುದು ಮಳೆಗಾಲಕ್ಕೆ.

ಪ್ರಸ್ತುತ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಇಪ್ಪತ್ತು ಗ್ರಾಮಗಳಲ್ಲಿ ನೆಲೆಸಿರುವ ೨೦೦ ಮ್ಯಾಸಬೇಡ ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಿದ್ದು ಅವರ ಆರ್ಥಿಕ ಸ್ಥಿತಿ-ಗತಿಗಳನ್ನು ಇಲ್ಲಿ ಗಮನಿಸಲಾಗಿದೆ.

